ಮಂಗಳವಾರ, ಜೂನ್ 22, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 173 | ಪುಟ 14

www.prajavani.net

/prajavani.net @prajavani / prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ

ಯೋಗವು ಧನಾತ್ಮಕ ಆಚರಣೆ; ಕೊರೊನಾದಂಥ ವಿಷಮ ಸಂದರ್ಭವನ್ನೂ ಹೆಚ್ಚಿಗೆ ಒತ್ತಡವಿಲ್ಲದೆ ದಾಟಿಬಿಡುವ ಮನೋದೈಹಿಕ ಬಲವನ್ನು ತುಂಬಬಲ್ಲದು



ಆಳ-ಅಗಲ

ತಪ್ಪಿತೇ ಕೋವಿಡ್ ಸಾವಿನ ಲೆಕ್ಕ?

'ಮಕ್ಕಳಿಗೆ ಪ್ರತ್ಯೇಕ ಕೋವಿಡ್ ಆರೈಕೆ ಕೇಂದ್ರ' 10

ಒಂದೇ ದಿನದಲ್ಲಿ 82 ಲಕ್ಷ ಲಸಿಕೆ ಉಚಿತ ವಿತರಣೆ 7

ಸೆನ್ಸೆಕ್ಸ್	ನಿಫ್ಟಿ	₹/$
52,574 ▲	15,745 ▲	74.10 ▼

ಎಲ್ಲ ಕಡೆ ವಾಹನ ಸಂಚಾರ ದಟ್ಟಣೆ • ಮಳಿಗೆಗಳಲ್ಲಿ ಖರೀದಿ ಉತ್ಸಾಹ

ಲಾಕ್‌ಡೌನ್ ಸಡಿಲ: ಹೊರ ಬಂದ ಜನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎರಡನೇ ಹಂತದ ಲಾಕ್‌ಡೌನ್ ಸಡಿಲಿಕೆ ಸೋಮವಾರ ದಿಂದ ಜಾರಿಯಾದ ಬೆನ್ನಲ್ಲೇ ರಾಜ್ಯದ ಹಲವು ಜಿಲ್ಲೆಗಳಲ್ಲಿ ಜನರು ಪ್ರವಾಹ-ದೋಪಾದಿಯಲ್ಲಿ ರಸ್ತೆಗಿಳಿದರು.

ಕೆಲವು ನಗರಗಳಲ್ಲಿ ಬಸ್ ನಿಲ್ದಾಣ ಗಳು, ಮಾರುಕಟ್ಟೆಗಳು ಮಾತ್ರವಲ್ಲದೆ, ಬಟ್ಟೆ ಅಂಗಡಿ, ಚಿನ್ನಾಭರಣ ಮಳಿಗೆ ಗಳಲ್ಲೂ ಭಾರಿ ಪ್ರಮಾಣದ ಜನಸಂದಣಿ ಎದ್ದು ಕಾಣಿಸುತ್ತಿತ್ತು.

ಕೊರೊನಾ ಹೋಗಿಯೇ ಬಿಟ್ಟಿತು, ಇನ್ನೇನು ಭಯಪಟ್ಟು ಮನೆಯೊಳಗೆ ಬಚ್ಚಿಟ್ಟುಕೊಳ್ಳುವ ಪರಿಸ್ಥಿತಿ ಮುಗಿದು ಹೋಯಿತು ಎಂಬ ಉತ್ಸಾಹ ಮಾರು-ಕಟ್ಟೆಯಲ್ಲಿ ಕೂಡಿದ್ದ ಜನಜಂಗುಳಿಯಲ್ಲಿ ಕಂಡು ಬಂದಿತು. ಅಂಗಡಿಗಳ ಬಾಗಿಲು ತೆರೆದಿದ್ದನ್ನು ಕಂಡ ಜನ ಖರೀದಿಗೆ ಮುಗಿಬಿದ್ದ ದೃಶ್ಯ ಬಹುತೇಕ ಕಡೆ ಸಾಮಾನ್ಯವಾಗಿತ್ತು.

ಬಿಬಿಎಂಪಿ ವ್ಯಾಪ್ತಿ ಸೇರಿದಂತೆ 17 ಜಿಲ್ಲೆಗಳಲ್ಲಿ ಸೋಮವಾರ ಬೆಳಿಗ್ಗೆಯಿಂದ ಹಗಲಿನ ವೇಳೆಯಲ್ಲಿ ಲಾಕ್‌ಡೌನ್ ಬಹುತೇಕ ತೆರವಾಗಿದೆ. 13 ಜಿಲ್ಲೆಗಳಲ್ಲಿ ಮಧ್ಯಾಹ್ನ 2 ಗಂಟೆಯವರೆಗೂ ಅಗತ್ಯ ವಸ್ತುಗಳ ಖರೀದಿಗೆ ಅವಕಾಶ ಕಲ್ಪಿ-ಸಲಾಗಿತ್ತು. ಇದನ್ನು ಬಳಸಿಕೊಂಡ ಜನರು ನಗರ, ಪಟ್ಟಣ, ಪೇಟೆಗಳತ್ತ ಮುಖ ಮಾಡಿದ್ದು, ಮೊದಲ ದಿನವೇ ಹಲವು ಕಡೆಗಳಲ್ಲಿ ಜನದಟ್ಟಣೆ ನಿಯಂತ್ರಿಸಲು ಪೊಲೀಸರು, ಇತರ ಇಲಾಖೆಗಳ ಅಧಿಕಾರಿಗಳು ಅಕ್ಷರಶಃ ಪರದಾಡಿದರು.

ಮೈಸೂರು ಜಿಲ್ಲೆಯಲ್ಲಿ ಮಾತ್ರ ಕಠಿಣ ನಿರ್ಬಂಧಗಳು ಜಾರಿಯಲ್ಲಿವೆ. ಮೈಸೂರು, ದಕ್ಷಿಣ ಕನ್ನಡ ಬಿಟ್ಟು ಉಳಿದ ಎಲ್ಲ ಜಿಲ್ಲೆಗಳಲ್ಲೂ ಬಸ್, ಆಟೊ ಮತ್ತು ಟ್ಯಾಕ್ಸಿಗಳ ಸಂಚಾರ ಆರಂಭವಾಗಿದೆ. ಹಗಲಿನ ವೇಳೆ ಲಾಕ್‌ಡೌನ್ ತೆರವಾಗಿರುವ 17 ಜಿಲ್ಲೆಗಳಲ್ಲಿ ಜನರು ದಿನವಿಡೀ ಓಡಾಟದಲ್ಲೇ ಮಗ್ನರಾಗಿದ್ದ ದೃಶ್ಯಗಳು ಕಂಡುಬಂದವು.

ಸಂಚಾರ ದಟ್ಟಣೆಯ ಬಿಸಿ: ಬೆಂಗಳೂರು ಸೇರಿದಂತೆ ಕೆಲವು ನಗರಗಳಲ್ಲಿ ಬೆಳಿಗ್ಗೆಯೇ ನೂರಾರು ವಾಹನಗಳು ರಸ್ತೆಗಿಳಿದಿದ್ದವು. ರಾಜಧಾನಿಯ ಹಲವು ರಸ್ತೆಗಳಲ್ಲಿ ಸಂಚಾರ ದಟ್ಟಣೆ ಸೃಷ್ಟಿಯಾಗಿತ್ತು. ವಿಧಾನಸೌಧ ಸುತ್ತಲಿನ ರಸ್ತೆಗಳು, ಜೆ.ಸಿ. ರಸ್ತೆ, ವರ್ತುಲ ರಸ್ತೆ, ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆಗಳಲ್ಲಿ ಮಧ್ಯಾಹ್ನದವರೆಗೂ ವಾಹನಗಳು ನಿಧಾನಗತಿಯಲ್ಲಿ ಸಂಚರಿಸಿದವು.

7ನೇ ಪುಟ ನೋಡಿ

ಲಾಕ್‌ಡೌನ್ ಸಡಿಲಿಕೆ ಮಾಡಿದ ಕಾರಣ ಬೆಂಗಳೂರಿನ ಬ್ರಿಗೇಡ್ ರಸ್ತೆಯಲ್ಲಿ ಸೋಮವಾರ ಜನದಟ್ಟಣೆ ಕಂಡುಬಂತು
ಪ್ರಜಾವಾಣಿ ಚಿತ್ರ/ ಜನಾರ್ದನ್ ಬಿ.ಕೆ.

ಮತ್ತೆ ಏಳು ಜಿಲ್ಲೆಗಳಲ್ಲಿ ಸಡಿಲಿಕೆ

ಕೋವಿಡ್ ದೃಢಪ್ರಮಾಣ ಸರಾಸರಿ ದರ ಶೇಕಡ 5ಕ್ಕಿಂತ ಕಡಿಮೆಯಾಗಿರುವ ಕಾರಣದಿಂದ ಇನ್ನೂ ಏಳು ಜಿಲ್ಲೆಗಳಲ್ಲಿ ಹಗಲಿನ ವೇಳೆ ಸಂಪೂರ್ಣ ಲಾಕ್‌ಡೌನ್ ತೆರವುಗೊಳಿಸಿ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ್ ಪ್ರಸಾದ್ ಸೋಮವಾರ ಆದೇಶ ಹೊರಡಿಸಿದ್ದಾರೆ.

ಉಡುಪಿ, ಬೆಂಗಳೂರು ಗ್ರಾಮಾಂತರ, ಶಿವಮೊಗ್ಗ, ಬಳ್ಳಾರಿ, ವಿಜಯನಗರ, ಚಿತ್ರದುರ್ಗ ಮತ್ತು ವಿಜಯಪುರ ಜಿಲ್ಲೆಗಳಲ್ಲಿ ಮಂಗಳವಾರದಿಂದ ಬೆಳಿಗ್ಗೆ 6ರಿಂದ ಸಂಜೆ 5ರವರೆಗೆ ಎಲ್ಲ ಅಂಗಡಿಗಳನ್ನು ತೆರೆಯಲು ಅನುಮತಿ ನೀಡಲಾಗಿದೆ.

ಇನ್ನು ಮೈಸೂರಿನಲ್ಲಿ ಮಾತ್ರ ಸಂಪೂರ್ಣ ಲಾಕ್‌ಡೌನ್ ಇರಲಿದೆ. ಹಾಸನ, ದಕ್ಷಿಣ ಕನ್ನಡ, ಚಾಮರಾಜನಗರ, ಚಿಕ್ಕಮಗಳೂರು, ದಾವಣಗೆರೆ ಮತ್ತು ಕೊಡಗು ಜಿಲ್ಲೆಗಳಲ್ಲಿ ಭಾಗಶಃ ಲಾಕ್‌ಡೌನ್ ಜಾರಿಯಲ್ಲಿರಲಿದೆ.

ದುಪ್ಪಟ್ಟಾಯ್ತು ಸರ್ಕಾರಿ ವೆಚ್ಚ

2020ರಲ್ಲಿ ₹8,866 ಕೋಟಿ– 2021ರಲ್ಲಿ ₹18,030 ಕೋಟಿ

• ಭರತ್ ಜೋಶಿ

ಬೆಂಗಳೂರು: ಕೋವಿಡ್ ಸಂಕಷ್ಟ, ಲಾಕ್‌ಡೌನ್ ನಡುವೆಯೇ ಸರ್ಕಾರದ ಸಾರ್ವಜನಿಕ ವೆಚ್ಚ ದುಪ್ಪಟ್ಟಾಗಿದೆ. ಹಿಂದಿನ ಆರ್ಥಿಕ ವರ್ಷಕ್ಕೆ ಹೋಲಿಸಿದರೆ ಪ್ರಸಕ್ತ ಆರ್ಥಿಕ ವರ್ಷದ ಮೊದಲ ಎರಡು ತಿಂಗಳಲ್ಲಿ ಸಾರ್ವಜನಿಕ ವೆಚ್ಚ ದ್ವಿಗುಣಗೊಂಡಿದೆ.

2020ನೇ ಆರ್ಥಿಕ ವರ್ಷದ ಸಾರ್ವಜನಿಕ ವೆಚ್ಚಕ್ಕೆ ನಿಗದಿಯಾಗಿದ್ದ ಒಟ್ಟು ಮೊತ್ತದ ಶೇಕಡ 4ರಷ್ಟು ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಖರ್ಚಾಗಿತ್ತು. ಆರ್ಥಿಕ ಇಲಾಖೆ ಬಹಿರಂಗಪಡಿಸಿರುವ ಅಂಕಿ-ಅಂಶಗಳ ಪ್ರಕಾರ, ಈ ಬಾರಿ ಒಟ್ಟು ನಿಗದಿಯಾಗಿರುವ ಮೊತ್ತದ ಶೇ 8.4ರಷ್ಟು ಮೊದಲ ಎರಡು ತಿಂಗಳಲ್ಲೇ ಖಾಲಿಯಾಗಿದೆ.

ಈ ವರ್ಷದ ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ಸಾರ್ವಜನಿಕ ವೆಚ್ಚಕ್ಕಾಗಿ ₹ 18,030.46 ಕೋಟಿ ಖರ್ಚು ಮಾಡಲಾಗಿದೆ. 2020ರ ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ರಾಜ್ಯ ಸರ್ಕಾರದ ವೆಚ್ಚ ₹ 8,866.45 ಕೋಟಿ ಮಾತ್ರ ಇತ್ತು.

ಹೆಚ್ಚು ಖರ್ಚು ಮಾಡಿದ ಇಲಾಖೆಗಳು (ಕೋಟಿಗಳಲ್ಲಿ)

₹ 3,600.10
ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ

₹ 2,294.72
ನಗರಾಭಿವೃದ್ಧಿ ಇಲಾಖೆ

₹1,717.34
ಆರ್ಥಿಕ ಇಲಾಖೆ

₹1,515.19
ಆರೋಗ್ಯ ಇಲಾಖೆ

₹1,407.1
ಗೃಹ ಇಲಾಖೆ

ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಆರ್ಥಿಕ ಇಲಾಖೆ ಕಾರ್ಯದರ್ಶಿ (ವೆಚ್ಚ) ಪಿ.ಸಿ. ಜಾಫರ್, 'ಮುಂದಿನ ದಿನಗಳಲ್ಲಿ ಯಾವ ರೀತಿಯ ಬೆಳವಣಿಗೆಗಳು ಆಗುತ್ತವೆ ಎಂಬುದನ್ನು ಈಗಲೇ ಊಹಿಸುವುದು ಕಷ್ಟ. ಕಳೆದ ವರ್ಷ ಲಾಕ್‌ಡೌನ್ ಇದ್ದ ಕಾರಣದಿಂದ ವೇತನ ಮತ್ತು ತುರ್ತು ವೆಚ್ಚಗಳ-ನ್ನಷ್ಟೇ ಮಾಡಲಾಗಿತ್ತು. ಈ ಬಾರಿ ಅಂತಹ ನಿಯಂತ್ರಣ ಕ್ರಮಗಳನ್ನು ಕೈಗೊಂಡಿರಲಿಲ್ಲ' ಎಂದರು.

ಕಳೆದ ಆರ್ಥಿಕ ವರ್ಷದಲ್ಲಿ ಕೋವಿಡ್ ಕಾರಣದಿಂದ ಎಲ್ಲ ಇಲಾಖೆಗಳ ಮುಖ್ಯಸ್ಥರಿಗೆ ಇದ್ದ ವೆಚ್ಚ ಮಾಡುವ ಆರ್ಥಿಕ ಅಧಿಕಾರಗಳನ್ನು ಮಿತಿಗೊಳಿಸಲಾಗಿತ್ತು. ಈ ಬಾರಿ ಅಂತಹ ಪರಿಸ್ಥಿತಿ ಇಲ್ಲ. ಕೋವಿಡ್ ಪೂರ್ವದಲ್ಲಿ ಇದ್ದ ಅಧಿಕಾರಗಳನ್ನು ಎಲ್ಲರಿಗೂ ನೀಡಲಾಗಿದೆ. ಹೀಗಾಗಿ, ವೆಚ್ಚ ಹೆಚ್ಚಾಗಿ-ರಬಹುದು ಎಂದು ತಿಳಿಸಿದರು.

7ನೇ ಪುಟ ನೋಡಿ

ಕೃಷಿ ಕೋರ್ಸ್: ರೈತರ ಮಕ್ಕಳಿಗೆ ಶೇ 50 ಮೀಸಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷಿ ಡಿಪ್ಲೋಮಾ, ಬಿಎಸ್ಸಿ ಮತ್ತು ತತ್ಸಮಾನ ಕೃಷಿ ಪದವಿ ಕೋರ್ಸ್‌ಗಳ ಪ್ರವೇಶದಲ್ಲಿ ರೈತರು ಮತ್ತು ಕೃಷಿ ಕಾರ್ಮಿಕರ ಮಕ್ಕಳಿಗೆ ನೀಡುವ ಈಗ ಇದ್ದ ಶೇ 40ರಷ್ಟು ಮೀಸಲಾತಿಯನ್ನು ಶೇ 50 ಕ್ಕೆ ಹೆಚ್ಚಿಸಲು ಸರ್ಕಾರ ನಿರ್ಧರಿಸಿದೆ.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮಂಡಿಸಿದ ಬಜೆಟ್‌ನಲ್ಲಿ ಈ ಭರವಸೆ ನೀಡಿದ್ದರು. ಸೋಮ ವಾರ ನಡೆದ ಸಚಿವ ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಬಸವರಾಜ ಬೊಮ್ಮಾಯಿ ಈ ವಿಷಯ ತಿಳಿಸಿದರು.

2021-22 ನೇ ಸಾಲಿಗೆ ಸರ್ಕಾರಿ ಶಾಲಾ ಮಕ್ಕಳ ಸಮವಸ್ತ್ರ ಖರೀದಿಗೆ ₹83.62 ಕೋಟಿ ನೀಡಲು ತೀರ್ಮಾನಿ-ಸಲಾಗಿದೆ ಎಂದರು.

6ನೇ ಪುಟ ನೋಡಿ

ಹಾಸನ ವಿಮಾನ ನಿಲ್ದಾಣಕ್ಕೆ ₹193 ಕೋಟಿ



ಹಾಸನದಲ್ಲಿ ಗ್ರೀನ್ ಫೀಲ್ಡ್ ದೇಶಿ ವಿಮಾನ ನಿಲ್ದಾಣ ಕಾಮಗಾರಿಗೆ ಸಚಿವ ಸಂಪುಟ ಒಪ್ಪಿಗೆ ನೀಡಿದೆ.

ಒಟ್ಟು ಎರಡು ಹಂತಗಳಲ್ಲಿ ₹193.65 ಕೋಟಿ ವೆಚ್ಚದಲ್ಲಿ ರನ್‌ವೇ, ಟರ್ಮಿನಲ್, ತಾಂತ್ರಿಕ ಕಟ್ಟಡ ಇತ್ಯಾದಿಗಳು ನಿರ್ಮಾಣ ಆಗಲಿವೆ ಎಂದು ಬೊಮ್ಮಾಯಿ ಹೇಳಿದರು.

ಈ ವಿಮಾನ ನಿಲ್ದಾಣಕ್ಕೆ ಒಪ್ಪಿಗೆ ನೀಡುವಂತೆ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಮತ್ತು ಶಾಸಕ ಎಚ್.ಡಿ.ರೇವಣ್ಣ ಅವರು ಮುಖ್ಯಮಂತ್ರಿ ಯಡಿಯೂರಪ್ಪ ಅವರ ಮೇಲೆ ಒತ್ತಡ ಹೇರುತ್ತಲೇ ಬಂದಿದ್ದರು.

ರಾಜ್ಯ ಕೋವಿಡ್

ಅಂಕಿ-ಅಂಶ

28,11,320
ಒಟ್ಟು ಸೋಂಕಿತರು
(28,06,453 ನಿನ್ನೆಯ ವಿವರ)

1,23,134 ▼
ಸಕ್ರಿಯ ಪ್ರಕರಣಗಳು

26,54,139 ▲
ಗುಣಮುಖರಾದವರು

34,025 ಒಟ್ಟು ಸಾವು ▲

ದಿನದ ಏರಿಕೆ

ಹೊಸ ಪ್ರಕರಣ	4,867 ▲
ಗುಣಮುಖ	8,404 ▼
ಸಾವು	142 ▲

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

'ಎಂ-ಯೋಗ' ಆ್ಯಪ್ ಬಿಡುಗಡೆ

ನವದೆಹಲಿ (ಪಿಟಿಐ): 'ಕೋವಿಡ್ ಪಿಡುಗಿನ ವಿರುದ್ಧದ ಹೋರಾಟಕ್ಕೆ ಆತ್ಮಸ್ಥೈರ್ಯ ಹೆಚ್ಚಿಸಲು ಯೋಗ ಭರವಸೆಯ ಕಿರಣವಾಗಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಸೋಮವಾರ ಏಳನೇ 'ಅಂತರ ರಾಷ್ಟ್ರೀಯ ಯೋಗ ದಿನ'ದ ಸಂದರ್ಭದಲ್ಲಿ ಅವರು ಮಾತನಾಡಿ, ಕೋವಿಡ್ ಸೋಂಕಿನ ವಿರುದ್ಧ ಹೋರಾಡುವ ಕ್ರಮವಾಗಿ ಯೋಗಾ-ಭ್ಯಾಸವನ್ನು ಅಳವಡಿಸಿಕೊಳ್ಳಬೇಕು ಎಂದು ಸಲಹೆ ಮಾಡಿದರು. ಇದಕ್ಕೆ ಪೂರಕವಾಗಿ ವಿಶ್ವ ಆರೋಗ್ಯ ಸಂಘಟನೆ (ಡಬ್ಲ್ಯೂಎಚ್ಒ) ಸಹಯೋಗದಲ್ಲಿ ರೂಪಿಸಿದ 'ಎಂ-ಯೋಗ' ಅಪ್ಲಿಕೇಷನ್ ಅನ್ನು ಬಿಡುಗಡೆಗೊಳಿಸಿದರು.

ಯೋಗಾಭ್ಯಾಸದ ಸಾಮಾನ್ಯ ಶಿಷ್ಟಾಚಾರಕ್ಕೆ ಅನುಗುಣವಾಗಿ ವಿವಿಧ ಭಾಷೆಗಳಲ್ಲಿ ಯೋಗದ ವಿವಿಧ ಆಸನಗಳ ಕುರಿತು ವಿವರಗಳನ್ನು ಒಳಗೊಂಡ ವಿಡಿಯೊಗಳನ್ನು ಈ ಅಪ್ಲಿಕೇಷನ್ ಒಳಗೊಂಡಿದೆ.

ಇದು ಆಧುನಿಕ ತಂತ್ರಜ್ಞಾನ ಮತ್ತು ಪ್ರಾಚೀನ ವಿಜ್ಞಾನದ ಸಮ್ಮಿಲನ ಎಂದು ಹೇಳಿದ ಅವರು, ಎಂ-ಯೋಗ ಅಪ್ಲಿಕೇಷನ್ ಮೂಲಕ ವಿಶ್ವದಾದ್ಯಂತ ಯೋಗ ಪಸರಿಸಲು ಹಾಗೂ 'ಒಂದು ವಿಶ್ವ, ಒಂದು ಆರೋಗ್ಯ' ಕಲ್ಪನೆ ಸಾಕಾರಗೊಳ್ಳಲು ಸಹಕಾರಿಯಾಗಲಿದೆ ಎಂದು ಆಶಿಸಿದರು.

ಕಳೆದ ಒಂದೂವರೆ ವರ್ಷದಲ್ಲಿ ಅಸಂಖ್ಯ ಜನರು ಯೋಗದತ್ತ ಒಲವು ತೋರಿದ್ದಾರೆ. ಕೊರೊನಾ ಜಗತ್ತಿನ ಬಾಗಿಲು ತಟ್ಟಿದಾಗ ಯಾವುದೇ ದೇಶ ಎದುರಿಸಲು ಸಜ್ಜಾಗಿರಲಿಲ್ಲ. ನಾವೆಲ್ಲರೂ ಈಗ ಸಂಕಷ್ಟವನ್ನು ನೋಡಿದ್ದೇವೆ. ಈ ಹೊತ್ತಿನಲ್ಲಿ ಯೋಗ ನಮ್ಮ ಆತ್ಮಸ್ಥೈ-ರ್ಯದ ಮೂಲವಾಗಿದೆ ಎಂದರು.

ಆಂತರರಾಷ್ಟ್ರೀಯ ಯೋಗ ದಿನದ ಆಂಗವಾಗಿ ಉತ್ತರ ಪ್ರದೇಶದ ಗ್ರೇಟರ್ ನೋಯ್ಡಾದ ಆಸ್ಪತ್ರೆಯೊಂದರಲ್ಲಿ ವೈದ್ಯರು ಹಾಗೂ ಸಿಬ್ಬಂದಿ ಸೋಮವಾರ ಪಿಪಿಇ ಕಿಟ್ ಧರಿಸಿ ಯೋಗಾಸನ ಪ್ರದರ್ಶಿಸಿದರು –ಪಿಟಿಐ ಚಿತ್ರ

12ನೇ ತರಗತಿ ಪರೀಕ್ಷೆಗೂ ಅವಕಾಶ: ಸಿಬಿಎಸ್‌ಇ

ನವದೆಹಲಿ: 12ನೇ ತರಗತಿಗೆ ಅನ್ವಯಿಸಿ ಸಿಬಿಎಸ್‌ಇಯ ಫಲಿತಾಂಶ, ಮೌಲ್ಯಮಾಪನ ಮಾನದಂಡ ಕುರಿತಂತೆ ಸಮಾಧಾನವಿಲ್ಲದ ವಿದ್ಯಾರ್ಥಿಗಳಿಗಾಗಿ, ಪ್ರಮುಖ ವಿಷಯಗಳಿಗೆ ಪರೀಕ್ಷೆಯನ್ನು ಆಗಸ್ಟ್ 15 ಮತ್ತು ಸೆಪ್ಟೆಂಬರ್ 15, 2021ರ ನಡುವೆ ನಡೆಸಲಾಗುವುದು ಎಂದು ಸಿಬಿಎಸ್‌ಇ ಸೋಮವಾರ ತಿಳಿಸಿದೆ.

11

ಎಐಡಿಎಸ್ಒ ಸಮೀಕ್ಷೆ: ವಿದ್ಯಾರ್ಥಿಗಳ ಅಭಿಮತ

ಪದವಿ ಪರೀಕ್ಷೆಗೆ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪದವಿ, ಸ್ನಾತಕೋತ್ತರ ಪದವಿ, ಎಂಜಿನಿಯರಿಂಗ್ ಹಾಗೂ ಡಿಪ್ಲೊಮಾದ ಬೆಸ ಸಂಖ್ಯೆಯ ಸೆಮಿಸ್ಟರ್‌ಗೆ ಆನ್‌ಲೈನ್ ಅಥವಾ ಆಫ್‌ಲೈನ್ ಸೇರಿದಂತೆ ಯಾವುದೇ ಮಾದರಿಯಲ್ಲಿಯೂ ಪರೀಕ್ಷೆ ನಡೆಸಬಾರದು ಎಂದು ವಿದ್ಯಾರ್ಥಿಗಳು ಒತ್ತಾಯಿಸಿದ್ದಾರೆ.

ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಆರ್ಗನೈಸೇಷನ್ (ಎಐಡಿಎಸ್ಒ) ಆನ್‌ಲೈನ್‌ನಲ್ಲಿ ನಡೆಸಿದ ರಾಜ್ಯಮಟ್ಟದ ಸಮೀಕ್ಷೆಯ ವಿವರವನ್ನು ಸೋಮವಾರ ಬಿಡುಗಡೆ ಮಾಡಿತು.

ಸಮೀಕ್ಷೆಯಲ್ಲಿ ಪಾಲ್ಗೊಂಡ 38 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳ ಪೈಕಿ, ಶೇ 91ರಷ್ಟು ವಿದ್ಯಾರ್ಥಿಗಳು ಪರೀಕ್ಷೆ ನಡೆಸಬಾರದು ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಉಳಿದ ಶೇ 9ರಷ್ಟು ವಿದ್ಯಾರ್ಥಿಗಳು ಆನ್‌ಲೈನ್‌ನಲ್ಲಿ ಪರೀಕ್ಷೆ ನಡೆಸ ಬೇಕು ಎಂದು ಹೇಳಿದ್ದಾರೆ ಎಂದು ಸಂಘಟನೆಯ ರಾಜ್ಯ ಕಾರ್ಯಕಾರಿ ಸದಸ್ಯ ಸುಭಾಷ್ ಸೋಮವಾರ ಸುದ್ದಿಗೋಷ್ಠಿ ಯಲ್ಲಿ ತಿಳಿಸಿದರು.

ಈ ತರಗತಿಗಳ ಬೆಸ ಸಂಖ್ಯೆಯ (1,3,5) ಸೆಮಿಸ್ಟರ್‌ಗಳ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸದೆ, ಅವರು ಹಿಂದಿನ ಸೆಮಿಸ್ಟರ್ ಗಳಲ್ಲಿ ತೆಗೆದ ಅಂಕಗಳು ಮತ್ತು ಆಂತರಿಕ ಪರೀಕ್ಷೆಯಲ್ಲಿನ ಅಂಕಗಳನ್ನು ಪರಿಗಣಿಸಿ, ಗ್ರೇಡ್ ನೀಡಿ ಮುಂದಿನ ಸೆಮಿಸ್ಟರ್‌ಗ-ಳಿಗೆ ಉತ್ತೀರ್ಣಗೊಳಿಸಬೇಕು ಎಂಬ ಅಭಿಪ್ರಾಯ ಸಮೀಕ್ಷೆಯಲ್ಲಿ ವ್ಯಕ್ತವಾಗಿದೆ ಎಂದರು.

1,3 ಮತ್ತು 5ನೇ ಸೆಮಿಸ್ಟರ್‌ಗಳಿಗೆ ಈಗಾಗಲೇ ಪರೀಕ್ಷೆ ನಡೆಸಬೇಕಿತ್ತು. ಲಾಕ್‌ಡೌನ್‌ನಿಂದ ಅದು ಸಾಧ್ಯವಾಗಿಲ್ಲ. ಆದರೆ, ಈಗಾಗಲೇ 2,4 ಮತ್ತು 6ನೇ ಸೆಮಿಸ್ಟರ್‌ಗಳ ಆನ್‌ಲೈನ್ ತರಗತಿ ಪ್ರಾರಂಭ ಮಾಡಲಾಗಿದೆ. ಈ ವಿದ್ಯಾರ್ಥಿಗಳಿಗೆ ಆಂತರಿಕ ಮೌಲ್ಯಮಾಪನವನ್ನೂ ಪ್ರಾರಂಭಿಸಿದ್ದಾರೆ. ಹಿಂದಿನ ಸೆಮಿಸ್ಟರ್ ಪರೀಕ್ಷೆಯನ್ನು (ಬೆಸ) ಜುಲೈನಲ್ಲಿ ಬರೆಯಿರಿ, ಈಗಿನ ಸೆಮಿಸ್ಟರ್‌ನ (ಸಮ) ಪರೀಕ್ಷೆಯನ್ನು ಸೆಪ್ಟೆಂಬರ್‌ನಲ್ಲಿ ಬರೆಯಿರಿ ಎಂದು ಉನ್ನತ ಶಿಕ್ಷಣ ಇಲಾಖೆ ಹೇಳಿದೆ. ಒಂದೇ ತಿಂಗಳ ಅಂತರದಲ್ಲಿ 12ರಿಂದ 14 ವಿಷಯಗಳ ತಯಾರಿ ನಡೆಸಲು, ಪರೀಕ್ಷೆ ಬರೆಯಲು ಸಾಧ್ಯವೇ ಎಂದು ವಿದ್ಯಾರ್ಥಿಗಳು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ಸಂಬಂಧಪಟ್ಟವರ ಜೊತೆಗೆ ಚರ್ಚಿಸದೆ ಏಕಪಕ್ಷೀಯ-ವಾಗಿ ಇಂತಹ ಅತಾರ್ಕಿಕ ನಿರ್ಧಾರ ಕೈಗೊಳ್ಳಲಾಗಿದೆ. ಇದನ್ನು ಕೂಡಲೇ ಹಿಂಪಡೆಯಬೇಕು ಎಂದು ಒತ್ತಾಯಿಸಿ, ಇದೇ 23ರಂದು ರಾಜ್ಯದಾದ್ಯಂತ ಪ್ರತಿಭಟನೆ ನಡೆಸಲಾಗುವುದು' ಎಂದು ಅವರು ಹೇಳಿದರು.

ಒಳ ಪುಟ

ನೈಸ್: ₹2 ಕೋಟಿ ಪರಿಹಾರ ನೀಡಲು ದೇವೇಗೌಡರಿಗೆ ಆದೇಶ

3

ಇಂದಿನ ಪಾಡ್‌ಕಾಸ್ಟ್ ವಿಶೇಷ

ಸುದ್ದಿ ಸ್ವಾರಸ್ಯ

ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ

Prajavani.net/podcast

ಚಿನಕುರಳಿ

ಪ್ರಕಾಶ್ ಶೆಟ್ಟಿ

ಡಿಎಸ್‌ಇಆರ್‌ಟಿ ಸಮೀಕ್ಷೆಯಲ್ಲಿ ಬಹಿರಂಗ

ಕೋವಿಡ್: ಶೇ 30ರಷ್ಟು ಮಕ್ಕಳು ಕಲಿಕೆ ವಂಚಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಕೋವಿಡ್ ನಿಂದ ಶೇ 30ರಷ್ಟು ಮಕ

‘ಡಿಡಿಪಿಐಗಳಿಗೆ ಪ್ರಶಸ್ತಿ ಕೊಡಿ’

ಬೆಂಗಳೂರು: ‘ಶಾಲಾ ಅಭಿವೃದ್ಧಿಗಾಗಿ ಶ್ರಮಿಸುವ ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕರಿಗೆ (ಡಿಡಿಪಿಐ) ಪ್ರತಿ ವರ್ಷ ರಾಜ್ಯಮಟ್ಟದ ಪ್ರಶಸ್ತಿ ನೀಡಬೇಕು’ ಎಂದು ಶಿಕ್ಷಣ ಸುಧಾರಣೆಗಳ ಸಲಹೆಗಾರ ಎಂ.ಆರ್.ದೊರೆಸ್ವಾಮಿ ಅವರು ಸರ್ಕಾರಕ್ಕೆ ಶಿಫಾರಸು ಮಾಡಿದ್ದಾರೆ.

‘ಇತ್ತೀಚೆಗೆ ಎಲ್ಲ ಜಿಲ್ಲೆಗಳ ಡಿಡಿಪಿಐಗಳ ಜೊತೆ ವಿಡಿಯೊ ಕಾನ್ಫರೆನ್ಸ್ ನಡೆಸಿದ ಅವರು ದತ್ತು ಪಡೆದ ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಕೈಗೊಂಡಿರುವ ಕ್ರಮಗಳ ಕುರಿತು ಮಾಹಿತಿ ಕಲೆಹಾಕಿದರು. ಎಲ್ಲ ಉಪನಿರ್ದೇಶಕರಿಗೆ ಶೀಘ್ರವೇ ಧಾರವಾಡದ ಐಐಟಿಯಲ್ಲಿ ಒಂದು ದಿನದ ತರಬೇತಿ ಕಾರ್ಯಾಗಾರ ಹಮ್ಮಿಕೊಳ್ಳುವ ಭರವಸೆ ನೀಡಿದರು’ ಎಂದು ಪ್ರಕಟಣೆ ತಿಳಿಸಿದೆ.

ಬೆಂಗಳೂರು ನಗರ ಜಿಲ್ಲಾ ಪಂಚಾಯತಿ
ಕಾರ್ಯಪಾಲಕ ಅಭಿಯಂತರರ ಕಛೇರಿ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ,
ಬೆಂಗಳೂರು ನಗರ ಜಿಲ್ಲೆ, ಮೊದಲನೇ ಮಹಡಿ, ಎಸ್. ಕರಿಯಪ್ಪ ರಸ್ತೆ,
ಬನಶಂಕರಿ, ಬೆಂಗಳೂರು-560070.

ಸಂ:ಕಾಅ/ಗ್ರಾ.ಕುನೀ&ನೈವಿ/ಬೆಂ.ನ/TND/01/2021-22 ದಿನಾಂಕ: 16-06-2021

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ನೋಟೀಸ್

2021-22ನೇ ಸಾಲಿನ WQMSP ಲೆಕ್ಕಶೀರ್ಷಿಕೆ ಅನುದಾನದಡಿ ಅನುಮೋದನೆಯಾಗಿರುವ ಕಾಮಗಾರಿಗಳಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಅನ್ನು ಕರೆಯಲಾಗಿದೆ. ವೆಬ್‌ಸೈಟ್ ಮೂಲಕ ಟೆಂಡರ್ ಫಾರಂಗಳನ್ನು **ದಿನಾಂಕ: 01-07-2021ರ ಸಂಜೆ 5.00** ಗಂಟೆಯವರೆಗೆ ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್‌ಸೈಟ್ **http://www.eproc.karnataka.gov.in** ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.

ಸಹಿ/-
ಕಾರ್ಯಪಾಲಕ ಅಭಿಯಂತರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ,
ಬೆಂಗಳೂರು ನಗರ, ಬೆಂಗಳೂರು

ವಾಸಾಸಂ೨/ಬೆಂ.ನ/ಜ್ಞೋರ್ಸ್/615/2021-22

ಕೋವಿಡ್-೧೯. ಆತಂಕ ಬೇಡ: ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಸಣ್ಣ ನೀರಾವರಿ ಮತ್ತು ಅಂ. ಅ. ವಿಭಾಗ,
ಜಯನಗರ ವಾಣಿಜ್ಯ ಸಂಕೀರ್ಣ ಮಳಿಗೆ, 5ನೇ ಮಹಡಿ, ಜಯನಗರ 4ನೇ ಬ್ಲಾಕ್, ಬೆಂಗಳೂರು-560011.

ಸಂಖ್ಯೆ : ಕಾಸಬೆಂ/ತಾಶಾ/ಸಿ-3/ಟೆಂಡರ್-01/2021-22 ದಿನಾಂಕ: 07.06.2021

ಟೆಂಡರ್ ಮುಂದೂಡಿಕೆ-2 ಮತ್ತು ತಿದ್ದುಪಡಿ

ಈ ಕಛೇರಿಯ, ಟೆಂಡರ್ ಪ್ರಕಟಣೆ **ಸಂಖ್ಯೆ: 01/2021-22 ದಿನಾಂಕ: 06.04.2021** ಲೆಕ್ಕಶೀರ್ಷಿಕೆ 4702-ಆಣೆಕಟ್ಟು ಮತ್ತು ಪಿಕಪ್ ಮತ್ತು 4711-ಪ್ರವಾಹ ನಿಯಂತ್ರಣ ಕಾಮಗಾರಿಗಳು ರಲ್ಲಿ ಆಹ್ವಾನಿಸಲಾಗಿದ್ದ, ಕ್ರಮ ಸಂಖ್ಯೆ (1)ರ ಕಾಮಗಾರಿಯು 11 ತಿಂಗಳ ಬದಲಾಗಿ 09 ತಿಂಗಳು ಮತ್ತು ಕ್ರಮ ಸಂಖ್ಯೆ(2)ರ ಕಾಮಗಾರಿಯು 9 ತಿಂಗಳ ಬದಲಾಗಿ 6 ತಿಂಗಳು ಮಳೆಗಾಲ ಸೇರಿ ಎಂದು ತಿದ್ದುಪಡಿಸಲಾಗಿದೆ ಹಾಗೂ ಕಾಮಗಾರಿಗಳನ್ನು ಅನಿವಾರ್ಯ ತಾಂತ್ರಿಕ ಕಾರಣಗಳಿಂದ ಟೆಂಡರನ್ನು ಮುಂದೂಡಲಾಗಿದ್ದು, ಕಾಮಗಾರಿಗಳ ದಿನಾಂಕಗಳು ಈ ಕೆಳಕಂಡಂತಿರುತ್ತದೆ. ಬದಲಾವಣೆ ಇದ್ದಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಪ್ರಕಟಿಸಲಾಗುವುದು.

1) ಟೆಂಡರ್ ವಿವರಗಳನ್ನು ಈ ಕಛೇರಿಯಿಂದ ಕೆಲಸದ ವೇಳೆಯಲ್ಲಿ **ದಿನಾಂಕ: 15.07.2021 ರ ಸಂಜೆ 16.30 ಗಂಟೆಯ ವರೆಗೆ** ಪಡೆಯಬಹುದಾಗಿದೆ 2) ಪೂರ್ವ ಟೆಂಡರ್ ಸಭೆಯ **ದಿನಾಂಕ: 12.07.2021 ಬೆಳಿಗ್ಗೆ 11.30ಕ್ಕೆ.** 3) ಭರ್ತಿ ಮಾಡಿದ ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ **ದಿನಾಂಕ: 16.07.2021ರ ಸಂಜೆ 16.30** ಗಂಟೆಯವರೆಗೆ ಸಲ್ಲಿಸಬಹುದಾಗಿದ್ದು ಉಳಿದ ಷರತ್ತುಗಳಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ. 4) ತಾಂತ್ರಿಕ ಬಿಡ್ಡನ್ನು ತೆರೆಯುವ **ದಿನಾಂಕ: 19.07.2021 ಬೆಳಿಗ್ಗೆ 11.30ಕ್ಕೆ** ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಅರ್ಹ ಗುತ್ತಿಗೆದಾರರಿಗೆ ತಿಳಿಸಲಾಗುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ

DIPR/DDU/Shirdi Sai/616/2021-22

ಕೋವಿಡ್-೧೯. ಆತಂಕ ಬೇಡ: ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಆನ್‌ಲೈನ್-ಭೌತಿಕ ವೇದಿಕೆಗಳಲ್ಲಿ ಯೋಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂತರರಾಷ್ಟ್ರೀಯ ಯೋಗ ದಿನದ ಅಂಗವಾಗಿ ನಗರದಾದ್ಯಂತ ವಿವಿಧ ಕಾರ್ಯಕ್ರಮಗಳನ್ನು ಸೋಮವಾರ ಹಮ್ಮಿಕೊಳ್ಳಲಾಗಿತ್ತು. ಈ ಬಾರಿ ಸಾರ್ವಜನಿಕ ಕಾರ್ಯಕ್ರಮಗಳಿಗಿಂತ ಆನ್‌ಲೈನ್ ವೇದಿಕೆಯಲ್ಲಿ ಹಲವು ಕಾರ್ಯಕ್ರಮಗಳು ನಡೆದವು.

ಪ್ರತಿವರ್ಷದಂತೆ ಉದ್ಯಾನಗಳು, ಮೈದಾನಗಳು ಹಾಗೂ ಇತರ ತೆರೆದ ಪ್ರದೇಶಗಳಲ್ಲಿ ಸಾಮೂಹಿಕ ಯೋಗ ಕಾರ್ಯಕ್ರಮಗಳು ವಿರಳವಾಗಿದ್ದವು. ವಿವಿಧ ಸಂಸ್ಥೆಗಳು ಆನ್‌ಲೈನ್ ಮೂಲಕವೇ ಯೋಗ ದಿನಕ್ಕೆ ಚಾಲನೆ ನೀಡಿದವು.

ಹಲವು ಶಿಕ್ಷಣ ಸಂಸ್ಥೆಗಳೂ ಆನ್‌ಲೈನ್ ಮೂಲಕ ಹಮ್ಮಿಕೊಂಡಿದ್ದ ಯೋಗ ದಿನದಲ್ಲಿ ವಿದ್ಯಾರ್ಥಿಗಳು ಭಾಗವಹಿಸಿ, ಯೋಗ ಮಾಡಿದರು. ಬಹುತೇಕರು ತಮ್ಮ ಮನೆಯಂಗಳದಲ್ಲೇ ಯೋಗಾಭ್ಯಾಸ ನಡೆಸಿದರು.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು ಯೋಗ ದಿನದ ಅಂಗವಾಗಿ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಬೆಳಿಗ್ಗೆ ಯೋಗ ತರಬೇತಿ ಕಾರ್ಯಕ್ರಮ ಹಮ್ಮಿಕೊಂಡಿತ್ತು.

ಬಳಿಕ ನಡೆದ ಆನ್‌ಲೈನ್ ಕಾರ್ಯಕ್ರಮದಲ್ಲಿ ಸ್ವಾಮಿ ವಿವೇಕಾನಂದ ಯೋಗ ವಿಶ್ವವಿದ್ಯಾಲಯ ಕುಲಾಧಿಪತಿ ಎಚ್.ಆರ್. ನಾಗೇಂದ್ರ, ರಾಜೀವ್ ಗಾಂಧಿ ವಿಶ್ವವಿದ್ಯಾಲಯದ ಕುಲಪತಿ ಎಸ್.ಎಂ.ಜಯಕರ, ಎನ್.ರಾಮಕೃಷ್ಣ ರೆಡ್ಡಿ, ಬಿ.ವಸಂತ ಶೆಟ್ಟಿ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಮಲ್ಲೇಶ್ವರದಲ್ಲಿರುವ ರಾಜ್ಯ ಬಿಜೆಪಿ ಕಾರ್ಯಾಲಯ ಜಗನ್ನಾಥ ಭವನದಲ್ಲಿ ನಡೆದ ಯೋಗ ದಿನದಲ್ಲಿ ಬಿಜೆಪಿ ರಾಜ್ಯ ಉಪಾಧ್ಯಕ್ಷೆ ತೇಜಸ್ವಿನಿ ಅನಂತಕುಮಾರ್, ನಟಿ ಅನು ಪ್ರಭಾಕರ್ ಭಾಗವಹಿಸಿದ್ದರು. ಕೋವಿಡ್ ಸಂದರ್ಭದಲ್ಲಿ ಅಳವಡಿಸಿಕೊಳ್ಳಬೇಕಾದ ಜೀವನಶೈಲಿಯ ಕುರಿತು ವೈದ್ಯ ಡಾ.ಆಂಜನಪ್ಪ ಮಾರ್ಗದರ್ಶನ ನೀಡಿದರು.

ದಿಶಾ ಭಾರತ್, ಯೂತ್ ಫಾರ್ ಸೇವಾ, ರಾಷ್ಟ್ರೋತ್ಥಾನ ಪರಿಷತ್‌ನ ಆಶ್ರಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಶಾಂತಿ ಆಯುರ್ವೇದ ಕೇಂದ್ರದ ಮುಖ್ಯಸ್ಥ ಡಾ.ಗಿರಿಧರ ಕಜೆ, ರಾಷ್ಟ್ರೋತ್ಥಾನ ಪರಿಷತ್ ಪ್ರಧಾನ ಕಾರ್ಯದರ್ಶಿ ನಾ.ದಿನೇಶ್ ಹೆಗ್ಡೆ ಉಪನ್ಯಾಸ ನೀಡಿದರು.

ಎಪಿಎಸ್ ಎಜುಕೇಷನಲ್ ಟ್ರಸ್ಟ್‌ನ ಕಾರ್ಯಕ್ರಮದಲ್ಲಿ ಯೋಗ ಗುರು ಎಸ್.ಶಂಕರ್ ಭಾಗವಹಿಸಿದ್ದರು. ಪ್ರೀತೀಸ್ ವೆಲ್‌ನೆಸ್ ಯೋಗ ವತಿಯಿಂದ ಆನ್‌ಲೈನ್ ಮೂಲಕ ಯೋಗ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಪತಂಜಲಿ ಯೋಗ ಶಿಕ್ಷಣ ಸಮಿತಿ, ವಿಶ್ವೇಶ್ವರಯ್ಯ ಕೈಗಾರಿಕಾ ಮತ್ತು ತಾಂತ್ರಿಕ ವಸ್ತು ಸಂಗ್ರಹಾಲಯ, ಬೆಂಗಳೂರು ವಿಶ್ವವಿದ್ಯಾಲಯ ಸೇರಿದಂತೆ ವಿವಿಧ ಸಂಸ್ಥೆಗಳು ಸಾಮಾಜಿಕ ಮಾಧ್ಯಮಗಳಲ್ಲಿ ನೇರಪ್ರಸಾರದ ಮೂಲಕ ಯೋಗಾಭ್ಯಾಸ, ಸಂವಾದ, ಉಪನ್ಯಾಸ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದವು.

ಅಂಚೆ ಚೀಟಿಗಳಿಗೆ ಯೋಗ ಮುದ್ರೆ: ಯೋಗ ದಿನದ ಅಂಗವಾಗಿ ಜಯನಗರ, ರಾಜಾಜಿನಗರ, ಜಾಲಹಳ್ಳಿ, ಬಸವನಗುಡಿ ಸೇರಿದಂತೆ ಅಂಚೆ ಇಲಾಖೆಯ ಹಲವು ಪ್ರಧಾನ ಕಚೇರಿಗಳಲ್ಲಿ ಸೋಮವಾರ ಬಟವಾಡೆಯಾದ ಅಂಚೆ ಪತ್ರಗಳಿಗೆ ವಿಶೇಷ ಯೋಗ ಮುದ್ರೆ ಒತ್ತುವ ಮೂಲಕ ಯೋಗದ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳು ನಡೆದವು.

ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಸಾಮೂಹಿಕ ಯೋಗಾಸನ –ಪ್ರಜಾವಾಣಿ ಚಿತ್ರ

‘ಪಠ್ಯಕ್ರಮದಲ್ಲಿ ಯೋಗ ಶಿಕ್ಷಣ ಅಳವಡಿಕೆ’

‘ರಾಜ್ಯದಲ್ಲಿ ಯೋಗ ಶಿಕ್ಷಣವನ್ನು ಪಠ್ಯಕ್ರಮದಲ್ಲಿ ಅಳವಡಿಸಲಾಗುವುದು’ ಎಂದು ಉಪಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥ ನಾರಾಯಣ ಹೇಳಿದರು.

ಉನ್ನತ ಶಿಕ್ಷಣ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ, ಕ್ರೀಡಾ ಮತ್ತು ಯುವಜನ ಸಬಲೀಕರಣ ಇಲಾಖೆ ಕಂಠೀರವ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ಯೋಗ ದಿನಾಚರಣೆಯಲ್ಲಿ ಅವರು ಮಾತನಾಡಿದರು.

‘ಈ ವರ್ಷದಿಂದಲೇ ಜಾರಿಗೆ ಬರುತ್ತಿರುವ ನೂತನ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ (ಎನ್‌ಇಪಿ) ಯೋಗವನ್ನು ಪಠ್ಯವನ್ನಾಗಿ ಅಳವಡಿಸುವ ಅಂಶವಿದೆ. ಮಕ್ಕಳು ಶೈಕ್ಷಣಿಕವಾಗಿ ಬೆಳವಣಿಗೆ ಸಾಧಿಸುವುದರ ಜೊತೆಯಲ್ಲಿ ಯೋಗದ ಮೂಲಕ ದೈಹಿಕ ಮತ್ತು ಮಾನಸಿಕವಾಗಿ ಸದೃಢರಾಗಲಿದ್ದಾರೆ’ ಎಂದು ಹೇಳಿದರು.

ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ‘ಯೋಗ ಯಾವುದೇ ದೇಶ, ಜಾತಿ, ಧರ್ಮಕ್ಕೆ ಸೀಮಿತವಾದದ್ದಲ್ಲ. ಇದು ಮನುಷ್ಯನ ಅಸ್ತಿತ್ವಕ್ಕೆ ಸೇರಿದ್ದು, ನಮ್ಮ ಹಿರಿಯರು ಸಂಶೋಧಿಸಿದ ವಿಜ್ಞಾನವೇ ಯೋಗ. ಇದು, ಜಗತ್ತಿನ ಪ್ರತಿಯೊಬ್ಬರ ಜೀವನಶೈಲಿ ಆಗಬೇಕು’ ಎಂದರು. ಹರಿಹರದ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ ಅವರು ಯೋಗ ಮಾರ್ಗದರ್ಶನ ನೀಡಿದರು.

‘ಕುಶಲ ಕೋಶ’ ಮೊಬೈಲ್ ಆ್ಯಪ್ ಬಿಡುಗಡೆ: ತುರ್ತು ಅಗತ್ಯ ಸೇವೆ ಹಾಗೂ ಕುಶಲಕರ್ಮಿಗಳಿಗೆ ಉದ್ಯೋಗಾವಕಾಶ ಒದಗಿಸಲು ವಿವಿಧ ಇಲಾಖೆಗಳ ಸಹಭಾಗಿತ್ವದಲ್ಲಿ ಹೊರತಂದಿರುವ ‘ಕುಶಲ ಕೋಶ’ ಆ್ಯಪ್‌ಗೆ ಕ್ರೀಡಾ ಮತ್ತು ಯುವಜನ ಸಬಲೀಕರಣ ಸಚಿವ ಕೆ.ಸಿ.ನಾರಾಯಣ ಗೌಡ ಚಾಲನೆ ನೀಡಿದರು.

‘ಈ ಆ್ಯಪ್‌ನಿಂದ ಹತ್ತಿರದ ಯೋಗ ಶಿಕ್ಷಕರನ್ನು ಪತ್ತೆ ಹಚ್ಚಬಹುದು. ನೋಂದಾಯಿತ ಯೋಗ ಶಿಕ್ಷಕರ ಮಾಹಿತಿ ಇಲ್ಲಿ ಲಭ್ಯ ಇರಲಿದೆ. ಇದಲ್ಲದೆ, ಎಲೆಕ್ಟ್ರಿಷಿಯನ್, ಪ್ಲಂಬರ್, ಜಿಮ್ ತರಬೇತುದಾರರು ಸೇರಿದಂತೆ ಇತರೆ ವೃತ್ತಿಪರರನ್ನು ಸಂಪರ್ಕಿಸಬಹುದು’ ಎಂದರು.

ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹಾಗೂ ಆರೋಗ್ಯ ಸಚಿವ ಕೆ.ಸುಧಾಕರ್ ಅವರು ಮುಖ್ಯಮಂತ್ರಿ ನಿವಾಸ ‘ಕಾವೇರಿ’ಯಲ್ಲಿ ಯೋಗಾಭ್ಯಾಸ ನಡೆಸಿದರು

ನಾಗಮೋಹನದಾಸ್ ಸಮಿತಿ ವರದಿಯಲ್ಲಿ ಹೆಸರು ಉಲ್ಲೇಖ

ಕಾಮಗಾರಿ ಅಕ್ರಮ: ನಾನವನಲ್ಲ ಎಂದ ಸಿದ್ದೇಗೌಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಬಿಎಂಪಿಯ ಗಾಂಧಿ ನಗರ ವಿಭಾಗದಲ್ಲಿ 2008ರಿಂದ 2012ರ ನಡುವೆ ನಾನು ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಆಗಿರಲಿಲ್ಲ. ನಿವೃತ್ತ ನ್ಯಾಯಮೂರ್ತಿ ನಾಗಮೋಹನದಾಸ್ ನೇತೃತ್ವದ ತನಿಖಾ ಸಮಿತಿಯ ವರದಿಯಲ್ಲಿ ಉಲ್ಲೇಖಿಸಿದಂತೆ ಈ ಅವಧಿಯಲ್ಲಿ ಈ ವಿಭಾಗದಲ್ಲಿ ಅನುಷ್ಠಾನಗೊಂಡ ಕಾಮಗಾರಿಗಳಲ್ಲಿ ನಡೆದಿರುವ ಅಕ್ರಮಗಳಿಗೂ ನನಗೂ ಸಂಬಂಧ ಇಲ್ಲ’ ಎಂದು ಬಿಬಿಎಂಪಿಯ ಪ್ರಧಾನ ಎಂಜಿನಿಯರ್ ಹುದ್ದೆಯಿಂದ ಇತ್ತೀಚೆಗೆ ನಿವೃತ್ತರಾಗಿರುವ ಕೆ.ಸಿದ್ದೇಗೌಡ ಸ್ಪಷ್ಟಪಡಿಸಿದ್ದಾರೆ.

ಕಾರಣ ಕೇಳಿ ನೀಡಿರುವ ನೋಟಿಸ್ ಸಂಬಂಧ ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಕಾರ್ಯದರ್ಶಿ ರಾಕೇಶ್ ಸಿಂಗ್ ಅವರಿಗೆ ಪತ್ರ ಬರೆದಿರುವ ಕೆ.ಸಿದ್ದೇಗೌಡ ಅವರು, ತಮ್ಮ ವಿರುದ್ಧದ ಆರೋಪಗಳಿಗೆ ಸಮಜಾಯಿಷಿ ನೀಡಿದ್ದಾರೆ.

‘2008-12ರ ಅವಧಿಯಲ್ಲಿ ಆರ್. ಆರ್.ನಗರ, ಮಲ್ಲೇಶ್ವರ ಹಾಗೂ ಗಾಂಧಿನಗರ ವಿಭಾಗಗಳಲ್ಲಿ ಕಾಮಗಾರಿಗಳಲ್ಲಿ ಅಕ್ರಮ ಎಸಗಿದ ಆರೋಪ ಹೊತ್ತಿರುವ ಸಿದ್ದೇಗೌಡ ನಾನಲ್ಲ. ನನ್ನ ಹೆಸರು ಕೆ.ಸಿದ್ದೇಗೌಡ. ನಾನು ಬೊಮ್ಮನಹಳ್ಳಿಯಲ್ಲಿ ಮುಖ್ಯ ಎಂಜಿನಿಯರ್ ಆಗಿ ಕರ್ತವ್ಯ ನಿರ್ವಹಿಸಿದ್ದೆ. ಆಕಸ್ಮಿಕವಾಗಿ ಅನ್ಯ ಸಿದ್ದೇಗೌಡ ಅವರ ಹೆಸರಿನ ಮುಂದೆ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸ್ಥಳವನ್ನು ಉಲ್ಲೇಖಿಸುವಾಗ ಕಣ್ತಪ್ಪಿನಿಂದ ಮುಖ್ಯ ಎಂಜಿನಿಯರ್ ಬೊಮ್ಮನಹಳ್ಳಿ ಎಂದು ನಮೂದಾಗಿತ್ತು. ಈ ಬಗ್ಗೆ ಎಲ್ಲ ವಿವರಗಳನ್ನು ತನಿಖಾ ಸಮಿತಿಯ ಜಯನಗರದ ಕಚೇರಿಗೆ, ಬಿಬಿಎಂಪಿ ಆಯುಕ್ತರಿಗೆ, ಪ್ರಧಾನ ಎಂಜಿನಿಯರ್‌ಗೆ, ಪಶ್ಚಿಮವಲಯದ ಜಂಟಿ ಆಯುಕ್ತರಿಗೆ ಹಾಗೂ ಮುಖ್ಯ ಎಂಜಿನಿಯರ್ ಅವರಿಗೆ ಈಗಾಗಲೇ ಸಲ್ಲಿಸಿದ್ದೇನೆ’ ಎಂದು ಸಿದ್ದೇಗೌಡ ಪತ್ರದಲ್ಲಿ ತಿಳಿಸಿದ್ದಾರೆ.

‘ನಾನು 2004ರ ಅ.08 ರಿಂದ 2011ರ ಮಾ. 3ರವರೆಗೆ ಕೆಎಂಆರ್‌ಪಿ ಕಚೇರಿಯಲ್ಲಿ ಯೋಜನಾ ನಿರ್ದೇಶಕನಾಗಿ ಕರ್ತವ್ಯ ನಿರ್ವಹಿಸಿದ್ದೇನೆ. ನನ್ನ ಗಮನದಲ್ಲಿದ್ದಂತೆ ಪಾಲಿಕೆಯಲ್ಲಿ ತನಿಖಾ ವರದಿಯ ಅನುಬಂಧದಲ್ಲಿ ಉಲ್ಲೇಖವಾಗಿರುವ ಹೆಸರು ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಜೋಗಿ ಸಿದ್ದೇಗೌಡ ಅವರದ್ದು. ಅವರು ಈ ವಿಭಾಗದಲ್ಲಿ ಕಾರ್ಯನಿರ್ವಹಿಸಿದ್ದಾರೆ. ತಪ್ಪುಗ್ರಹಿಕೆಯಿಂದ ಆಕಸ್ಮಿಕವಾಗಿ ತನಿಖಾ ಸಮಿತಿಯ ವರದಿಯ ಅನುಬಂಧದಲ್ಲಿ ನನ್ನ ಹೆಸರು ನಮೂದಾಗಿದೆ’ ಎಂದೂ ಅವರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಈ ಪತ್ರವನ್ನು ಉಲ್ಲೇಖಿಸಿ ರಾಕೇಶ್ ಸಿಂಗ್ ಅವರು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರಿಗೆ ಪತ್ರ ಬರೆದಿದ್ದಾರೆ. ’ಕೆ.ಸಿದ್ದೇಗೌಡ ಅವರು ನೀಡಿರುವ ಸಮಜಾಯಿಷಿಯಲ್ಲಿರುವ ಅಂಶಗಳನ್ನು ಪರಿಶೀಲಿಸಬೇಕು. ತನಿಖಾ ಸಮಿತಿಯ ತನಿಖಾ ವರದಿಯಲ್ಲಿ ಇವರ ಹೆಸರು ಸೇರಿದೆಯೋ ಇಲ್ಲವೋ ಎಂಬುದನ್ನು ಸ್ಪಷ್ಟ ಅಭಿಪ್ರಾಯದೊಂದಿಗೆ ಮೂರು ದಿನಗಳ ಒಳಗೆ ಸಲ್ಲಿಸಬೇಕು' ಎಂದೂ ಸೂಚಿಸಿದ್ದಾರೆ.

ಗಾಂಧಿನಗರ ಉಪವಿಭಾಗದಲ್ಲಿ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಆಗಿದ್ದ ಸಿದ್ದೇಗೌಡ ಅವರ ಮೇಲೆ ಕಾಮಗಾರಿಗಳ ಟೆಂಡರ್ ಕರೆಯುವಾಗ ಅಕ್ರಮ ನಡೆಸಿದ ಗುರುತರ ಆರೋಪವಿದೆ. ಗಾಂಧಿನಗರ, ಆರ್. ಆರ್.ನಗರ ಹಾಗೂ ಮಲ್ಲೇಶ್ವರ ಉಪವಿಭಾಗಗಳಲ್ಲಿ ಅನುಷ್ಠಾನವಾಗಿದ್ದ ಕಾಮಗಾರಿಗಳಲ್ಲಿ ಅಕ್ರಮ ನಡೆದಿರುವುದು ನಾಗಮೋಹನದಾಸ್ ನೇತೃತ್ವದ ತನಿಖಾ ಸಮಿತಿ ವಿಚಾರಣೆಯಲ್ಲಿ ಸಾಬೀತಾಗಿತ್ತು. ಸಿದ್ದೇಗೌಡ ಅವರನ್ನು ತಪ್ಪಿತಸ್ಥರೆಂದು ಗುರುತಿಸಿದ್ದ ಸಮಿತಿಯು ಅವರಿಗೆ ಹಿಂಬಡ್ತಿ ನೀಡುವಂತೆಯೂ ಶಿಫಾರಸು ಮಾಡಿತ್ತು.

ಹಾಲ್‌ಮಾರ್ಕ್‌ನಿಂದ ಗ್ರಾಹಕರ ಹಕ್ಕು ರಕ್ಷಣೆ: ಜೋಯಾಲುಕ್ಕಾಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೇಂದ್ರ ಸರ

ಡಿಸಿಸಿ ಬ್ಯಾಂಕ್ ಕಾರ್ಯವೈಖರಿ

ಸಚಿವರಾದ ಮಾಧುಸ್ವಾಮಿ ಸೋಮಶೇಖರ್ ಜಟಾಪಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾಲ ಮನ್ನಾ ಹಣವನ್ನು ಡಿಸಿಸಿ ಬ್ಯಾಂಕುಗಳು ರೈತರ ಹಳೇ ಬಾಕಿ ಚುಕ್ತಾ ಮಾಡಿಕೊಳ್ಳಲು ಬಳಸಿಕೊಳ್ಳುತ್ತಿವೆ. ಇದು ಸರಿಯಲ್ಲ, ಇದರಿಂದ ರೈತರಿಗೆ ಅನ್ಯಾಯವಾಗುತ್ತದೆ' ಎಂದು ಸಣ್ಣ ನೀರಾವರಿ ಸಚಿವ ಜೆ.ಸಿ.ಮಾಧುಸ್ವಾಮಿ ಅವರು ಸಚಿವ ಸಂಪುಟ ಸಭೆಯಲ್ಲಿ ಏರಿದ ಧ್ವನಿಯಲ್ಲಿ ಮಾತನಾಡಿದರು.

'ಸರ್ಕಾರ ರೈತರ ಅನುಕೂಲಕ್ಕಾಗಿ ಸಾಲ ಮನ್ನಾ ಮಾಡಿದೆ. ಆದರೆ, ಆ ಹಣವನ್ನು ಡಿಸಿಸಿ ಬ್ಯಾಂಕ್‌ಗಳು ಸಣ್ಣಪುಟ್ಟ ಸಹಕಾರ ಸಂಘಗಳಿಗೆ ತಲುಪಿಸುತ್ತಿಲ್ಲ. ಇದರಿಂದ ರೈತರ ಸಾಲ ಮನ್ನಾ ಆಗುತ್ತಿಲ್ಲ. ಅದನ್ನು ಬೇರೆ ಕಾರಣಕ್ಕೆ ಉಪಯೋಗಿಸುವುದು ಎಷ್ಟು ಸರಿ' ಎಂದು ಆಕ್ಷೇಪ ವ್ಯಕ್ತಪಡಿಸಿದರು.

ಆಗ ಮಧ್ಯಪ್ರವೇಶಿಸಿದ ಸಹಕಾರ ಸಚಿವ ಎಸ್.ಟಿ.ಸೋಮಶೇಖರ್, 'ಇದು ಸಹಕಾರ ವಲಯದ ವಿಚಾರ. ಡಿಸಿಸಿ ಬ್ಯಾಂಕುಗಳೂ ಉಳಿಯಬೇಕಲ್ಲ, ನಿಮಗೆ ಅವೆಲ್ಲ ಗೊತ್ತಾಗಲ್ಲ' ಎಂದು ಹೇಳಿದ್ದು ಮಾಧುಸ್ವಾಮಿಯವರನ್ನು ಸಿಟ್ಟಿಗೆಬ್ಬಿಸಿತು.

'ನನಗೂ ಸಹಕಾರ ವಿಚಾರ ಗೊತ್ತು, ಸಹಕಾರ ವಲಯದಲ್ಲಿ ಇದ್ದವನೇ, ಯಾರಿಂದಲೂ ಪಾಠ ಕಲಿಯಬೇಕಾಗಿಲ್ಲ. ರೈತರಿಗೆ ಅನ್ಯಾಯವಾಗುವುದನ್ನು ಸಹಿಸಲು ಸಾಧ್ಯವಿಲ್ಲ' ಎಂದು ಮಾಧುಸ್ವಾಮಿ ಹೇಳಿದರು. ಇಬ್ಬರ ಮಧ್ಯೆ ಮಾತಿನ ಚಕಮಕಿ ನಡೆಯಿತು ಎಂದು ಮೂಲಗಳು ತಿಳಿಸಿವೆ.

ಉಳಿದ ಸಚಿವರು ಇಬ್ಬರನ್ನೂ ಸಮಾಧಾನ ಪಡಿಸಿ, ವಿಷಯಕ್ಕೆ ತೆರೆ ಎಳೆದರು ಎಂದು ಮೂಲಗಳು ತಿಳಿಸಿವೆ.

'ವರ್ಗಾವಣೆ ವಿಚಾರ ನಮ್ಮನ್ನೂ ಕೇಳಿ': 'ನಮ್ಮ ಇಲಾಖೆಗಳ ಅಧಿಕಾರಿಗಳ ವರ್ಗಾವಣೆ ವಿಚಾರ ನಮಗೇ ಗೊತ್ತಾಗುವುದಿಲ್ಲ. ವರ್ಗಾವಣೆಗಳನ್ನು ನಮ್ಮ ಗಮನಕ್ಕೆ ತಂದು ಮಾಡುವುದು ಸೂಕ್ತ' ಎಂದು ಅರಣ್ಯ ಸಚಿವ ಅರವಿಂದ ಲಿಂಬಾವಳಿ ಮುಖ್ಯಮಂತ್ರಿಯವರಿಗೆ ಸಲಹೆ ನೀಡಿದರು ಎನ್ನಲಾಗಿದೆ.

ಇದಕ್ಕೆ ಹಲವು ಸಚಿವರೂ ಧ್ವನಿಗೂಡಿಸಿದರು. ಆದರೆ, ಸಲಹೆಯನ್ನು ನಯವಾಗಿ ತಿರಸ್ಕರಿಸಿದ ಮುಖ್ಯಮಂತ್ರಿ ಯಡಿಯೂರಪ್ಪ, 'ಹೊಸ ಪರಂಪರೆ ಹುಟ್ಟು ಹಾಕಲು ಸಾಧ್ಯವಿಲ್ಲ. ನಿಮಗೆ ಏನು ಕೆಲಸಗಳು ಆಗಬೇಕೊ, ನನ್ನ ಬಳಿಗೆ ಬನ್ನಿ. ಯಾವುದಕ್ಕೂ ಇಲ್ಲ ಎನ್ನುವುದಿಲ್ಲ' ಎಂಬುದಾಗಿ ಭರವಸೆ ನೀಡಿದರು ಎಂದು ಮೂಲಗಳು ತಿಳಿಸಿವೆ.

ನಗರದ ಪುರಭವನದ ಎದುರಿನ ರಸ್ತೆಯಲ್ಲಿ ಕಂಡ ಸಂಚಾರ ದಟ್ಟಣೆ (ಎಡ ಚಿತ್ರ), ಮೆಜೆಸ್ಟಿಕ್‌ನಲ್ಲಿ ಬಸ್ ಹತ್ತುವ ಸಂದರ್ಭದಲ್ಲಿ ಸುರಕ್ಷಿತ ಅಂತರ ಮರೆತ ಜನರು – ಪ್ರಜಾವಾಣಿ ಚಿತ್ರಗಳು

ಸಾರ್ವಜನಿಕ ಸಾರಿಗೆ ಸೇವೆ ಪುನರಾರಂಭ: ಎದ್ದು ಕಂಡ ಬಸ್‌ಗಳ ಕೊರತೆ • ಮೆಟ್ರೊ ರೈಲು ಬಳಕೆಗೂ ಉತ್ಸಾಹ

ನಗರದಲ್ಲಿ ಬಸ್–ರೈಲುಗಳ ಸದ್ದು ಶುರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎರಡು ತಿಂಗಳ ಬಳಿಕ ನಗರದಲ್ಲಿ ಸಾರ್ವಜನಿಕ ಸಾರಿಗೆ ಸೇವೆ ಸೋಮವಾರದಿಂದ ಮರುಪ್ರಾರಂಭವಾಯಿತು. ಬೆಳಿಗ್ಗೆಯಿಂದಲೇ ಬಿಎಂಟಿಸಿ ಬಸ್‌ಗಳು ರಸ್ತೆಗಿಳಿದರೆ, ಎರಡೂ ಮಾರ್ಗಗಳಲ್ಲಿ ಮೆಟ್ರೊ ರೈಲುಗಳು ಬೆಳಿಗ್ಗೆ ಮತ್ತು ಮಧ್ಯಾಹ್ನದ ಪಾಳಿಯಲ್ಲಿ ಸಂಚರಿಸಿದವು. 13 ತಾಸಿಗೂ ಹೆಚ್ಚು ಹೊತ್ತು ಬಸ್ ಸೇವೆ ಲಭ್ಯವಿತ್ತು.

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣ ಸೇರಿದಂತೆ ನಗರದ ಪ್ರಮುಖ ನಿಲ್ದಾಣಗಳಲ್ಲಿ ಪರ ಊರುಗಳಿಂದ ಬಂದಿಳಿದ ಪ್ರಯಾಣಿಕರು, ಕಚೇರಿ ಮತ್ತಿತರ ಕೆಲಸಗಳಿಗೆ ತೆರಳುವವರು, ಬಸ್ ಅಥವಾ ಮೆಟ್ರೊ ರೈಲು ಸೇವೆಗಳನ್ನು ಅವಲಂಬಿಸಿದರು. ಮೆಟ್ರೊ ರೈಲು ಮತ್ತು ನಿಲ್ದಾಣಗಳಲ್ಲಿ ಕಟ್ಟುನಿಟ್ಟಾಗಿ ಕೋವಿಡ್ ಮಾರ್ಗಸೂಚಿಗಳನ್ನು ಪಾಲಿಸಲಾಯಿತು.

ಒಟ್ಟು ಆಸನಗಳಲ್ಲಿ ಶೇ 50ರಷ್ಟು ಪ್ರಯಾಣಿಕರ ಸಾಮರ್ಥ್ಯದೊಂದಿಗೆ ಕಾರ್ಯಾಚರಣೆಗೆ ಅವಕಾಶ ಕಲ್ಪಿಸಲಾಗಿತ್ತು. ಆದರೆ, ಬಹುತೇಕ ಬಸ್‌ಗಳಲ್ಲಿ ಎಲ್ಲ ಸೀಟುಗಳು ಭರ್ತಿ ಆಗಿದ್ದವು. ನಿಂತು ಪ್ರಯಾಣಿಸಲು ಅವಕಾಶವಿರಲಿಲ್ಲ. ಆದರೆ, ಕೆಲವು ಮಾರ್ಗಗಳಲ್ಲಿ ಬಸ್‌ಗಳ ಸಂಖ್ಯೆ ಕಡಿಮೆಯಿದ್ದು, ಪ್ರಯಾಣಿಕರು ಹೆಚ್ಚಾಗಿದ್ದ ಕಾರಣ ಕೆಲವರು ನಿಂತು ಕೂಡ ಪ್ರಯಾಣಿಸಿದರು.

ಟೋಕನ್ ನೀಡದ ಬಗ್ಗೆ ಬಹುತೇಕ ಪ್ರಯಾಣಿಕರಿಗೆ ಮಾಹಿತಿ ಇರಲಿಲ್ಲ. ಸ್ಮಾರ್ಟ್‌ಕಾರ್ಡ್‌ಗೆ ₹50, ಅದರಲ್ಲಿ ಕನಿಷ್ಠ ಮೊತ್ತ ಉಳಿಸಬೇಕೆಂದರೆ ₹50 ಮತ್ತು ಸಂಚಾರಕ್ಕೆ ₹100 ರಿಚಾರ್ಜ್ ಮಾಡಿಸಬೇಕಾಗಿದ್ದರಿಂದ ಒಂದು ಬಾರಿ ಮಾತ್ರ ಮೆಟ್ರೊ ರೈಲಿನಲ್ಲಿ ಪ್ರಯಾಣಿಸಬೇಕೆಂದಿದ್ದವರು, ಆಟೊಗಳ ಮೊರೆ ಹೋದರು.

ಪರಿಶೀಲನೆ: ಬೆಂಗಳೂರು ಮೆಟ್ರೊ ರೈಲು ನಿಗಮದ (ಬಿಎಂಆರ್‌ಸಿಎಲ್) ವ್ಯವಸ್ಥಾಪಕ ನಿರ್ದೇಶಕ ರಾಕೇಶ್ ಸಿಂಗ್ ಅವರು, ಎಂ.ಜಿ. ರಸ್ತೆ ನಿಲ್ದಾಣಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಅಲ್ಲದೆ, ಅಲ್ಲಿಂದ ವಿಧಾನಸೌಧವರೆಗೆ ಮೆಟ್ರೊ ರೈಲಿನಲ್ಲಿಯೇ ಪ್ರಯಾಣಿಸಿದರು. ಈ ವೇಳೆ ಸಾಮಾನ್ಯ ಪ್ರಯಾಣಿಕರ ಅಭಿಪ್ರಾಯ, ಸಲಹೆ ಕೇಳಿದರು. ನಿಗಮದ ನಿರ್ದೇಶಕ ಎನ್.ಎಂ. ಧೋಕೆ, ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಯಶವಂತ್ ಚವ್ಹಾಣ್ ಮತ್ತಿತರ ಅಧಿಕಾರಿಗಳು ಇದ್ದರು.

ಹೋಟೆಲ್‌ಗಳಲ್ಲೂ ಸೇವೆ ಆರಂಭ: ನಗರದಲ್ಲಿ ಸುಮಾರು 20 ಸಾವಿರಕ್ಕೂ ಹೆಚ್ಚು ಹೋಟೆಲ್‌ಗಳಲ್ಲಿ ಸೇವೆ ಪುನರಾರಂಭವಾಯಿತು. ದರ್ಶಿನಿಗಳಲ್ಲಿ ಬೆಳಿಗ್ಗೆ 7ರಿಂದ ಸಂಜೆ 5ರವರೆಗೆ ಸೇವೆ ಲಭ್ಯವಿತ್ತು. ಸಂಜೆಯ ನಂತರ ಪಾರ್ಸೆಲ್ ತೆಗೆದುಕೊಂಡು ಹೋಗಲು ಅವಕಾಶ ನೀಡಲಾಗಿತ್ತು.

'ನಿರೀಕ್ಷಿಸಿದಷ್ಟು ಗ್ರಾಹಕರು ಮೊದಲ ದಿನ ಬಂದಿಲ್ಲ. ಮುಂದೆ ಪರಿಸ್ಥಿತಿ ಸುಧಾರಿಸಬಹುದು. ಗ್ರಾಹಕರ ಸಂಖ್ಯೆ ಹೆಚ್ಚಬಹುದು' ಎಂದು ಹೋಟೆಲೊಂದರ ಮಾಲೀಕರು ಹೇಳಿದರು.

ಚಿನ್ನಾಭರಣ ಮಳಿಗೆಗಳೂ ಸೋಮವಾರದಿಂದ ವ್ಯಾಪಾರ-ವಹಿವಾಟವನ್ನು ಪುನರಾರಂಭಿಸಿದವು.

ನಗರದ ರೆಸಿಡೆನ್ಸಿ ಅಡ್ಡರಸ್ತೆಯಲ್ಲಿರುವ ಆಭರಣ ಮಳಿಗೆಯಲ್ಲಿ ಚಿನ್ನಾಭರಣ ಖರೀದಿಯಲ್ಲಿ ತೊಡಗಿದ್ದ ಗ್ರಾಹಕರು

ಶುರುವಾಯಿತು ದಟ್ಟಣೆ ಸಮಸ್ಯೆ

ಲಾಕ್‌ಡೌನ್ ಸಡಿಲಗೊಳ್ಳುತ್ತಿದ್ದಂತೆಯೇ, ರಾಜಧಾನಿಯು ಎಂದಿನಂತೆ ಸಂಚಾರ ದಟ್ಟಣೆ ಸಮಸ್ಯೆಗೆ ಸಾಕ್ಷಿಯಾಯಿತು.

ರಾಜ್ಯ ಸಾರಿಗೆ ಮತ್ತು ಬಿಎಂಟಿಸಿ ಬಸ್ ಸಂಚಾರ ಆರಂಭವಾಗುತ್ತಿದ್ದಂತೆ ಮೆಜೆಸ್ಟಿಕ್‌ನಲ್ಲಿ ವಾಹನಗಳ ದಟ್ಟಣೆ ಉಂಟಾಯಿತು. ಪರ ಊರುಗಳಿಂದ ಮೆಜೆಸ್ಟಿಕ್‌ಗೆ ಬಂದಿಳಿದ ಅನೇಕರು ಬಿಎಂಟಿಸಿ ಬಸ್‌ಗಳನ್ನೇ ಅವಲಂಬಿಸಿದ್ದರಿಂದ ದಟ್ಟಣೆ ಉಂಟಾಗಿತ್ತು. ಮೆಜೆಸ್ಟಿಕ್ ಸುತ್ತ-ಮುತ್ತ ಅಲ್ಲದೆ, ಪ್ರಮುಖ ರಸ್ತೆಗಳಲ್ಲಿಯೂ ಸಂಚಾರ ದಟ್ಟಣೆ ಉಂಟಾಗಿತ್ತು.

2000 ಬಸ್‌ಗಳ ಕಾರ್ಯಾಚರಣೆ ನಡೆಸಲು ಉದ್ದೇಶಿಸಿದ್ದ ಬಿಎಂಟಿಸಿ, ಜನದಟ್ಟಣೆ ಹೆಚ್ಚಾಗುತ್ತಿದ್ದಂತೆ 3,000ಕ್ಕೂ ಹೆಚ್ಚು ಬಸ್‌ಗಳನ್ನು ರಸ್ತೆಗಿಳಿಸಿತು. ಬೆಳಿಗ್ಗೆ ಮತ್ತು ಸಂಜೆಯ ವೇಳೆ ಬಸ್‌ಗಳ ಕೊರತೆ ಕಾಡಿತು. ಪ್ರಯಾಣಿಕರು ಬಸ್‌ಗಾಗಿ ತಾಸುಗಟ್ಟಲೇ ಕಾಯಬೇಕಾಯಿತು.

'ಮಂಗಳವಾರ ಪ್ರಯಾಣಿಕರ ಸಂಖ್ಯೆ ಹೆಚ್ಚಾದರೆ, ಬಸ್‌ಗಳ ಸಂಖ್ಯೆಗಳನ್ನು ಮತ್ತಷ್ಟು ಹೆಚ್ಚಿಸಲಾಗುವುದು' ಎಂದು ಬಿಎಂಟಿಸಿ ಹೇಳಿದೆ.

ಅಂಕಿ ಅಂಶ

24,602
ಮೆಟ್ರೊ ರೈಲಿನಲ್ಲಿ ಸೋಮವಾರ ಪ್ರಯಾಣಿಸಿದವರು

160 ಬಾರಿ
ರೈಲುಗಳು ಸಂಚರಿಸಿದ ಸಂಖ್ಯೆ

₹10 ಲಕ್ಷ
ನಿಗಮಕ್ಕೆ ಹರಿದು ಬಂದ ಆದಾಯ

3,154
ಸೋಮವಾರ ಸಂಚರಿಸಿದ ಬಿಎಂಟಿಸಿ ಬಸ್‌ಗಳು

ಎರಡನೇ ದಿನಕ್ಕೆ ವರ್ಗಾವಣೆ ರದ್ದು!

ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕ ಹುದ್ದೆಯಲ್ಲಿದ್ದ ರಂಗಪ್ಪ ಎಸ್ (ಕೆಎಎಸ್ ಆಯ್ಕೆ ಶ್ರೇಣಿ) ಅವರು ವರ್ಗಾವಣೆಗೊಂಡು ಇನ್ನೇನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಕಾರ್ಯದರ್ಶಿಯಾಗಿ ಅಧಿಕಾರ ವಹಿಸಿಕೊಳ್ಳಬೇಕು ಎನ್ನುವಷ್ಟರಲ್ಲೇ ವರ್ಗಾವಣೆ ಆದೇಶವೇ ರದ್ದುಗೊಂಡಿದೆ!

ಬಿಡಿಎ ಕಾರ್ಯದರ್ಶಿ ಹುದ್ದೆ ಆಯಕಟ್ಟಿನ ಸ್ಥಾನ ಎಂದೇ ಪರಿಗಣಿಸಲಾಗಿದೆ. ಆ ಹುದ್ದೆಯಲ್ಲಿದ್ದ ಬಿ.ವಿ. ವಾಸಂತಿ ಅಮರ್(ಕೆಎಎಸ್ ಆಯ್ಕೆ ಶ್ರೇಣಿ) ಅವರನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾಗಿ ಇದೇ 19ರಂದು ವರ್ಗಾವಣೆ ಮಾಡಲಾಗಿತ್ತು.

ಅದೇ ರೀತಿ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತ ಡಾ. ಡಿ.ಬಿ. ನಟೇಶ್ ಅವರನ್ನು ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯ ಜಂಟಿ ನಿರ್ದೇಶಕರಾಗಿ ವರ್ಗಾವಣೆ ಮಾಡಿದ್ದ ಆದೇಶವನ್ನೂ ರದ್ದುಪಡಿಸಲಾಗಿದೆ. ಹೀಗಾಗಿ, ಶೀಲವಂತ ಎಂ. ಶಿವಕುಮಾರ್ ಅವರು ಜಂಟಿ ನಿರ್ದೇಶಕರಾಗಿ ಮುಂದುವರಿಯಲಿದ್ದಾರೆ.

ಸಿಂಗನಾಯಕನಹಳ್ಳಿ ಕೆರೆ: ಮರ ಕಡಿಯದೆಯೇ ಅಭಿವೃದ್ಧಿಪಡಿಸಲು ಆಗ್ರಹ

6,316 ಮರ ಕಡಿಯುವುದಕ್ಕೆ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಂಗನಾಯಕನಹಳ್ಳಿ ಕೆರೆ ಅಭಿವೃದ್ಧಿಗೆ 6,316 ಮರಗಳನ್ನು ಕಡಿಯುವುದಕ್ಕೆ ಪರಿಸರ ಕಾರ್ಯಕರ್ತರಿಂದ ಹಾಗೂ ವಿವಿಧ ಸಂಘಟನೆಗಳಿಂದ ಒಕ್ಕೊರಲಿನ ವಿರೋಧ ವ್ಯಕ್ತವಾಗಿದೆ. ಈ ಕೆರೆಯಂಗಳದಲ್ಲಿ ಬೆಳೆದಿರುವ ಕಿರು ಅರಣ್ಯ ಸಂರಕ್ಷಣೆಗಾಗಿ ಆನ್‌ಲೈನ್‌ನಲ್ಲೂ ಅಭಿಯಾನ ಆರಂಭವಾಗಿದೆ.

'ನಮ್ಮ ಬೆಂಗಳೂರು ಫೌಂಡೇಷನ್' (ಎನ್‌ಬಿಎಫ್) ಸದಸ್ಯರು, ಪರಿಸರ ವಿಜ್ಞಾನಿಗಳು ಹಾಗೂ ಪರಿಸರ ಕಾರ್ಯಕರ್ತರನ್ನು ಒಳಗೊಂಡ ತಂಡವು ಸ್ಥಳಕ್ಕೆ ಸೋಮವಾರ ಭೇಟಿ ನೀಡಿ ಪರಿಶೀಲನೆ ನಡೆಸಿತು.

'ಈ ಪ್ರದೇಶದಲ್ಲಿ ನಿತ್ಯವೂ ಸಾವಿರಕ್ಕೂ ಹೆಚ್ಚು ಗೋವುಗಳು ಮೇಯುತ್ತಿರುತ್ತವೆ. ಈ ಮರಗಳನ್ನೆಲ್ಲ ಕಡಿದರೆ ಇಲ್ಲಿ ಜಾನುವಾರುಗಳನ್ನು ಮೇಯಿಸುವುದಕ್ಕೂ ಸಮಸ್ಯೆ ಆಗಲಿದೆ' ಎದು ಸ್ಥಳೀಯ ನಿವಾಸಿ ಮುನಿಕೆಂಪಯ್ಯ ಅವರು ಪರಿಸರ ಕಾರ್ಯಕರ್ತರ ತಂಡದ ಜೊತೆ ಅಭಿಪ್ರಾಯ ಹಂಚಿಕೊಂಡರು.

ಕಿರು ಅರಣ್ಯದಂತೆ ಬೆಳೆದಿರುವ ಈ ಪ್ರದೇಶದಲ್ಲಿ ನೂರಾರು ನವಿಲುಗಳು ಹಾಗೂ ನಾನಾ ಬಗೆಯ ಪಕ್ಷಿಗಳು ಆಶ್ರಯ ಪಡೆದಿವೆ. ಈಗ ನವಿಲು ಸಂತಾನೋತ್ಪತ್ತಿ ಮಾಡುವ ಸಮಯ. ನವಿಲು ಮೊಟ್ಟೆ ಇಟ್ಟ ಜಾಗವನ್ನೂ ಪರಿಸರ ಕಾರ್ಯಕರ್ತರ ತಂಡದವರಿಗೆ ಸ್ಥಳೀಯರೊಬ್ಬರು ತೋರಿಸಿದರು.

ಸಿಂಗನಾಯಕನಹಳ್ಳಿ ಕೆರೆ ಅಂಗಳದಲ್ಲಿ ಬೆಳೆದಿರುವ ಮರಗಳು

'ಕೆರೆ ಅಭಿವೃದ್ಧಿಪಡಿಸುವುದನ್ನು ನಾವು ವಿರೋಧಿಸುವುದಿಲ್ಲ. ಮರಗಳನ್ನು ಉಳಿಸಿಕೊಂಡು ಅಭಿವೃದ್ಧಿ ಕಾರ್ಯ ಕೈಗೊಳ್ಳಲಿ. ಕಾಮಗಾರಿಯಿಂದ ಇಲ್ಲಿನ ಪರಿಸರ ವ್ಯವಸ್ಥೆಗೆ ಧಕ್ಕೆ ಉಂಟಾಗುವುದಿಲ್ಲ ಎಂಬುದನ್ನು ಖಾತರಿಪಡಿಸಲಿ. ಇಲ್ಲಿ ಕಡಿಯಲು ಉದ್ದೇಶಿಸಿರುವ ಮರಗಳಿಗೆ ಸಾರ್ವಜನಿಕರ ಅಭಿಪ್ರಾಯ ಸಂಗ್ರಹಕ್ಕೆ ಮುನ್ನವೇ ಗುರುತು ಸಂಖ್ಯೆ ನೀಡಿದ್ದು ಕಂಡು ಆಶ್ಚರ್ಯವಾಯಿತು' ಎಂದು ಎನ್‌ಬಿಎಫ್‌ನ ಪ್ರಧಾನ ವ್ಯವಸ್ಥಾಪಕ ವಿನೋದ್ ಜೇಕಬ್ 'ಪ್ರಜಾವಾಣಿ'ಗೆ ತಿಳಿಸಿದರು.

'ನಾವು ಇಲ್ಲಿಗೆ ಭೇಟಿ ನೀಡಿದ ಸಂದರ್ಭದಲ್ಲಿ ನರಿಯೊಂದರ ಕಳೇಬರವು ಕಾಣಸಿಕ್ಕಿದೆ. ಇಲ್ಲಿ ನರಿಗಳೂ ಹೇರಳ ಸಂಖ್ಯೆಯಲ್ಲಿವೆ. ಇಲ್ಲಿನ ಮರಗಳನ್ನು ಕಡಿದು ಕೆರೆಯ ಹೂಳೆತ್ತಿದರೆ ಇಲ್ಲಿನ ಪರಿಸರ ವ್ಯವಸ್ಥೆ ಸಂಪೂರ್ಣ ಹದಗೆಡಲಿದೆ' ಎಂದು ಬಿಬಿಬಿಎಂಪಿ ಜೀವವೈವಿಧ್ಯ ನಿರ್ವಹಣಾ ಸಮಿತಿ ಸದಸ್ಯ ವಿಜಯ್ ನಿಶಾಂತ್ ಆತಂಕ ವ್ಯಕ್ತಪಡಿಸಿದರು.

ಈ ಕೆರೆಯಂಗಳದ ಮರಗಳನ್ನು ಉಳಿಸಿಕೊಳ್ಳಲು ಹಮ್ಮಿಕೊಂಡಿರುವ ಆನ್‌ಲೈನ್ ಅಭಿಯಾನಕ್ಕೆ (https://act.jhatkaa.org/campaigns/no-axing-of-trees-hebbal-nagwara-valley) ಭಾರಿ ಬೆಂಬಲ ವ್ಯಕ್ತವಾಗಿದೆ. 8 ಸಾವಿರಕ್ಕೂ ಅಧಿಕ ಮಂದಿ ಈ ಅಭಿಯಾನಕ್ಕೆ ಬೆಂಬಲ ನೀಡಿದ್ದಾರೆ.

ಮನವಿ: ಮರಗಳನ್ನು ಕಡಿಯಲು ಅನುಮತಿ ನೀಡಬಾರದು ಎಂದು ಒತ್ತಾಯಿಸಿ ನಮ್ಮ ಬೆಂಗಳೂರು ಫೌಂಡೇಷನ್ ಬೆಂಗಳೂರು ನಗರ ಜಿಲ್ಲೆಯ ಉಪಅರಣ್ಯ ಸಂರಕ್ಷಣಾಧಿಕಾರಿಗೆ ಮನವಿ ಸಲ್ಲಿಸಿದೆ.

'ಕೆರೆ ಅಭಿವೃದ್ಧಿಗಾಗಿ ಮರ ಕಡಿಯುವ ಕುರಿತು ಸಾರ್ವಜನಿಕರ ಅಭಿಪ್ರಾಯ ಸಂಗ್ರಹಿಸಲು ಅರಣ್ಯ ಇಲಾಖೆಯ ವೆಬ್‌ಸೈಟ್‌ನಲ್ಲಿ (aranya.gov.in) ಹಂಚಿಕೊಂಡಿರುವ ಮಾಹಿತಿಯಲ್ಲಿ ಇಲ್ಲಿನ ಜೀವವೈವಿಧ್ಯದ ಬಗ್ಗೆ ಉಲ್ಲೇಖವೇ ಇಲ್ಲ. ಇಲ್ಲಿ ನೈಸರ್ಗಿಕವಾಗಿ ರೂಪುಗೊಂಡ ಪರಿಸರ ವ್ಯವಸ್ಥೆ ದಶಕಗಳಿಂದ ಅಂತರ್ಜಲ ವೃದ್ಧಿಗೂ ಕೊಡುಗೆ ನೀಡುತ್ತಿದೆ. ಈ ಅಂಶಗಳನ್ನೂ ಪರಿಗಣಿಸಬೇಕು' ಎಂದು ಪ್ರತಿಷ್ಠಾನವು ಒತ್ತಾಯಿಸಿದೆ.

'ಆಕ್ಷೇಪಣೆ ಸಲ್ಲಿಕೆಗೆ ಅವಕಾಶ ಹೆಚ್ಚಿಸಿ'

'ಕೆರೆಯ ಅಭಿವೃದ್ಧಿಗಾಗಿ ಮರಗಳನ್ನು ಕಡಿಯುವ ಕುರಿತು ಆಕ್ಷೇಪಣೆ ಸಲ್ಲಿಸಲು ಜೂನ್ 14ರಿಂದ 24ರವರೆಗೆ ಮಾತ್ರ ಅರಣ್ಯ ಇಲಾಖೆ ಕಾಲಾವಕಾಶ ನೀಡಿದೆ. ಲಾಕ್‌ಡೌನ್ ಜಾರಿಯಲ್ಲಿದ್ದ ಕಾರಣ ಈ ಕಾಲಾವಕಾಶವನ್ನು ಹೆಚ್ಚಿಸಬೇಕು' ಎಂದು ವಿನೋದ್ ಜೇಕಬ್ ಒತ್ತಾಯಿಸಿದರು.

ನೈಸ್: ₹2 ಕೋಟಿ ಪರಿಹಾರ ನೀಡಲು ದೇವೇಗೌಡರಿಗೆ ಆದೇಶ

ಬೆಂಗಳೂರು: ನಂದಿ ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟರ್‌ಪ್ರೈಸಸ್ ಲಿಮಿಟೆಡ್(ನೈಸ್) ಕಂಪನಿ ವಿರುದ್ಧ ಹೇಳಿಕೆ ನೀಡಿದ್ದ ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಅವರು ನೈಸ್ ಸಂಸ್ಥೆಗೆ ₹2 ಕೋಟಿ ಪರಿಹಾರ ನೀಡುವಂತೆ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯ ಆದೇಶಿಸಿದೆ.

ನೈಸ್ ಸಂಸ್ಥೆ ಸಲ್ಲಿಸಿದ್ದ ಮೊಕದ್ದಮೆ ವಿಚಾರಣೆ ನಡೆಸಿದ 15ನೇ ಸಿಟಿ ಸಿವಿಲ್ ನ್ಯಾಯಾಲಯದ ನ್ಯಾಯಾಧೀಶ ಮಲ್ಲನಗೌಡ ಅವರು, ಈ ಆದೇಶ ಹೊರಡಿಸಿದ್ದಾರೆ.

2011ರ ಜೂನ್ 20ರಂದು ಸುದ್ದಿ ವಾಹಿನಿಯೊಂದಕ್ಕೆ ನೀಡಿದ್ದ ಸಂದರ್ಶನದಲ್ಲಿ ನೈಸ್ ಕಂಪನಿ 'ಸಾರ್ವಜನಿಕ ಹಣ ಲೂಟಿ ಮಾಡುವ ಯೋಜನೆ' ಎಂದು ಆರೋಪಿಸಿದ್ದರು. 'ಗೌಡರ ಗರ್ಜನೆ' ಎಂಬ ಶೀರ್ಷಿಕೆಯಡಿ ಈ ಸಂದರ್ಶನ ಬಿತ್ತರವಾಗಿತ್ತು.

'ಈ ಹೇಳಿಕೆಯಿಂದ ಸಂಸ್ಥೆಯ ಗೌರವಕ್ಕೆ ಧಕ್ಕೆಯಾಗಿದೆ. ₹10 ಕೋಟಿ ಪರಿಹಾರ ನೀಡಬೇಕು' ಎಂದು ಕೋರಿ 2012ರಲ್ಲಿ ನೈಸ್ ಸಂಸ್ಥೆ ಮೊಕದ್ದಮೆ ದಾಖಲಿಸಿತ್ತು. ತಮ್ಮ ಹೇಳಿಕೆ ಸತ್ಯ ಎಂಬುದನ್ನು ದೇವೇಗೌಡರು ಸಾಬೀತುಪಡಿಸಿಲ್ಲ ಎಂದು ನ್ಯಾಯಾಲಯ ತನ್ನ ಆದೇಶದಲ್ಲಿ ಅಭಿಪ್ರಾಯಪಟ್ಟಿದೆ.

ವಿಮಾನ ನಿಲ್ದಾಣಕ್ಕೆ 'ಕಮಲ'ದ ವಿನ್ಯಾಸ: ಆಕ್ಷೇಪ

ಬೆಂಗಳೂರು: 'ಶಿವಮೊಗ್ಗ ವಿಮಾನ ನಿಲ್ದಾಣವನ್ನು ಕಮಲದ ವಿನ್ಯಾಸದಲ್ಲಿ ನಿರ್ಮಿಸಲಾಗುತ್ತಿದ್ದು, ರಾಜಕೀಯ ಪಕ್ಷದ ಚಿಹ್ನೆಯ ಪ್ರಚಾರಕ್ಕೆ ಸಾರ್ವಜನಿಕ ಹಣ ಮತ್ತು ಜಾಗ ಬಳಕೆ ಸರಿಯಲ್ಲ. ಈ ವಿನ್ಯಾಸವನ್ನು ಬದಲಿಸಬೇಕು' ಎಂದು ಕೇಂದ್ರ– ರಾಜ್ಯ ಸರ್ಕಾರವನ್ನು ಕಾಂಗ್ರೆಸ್ ಆಗ್ರಹಿಸಿದೆ.

ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಐಸಿಸಿ ವಕ್ತಾರ ಬೈಜೇಶ್ ಕಾಳಪ್ಪ ಮ

2021–22ನೇ ಸಾಲಿನ ಬಜೆಟ್‌ನಲ್ಲಿ ಉಲ್ಲೇಖಿಸಿದ್ದ ಕೆಲ ಕಾರ್ಯಕ್ರಮಗಳನ್ನು ಕೈಬಿಟ್ಟ ಬಿಬಿಎಂಪಿ

ಯಡಿಯೂರು ವಾರ್ಡ್: ಅನುದಾನಕ್ಕೆ ಕತ್ತರಿ

• ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ಬಿಬಿಎಂಪಿಯು 2021-22ನೇ ಸಾಲಿನ ಬಜೆಟ್‌ನಲ್ಲಿ ಉಲ್ಲೇಖಿಸಿದ್ದ ಕೆಲವು ಕಾರ್ಯಕ್ರಮಗಳಿಗೆ ಹಂಚಿಕೆ ಮಾಡಿದ್ದ ಅನುದಾನವನ್ನು ಅದಕ್ಕೆ ಅಂಗೀಕಾರ ನೀಡುವ ವೇಳೆ ಮರುಹಂಚಿಕೆ ಮಾಡಿದೆ. ಬಜೆಟ್‌ನಲ್ಲಿ ಯಡಿಯೂರು ವಾರ್ಡ್ ವ್ಯಾಪ್ತಿಯಲ್ಲಿ 12 ಲೆಕ್ಕ ಶೀರ್ಷಿಕೆಗಳಡಿ ವಿವಿಧ ಕಾಮಗಾರಿಗಳಿಗೆ ಹಂಚಿಕೆ ಮಾಡಿದ್ದ ₹ 4.75 ಕೋಟಿ ಅನುದಾನವನ್ನು ಅನ್ಯ ಕಾಮಗಾರಿಗಳಿಗೆ ಮರುಹಂಚಿಕೆ ಮಾಡಲಾಗಿದೆ.

2021ರ ಮಾರ್ಚ್ 27ರಂದು ಬಜೆಟ್ ಮಂಡಿಸಿದ್ದ ಬಿಬಿಎಂಪಿ ಹಣಕಾಸು ವಿಭಾಗದ ವಿಶೇಷ ಆಯುಕ್ತರಾದ ತುಳಸಿ ಮದ್ದಿನೇನಿ, 'ಪಾಲಿಕೆಯಲ್ಲಿ ಆರ್ಥಿಕ ಶಿಸ್ತು ಜಾರಿಗೆ ತರುವುದು ಬಜೆಟ್‌ನ ಮೂಲಮಂತ್ರ' ಎಂದು ಸ್ಪಷ್ಟಪಡಿಸಿದ್ದರು.

'ಪಾಲಿಕೆ ಆರ್ಥಿಕ ಸಂಕಷ್ಟದ ಪರಿಸ್ಥಿತಿ ಎದುರಿಸುತ್ತಿರುವುದರಿಂದ, ನಿರ್ವಹಣಾ ಕಾಮಗಾರಿಗಳಿಗೆ ಅನುದಾನ ಹಂಚಿಕೆ ಮಾಡಲು ಆದ್ಯತೆ ನೀಡಲಾಗಿದೆ. ಶಿಕ್ಷಣ, ಆರೋಗ್ಯ, ಕಲ್ಯಾಣ ಕಾರ್ಯಕ್ರಮಗಳು ಮತ್ತು ಕೆರೆ ಅಭಿವೃದ್ಧಿಗೆ ಹೊರತಾಗಿ ಬೇರೆ ಯಾವುದೇ ಇಲಾಖೆಯಲ್ಲೂ ಹೊಸ ಕಾಮಗಾರಿಗಳನ್ನು ಕೈಗೊಳ್ಳದಿರಲು ಪ್ರಜ್ಞಾಪೂರ್ವಕ ನಿರ್ಧಾರ ಕೈಗೊಳ್ಳಲಾಗಿದೆ' ಎಂದು ಬಜೆಟ್ ಪುಸ್ತಕದಲ್ಲೇ ಸ್ಪಷ್ಟಪಡಿಸಲಾಗಿತ್ತು.

ಪೂರ್ವ, ಪಶ್ಚಿಮ ಮತ್ತು ದಕ್ಷಿಣ ವಲಯಗಳ ಉದ್ಯಾನಗಳ ನಿರ್ವಹಣೆಗೆ ಎಸ್ಕ್ರೋ ಖಾತೆಯಲ್ಲಿ ಒಟ್ಟು ₹ 50 ಕೋಟಿ ಅನುದಾನವನ್ನು ಬಜೆಟ್‌ನಲ್ಲೇ ಕಾಯ್ದಿರಿಸಲಾಗಿತ್ತು. ಆದರೂ, ಪಾಲಿಕೆಯ ಉಳಿದೆಲ್ಲ ವಾರ್ಡ್‌ಗಳನ್ನು ಬಿಟ್ಟು ಕೇವಲ ಯಡಿಯೂರು ವಾರ್ಡ್‌ನ ಉದ್ಯಾನಗಳ ನಿರ್ವಹಣೆ ಮತ್ತಿತರ ಕೆಲಸಗಳಿಗೆ ಬಜೆಟ್‌ನಲ್ಲಿ ವಿಶೇಷ ಅನುದಾನ ಹಂಚಿಕೆ ಮಾಡಲಾಗಿತ್ತು. ಈ ಬಗ್ಗೆ ವಿವಿಧ ಪಕ್ಷಗಳ ಅನೇಕ ಮುಖಂಡರು, ಪಾಲಿಕೆಯ ಮಾಜಿ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದ್ದರು.

ಬಜೆಟ್‌ನಲ್ಲಿ ಯಡಿಯೂರು ವಾರ್ಡ್‌ನಲ್ಲಿರುವ ಹಿತ್ತಾಳೆ ಪುತ್ಥಳಿಯೊಂದಕ್ಕೆ ಪಾಲಿಷ್ ಮಾಡಿಸಿ ಬಣ್ಣ ಬಳಿಯುವುದಕ್ಕಾಗಿಯೇ ₹ 20 ಲಕ್ಷ ಕಾಯ್ದಿರಿಸಲಾಗಿತ್ತು. 'ಆರ್ಥಿಕ ಮುಗ್ಗಟ್ಟಿನ ಕಾರಣ ಹೇಳಿ ಬಜೆಟ್ ಗಾತ್ರವನ್ನು ತಗ್ಗಿಸಿದ್ದೀರಿ. ಇಂತಹ ಸಂದರ್ಭದಲ್ಲಿ ಪುತ್ಥಳಿಗೆ ಪಾಲಿಷ್ ಮಾಡಿಸುವುದಕ್ಕೆ ₹ 20 ಲಕ್ಷ ಕಾಯ್ದಿರಿಸುವುದು ಎಷ್ಟು ಸರಿ' ಎಂದು ಬಜೆಟ್ ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಹಿರಿಯ ಅಧಿಕಾರಿಗಳನ್ನು ಕೆಲವರು ಪ್ರಶ್ನೆ ಮಾಡಿದ್ದರು.

ಅವಾಕ್ಕಾದ ಅಧಿಕಾರಿಗಳು!

ಹಿರಿಯ ಅಧಿಕಾರಿಗಳು ಬಜೆಟ್ ಪುಸ್ತಕವನ್ನು ಕೂಲಂಕಷವಾಗಿ ಗಮನಿಸಿದಾಗ, ತಮ್ಮ ಗಮನಕ್ಕೆ ತಾರದೆಯೇ ಯಡಿಯೂರು ವಾರ್ಡ್‌ನ ಕೆಲವೊಂದು ಕಾರ್ಯಕ್ರಮಗಳಿಗೆ ಅನುದಾನ ಹಂಚಿಕೆ ಮಾಡಿರುವುದು ಕಂಡುಬಂದಿತ್ತು. 2021-22ನೇ ಸಾಲಿನ ಬಜೆಟ್ ರೂಪಿಸುವಾಗಲೇ ವಿಳಂಬವಾಗಿತ್ತು. ಮಾರ್ಚ್ ತಿಂಗಳ ಕೊನೆಯ ವಾರದಲ್ಲಿ ತರಾತುರಿಯಲ್ಲಿ ಬಜೆಟ್‌ಗೆ ಅಂತಿಮ ಸ್ಪರ್ಶ ನೀಡಿದ್ದರು. ಕೊನೆಯ ಹಂತದ ಗಡಿಬಿಡಿಯ ಲಾಭ ಪಡೆದ ಯಡಿಯೂರು ವಾರ್ಡ್‌ನ ಸ್ಥಳೀಯ ಮುಖಂಡರೊಬ್ಬರು ಕೆಲ ಸಿಬ್ಬಂದಿಯ ನೆರವು ಪಡೆದು ತಮ್ಮ ವಾರ್ಡ್‌ನ ಕೆಲವು ಕಾರ್ಯಕ್ರಮಗಳಿಗೆ ಅನುದಾನ ಹಂಚಿಕೆಯಾಗುವಂತೆ ನೋಡಿಕೊಂಡಿದ್ದರು.

ತಮ್ಮ ಕಣ್ತಪ್ಪಿಸಿ ಯಡಿಯೂರು ವಾರ್ಡ್‌ನ ಕೆಲವು ಕಾರ್ಯಕ್ರಮಗಳಿಗೆ ಬಜೆಟ್‌ನ ಆಶಯಕ್ಕೆ ವಿರುದ್ಧವಾಗಿ ಅನುದಾನ ಹಂಚಿಕೆ ಮಾಡಿದ ವಿಚಾರ ಗಮನಕ್ಕೆ ಬರುತ್ತಿದ್ದಂತೆಯೇ ಪಾಲಿಕೆಯ ಹಿರಿಯ ಅಧಿಕಾರಿಗಳು ಅಸಮಾಧಾನಗೊಂಡಿದ್ದರು. ಯಡಿಯೂರು ವಾರ್ಡ್‌ಗೆ ಹಂಚಿಕೆಯಾಗಿದ್ದ ₹ 4.75 ಕೋಟಿ ಅನುದಾನಕ್ಕೆ ಬಜೆಟ್ ಅಂಗೀಕರಿಸುವ ವೇಳೆ, ಕತ್ತರಿ ಹಾಕಿ, ಅದನ್ನು ಬೇರೆ ಕಾಮಗಾರಿಗಳಿಗೆ ಹಂಚಿಕೆ ಮಾಡಿದ್ದರು. ಈ ತಿದ್ದುಪಡಿಗೆ ಸಂಬಂಧಿಸಿದ ಟಿಪ್ಪಣಿಯನ್ನು ಬಿಬಿಎಂಪಿ ಆಯುಕ್ತರು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ 2021ರ ಮಾರ್ಚ್ 30ರಂದು ಮಂಡಿಸಿದ್ದರು. ಈ ತಿದ್ದುಪಡಿಗಳನ್ನು ಒಪ್ಪಿದ ನೂತನ ಆಡಳಿತಾಧಿಕಾರಿ ರಾಕೇಶ್ ಸಿಂಗ್ ಅವರು ಅನುಮೋದನೆಗಾಗಿ ಏ.07ರಂದು ನಗರಾಭಿವೃದ್ಧಿ ಇಲಾಖೆಗೆ ಕಳುಹಿಸಿದ್ದರು. ನಗರಾಭಿವೃದ್ಧಿ ಇಲಾಖೆಯೂ ಈ ತಿದ್ದುಪಡಿಗಳನ್ನು ಒಪ್ಪಿ ಪರಿಷ್ಕೃತ ಬಜೆಟ್‌ಗೆ ಅನುಮೋದನೆ ನೀಡಿದೆ.

ಕಡಿತಗೊಂಡ ಅನುದಾನ ಮರುಹಂಚಿಕೆ ವಿವರ

ಕಾರ್ಯಕ್ರಮ	ಈ ಹಿಂದೆ ಕಾಯ್ದಿರಿಸಿದ್ದ ಮೊತ್ತ (₹ ಲಕ್ಷ)	ಪರಿಷ್ಕೃತ ಮೊತ್ತ (₹ ಲಕ್ಷ)
ನಿರ್ವಹಣೆ ಮತ್ತು ದುರಸ್ತಿ- ಉದ್ಯಾನ, ಆಟದ ಮೈದಾನ, ಸ್ಮಶಾನಗಳ ವಿದ್ಯುತ್ ಪರಿಕರ ಅಳವಡಿಕೆ	200	203
ಹಾಲಿ ಸಮುದಾಯ ಭವನಗಳ ನಿರ್ವಹಣೆ	200	238
ಭದ್ರತಾ ಸೇವೆಗಳ ವೆಚ್ಚಗಳು	350	464.50
ಒಳಚರಂಡಿ ನೀರು ಸಂಸ್ಕರಣಾ ಘಟಕಗಳು ಸೇರಿ ಕೆರೆಗಳ ನಿರ್ವಹಣೆ ಎಸ್ಕ್ರೊ ಖಾತೆಗೆ	2,000	2,010
ಪೂರ್ವ, ಪಶ್ಚಿಮ ಮತ್ತು ದಕ್ಷಿಣ ವಲಯಗಳ ಉದ್ಯಾನಗಳ ನಿರ್ವಹಣೆಗೆ ಎಸ್ಕ್ರೊ ಖಾತೆಗೆ (ಪ್ರತಿ ವಲಯಕ್ಕೆ ₹ 8 ಕೋಟಿಯಂತೆ)	5,000	5,230
ಕೊಳವೆಬಾವಿ ಕೊರೆಯುವುದು, ನಿರ್ಹಣೆ, ಪಂಪ್‌ಸೆಟ್, ಪೈಪ್‌ಲೈನ್ ಅಳವಡಿಕೆ	500	520
ಉದ್ಯಾನಗಳಲ್ಲಿ ಸಾವಯವ ಗೊಬ್ಬರ ಉತ್ಪಾದನೆ	55	115

ಯಡಿಯೂರು ವಾರ್ಡ್: ಅನುದಾನ ಕಡಿತ ವಿವರ

ಕಾರ್ಯಕ್ರಮ	2021-22ನೇ ಸಾಲಿನ ಬಜೆಟ್‌ನಲ್ಲಿ ಹಂಚಿಕೆಯಾಗಿದ್ದ ಮೊತ್ತ (₹ ಲಕ್ಷ)	ಪರಿಷ್ಕೃತ ಮೊತ್ತ (₹ ಲಕ್ಷ)
ಸೌತ್ ಎಂಡ್ ವೃತ್ತದ ಗೋಪುರ ಗಡಿಯಾರ ನಿರ್ವಹಣೆ	3	0
ಸಮುದಾಯಭವನ, ಶಾಲಾ ಗ್ರಂಥಾಲಯ, ಅಂಗನವಾಡಿ ಕಟ್ಟಡ, ಆರೋಗ್ಯ ಕೇಂದ್ರ ನಿರ್ವಹಣೆ	38	0
ಕ್ರೀಡಾಂಗಣ, ಹೊಲಿಗೆ ಕೇಂದ್ರಗಳು, ಮಾರುಕಟ್ಟೆ ಸಂಕೀರ್ಣಗಳ ಸ್ವಚ್ಛತೆ ಮತ್ತು ಭದ್ರತಾ ವ್ಯವಸ್ಥೆಗೆ	49.50	0
ವಿವಿಧೋದ್ದೇಶ ಕಟ್ಟಡ, ಸೌತ್ ಎಂಡ್ ವೃತ್ತದ ಹೊಸ ಉದ್ಯಾನ ಮತ್ತು ಇತರ ಕಚೇರಿ ನಿರ್ವಹಣೆ ಮತ್ತು ಸ್ವಚ್ಛತೆ	30	0
ಯಡಿಯೂರು ಕಾಂಪ್ಲೆಕ್ಸ್, ವಾಜಪೇಯಿ ಆಟದ ಮೈದಾನ, ಡಯಾಲಿಸಿಸ್ ಕೇಂದ್ರ, ಪ್ರಾಥಮಿಕ ಆರೋಗ್ಯ ಅಂಬರ ಚುಂಬನ, ಮಹಿಳಾ ಮಂಡಳಿ ಮತ್ತು ಟೈಲರಿಂಗ್ ಕೇಂದ್ರಗಳ ಸ್ವಚ್ಛತೆಗಾಗಿ	35	0
ಯಡಿಯೂರು ಕೆರೆಯ ವಾರ್ಷಿಕ ನಿರ್ವಹಣೆ	10	0
ಉದ್ಯಾನಗಳ ನಿರ್ವಹಣೆ	90	0
ಉದ್ಯಾನ, ವಿದ್ಯುದ್ದೀಪ, ಪಾಲಿಕೆ ಕಟ್ಟಡಗಳ ವಿದ್ಯುತ್ ಕಾರ್ಯ, ಜನರೇಟರ್, ನೀರಿನ ಬಿಲುಮೆ ಮತ್ತು ಸಿಸಿಟಿವಿ ಕ್ಯಾಮೆರಾ ನಿರ್ವಹಣೆ	25	0
ಯಡಿಯೂರು ಕೆರೆ ಉದ್ಯಾನದ 'ಬಾನಾಡಿ ಮರಳೆ ಬಾ ಗೂಡಿಗೆ' ಪಕ್ಷಿಗಳ ತಾಣದ ವಾರ್ಷಿಕ ನಿರ್ವಹಣೆ	5	0
ಹಿತ್ತಾಳೆ ಪುತ್ಥಳಿಗೆ ಪಾಲಿಷ್ ಮಾಡಿಸಿ ಬಣ್ಣ ಬಳಿಯುವುದು	20	0
ಉದ್ಯಾನಗಳ ಭದ್ರತಾ ವ್ಯವಸ್ಥೆ	90	0
ನೀರು ಸರಬರಾಜು ಕೊಳವೆಮಾರ್ಗ ಮತ್ತು ಕೊಳವೆ ಬಾವಿಗಳ ವಾರ್ಷಿಕ ನಿರ್ವಹಣೆ	20	0
ಸಾವಯವ ಗೊಬ್ಬರ ಘಟಕ ಮತ್ತು ಎರೆಹುಳ ಗೊಬ್ಬರ ಘಟಕಗಳ ಆಡಳಿತ ನಿರ್ವಹಣೆ	60	0

ಬಿಬಿಎಂಪಿ ಸುದ್ದಿ

ಸುದ್ದಿ 2 ನಿಮಿಷ

'ಕೃಷಿ ಕಾಯ್ದೆ: ಟೂಲ್‌ಕಿಟ್ ಪಕ್ಷಗಳ ಪಿತೂರಿ'

ಬೆಂಗಳೂರು: 'ರೈತರ ಹಿತಕ್ಕಾಗಿ ರೂಪಿಸಿದ ಕೃಷಿ ಕಾಯ್ದೆಗಳ ಬಗ್ಗೆ ಮಿತ್ರನನ್ನು ಶತ್ರುವಾಗಿ ಬಿಂಬಿಸುವ ಟೂಲ್‌ಕಿಟ್ ಪಕ್ಷಗಳು ಅನುಮಾನದ ಬೀಜ ಬಿತ್ತಿವೆ' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಹೇಳಿದ್ದಾರೆ.

ಬಿಜೆಪಿ ರೈತ ಮೋರ್ಚಾದ ಪದಾಧಿಕಾರಿಗಳ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, 'ಕೃಷಿಕರನ್ನು ಸ್ವಾವಲಂಬಿಗಳಾಗಿಸುವ ಆತ್ಮನಿರ್ಭರ ಕೃಷಿ ನೀತಿಯನ್ನು ಜಾರಿಗೊಳಿಸಲಾಗಿದೆ.

ರೈತರ ಕಲ್ಯಾಣವೇ ನಮ್ಮ ಗುರಿ' ಎಂದರು.

ಕೃಷಿಕನನ್ನು ಸಂಕಷ್ಟದಿಂದ ಪಾರು ಮಾಡಲು ಬಿಜೆಪಿ ಸರ್ಕಾರ ಐತಿಹಾಸಿಕ ನಿರ್ಧಾರ ಮಾಡಿದೆ. ಬ್ಲೇಡ್ ತಯಾರಿಸುವವನು ತನ್ನ ಉತ್ಪನ್ನದ ಗರಿಷ್ಠ ಮಾರಾಟ ದರ ನಿರ್ಧರಿಸುತ್ತಾನೆ. ಆದರೆ, ಹೆಂಡತಿ ಮಕ್ಕಳೊಂದಿಗೆ ದುಡಿದ ರೈತರು ಯಾವ ಬೆಳೆಗೂ ಎಂಆರ್‌ಪಿ ನಿಗದಿ ಮಾಡುವ ಪರಿಸ್ಥಿತಿಯಲ್ಲಿ ಇಲ್ಲ ಎಂದು ಅವರು ಹೇಳಿದರು.

ರೈತರ ಬೆಳೆಗೆ ಬೆಲೆ ಖಾತರಿಪಡಿಸುವ ಗುತ್ತಿಗೆ ಕೃಷಿ ವಿರುದ್ಧವೂ ಅಪ ಪ್ರಚಾರ ನಡೆದಿದೆ. ರೈತ ಸ್ವಾವಲಂಬಿ ಆಗಬಾರದು ಎಂಬ ಪ್ರಯತ್ನ ಷಡ್ಯಂತ್ರ ಇದರ ಹಿಂದಿದೆ. ರೈತರ ಚಳವಳಿ ಹೆಸರಲ್ಲಿ ಅರಾಜಕತೆ ಸೃಷ್ಟಿಸುವ ಪ್ರಯತ್ನ ನಡೆಯಿತು ಎಂದು ಅವರು ದೂರಿದರು.

ಕಾರ್ಯಕ್ರಮದಲ್ಲಿ ಬಿಜೆಪಿ ರಾಜ್ಯ ಪ್ರಧಾನಕಾರ್ಯದರ್ಶಿ ಎನ್. ರವಿಕುಮಾರ್, ರೈತ ಮೋರ್ಚಾ ಅಧ್ಯಕ್ಷ ಈರಣ್ಣ ಕಡಾಡಿ ಇದ್ದರು.

'ಪಾದಚಾರಿ ಮಾರ್ಗದಲ್ಲಿ ಪೊಲೀಸರ ವಾಹನ ನಿಲುಗಡೆ ತಪ್ಪಿಸಿ'

ಬೆಂಗಳೂರು: 'ಪೊಲೀಸ್ ಠಾಣೆಗಳ ಮುಂಭಾಗದ ಪಾದಚಾರಿ ಮಾರ್ಗಗಳು ವಾಹನ ನಿಲುಗಡೆಯಿಂದ ಮುಕ್ತ ಆಗಿರುವ ಬಗ್ಗೆ ಪೊಲೀಸರು ಖಚಿತಪಡಿಸಿಕೊಳ್ಳಬೇಕು' ಎಂದು ಹೈಕೋರ್ಟ್ ಹೇಳಿದೆ. ರಾಜ್ಯ ಸರ್ಕಾರ ಜೂ.15ರಂದು ಹೊರಡಿಸಿದ ಸುತ್ತೋಲೆ ಪರಿಶೀಲನೆ ವೇಳೆ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ಈ ಅಭಿಪ್ರಾಯಪಟ್ಟಿತು.

ಪಾದಚಾರಿ ಮಾರ್ಗ ಅತಿಕ್ರಮಣ ಮಾಡಿ ವಾಹನ ನಿಲುಗಡೆ ಮಾಡುವವರ ವಿರುದ್ಧ ಕ್ರಿಮಿನಲ್ ಕಾನೂನು ಜಾರಿಗೆ ತರುವಂತೆ ಸರ್ಕಾರಕ್ಕೆ ಪೀಠ ಈ ಹಿಂದೆ ನಿರ್ದೇಶನ ನೀಡಿತ್ತು. ನಿಯಮ ಉಲ್ಲಂಘಿಸುವವರ ವಿರುದ್ಧ ದಂಡ ವಿಧಿಸುವಂತೆ ನಿರ್ದೇಶನ ನೀಡಿ ಸರ್ಕಾರ ಸುತ್ತೋಲೆ ಹೊರಡಿಸಿತ್ತು. ಇನ್ನೂ ಉತ್ತಮವಾದ ನಿಯಮ ರೂಪಿಸುವಂತೆ ತಿಳಿಸಿದ ಪೀಠ, ವಿಚಾರಣೆಯನ್ನು ಜು.1ಕ್ಕೆ ಮುಂದೂಡಿತು.

'ಅಶೋಕನಗರ ಪೊಲೀಸ್ ಠಾಣೆ ಹೊರಗೆ ದ್ವಿಚಕ್ರ ವಾಹನಗಳನ್ನು ಯಾವಾಗಲೂ ನಿಲ್ಲಿಸಲಾಗಿರುತ್ತದೆ. ಜಯನಗರ ಠಾಣೆಯ ಹೊರಗೆ ಇದೇ ರೀತಿ ವಾಹನ ನಿಲುಗಡೆ ಬಗ್ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿಯೊಂದು ಸಲ್ಲಿಕೆಯಾಗಿದೆ' ಎಂದು ಮುಖ್ಯ ನ್ಯಾಯಮೂರ್ತಿ ಮೌಖಿಕವಾಗಿ ತಿಳಿಸಿದರು.

ಪಾದಚಾರಿ ಮಾರ್ಗ ದುರಸ್ತಿ

ಸ್ಮಾರ್ಟ್ ಸಿಟಿ ಯೋಜನೆಗಾಗಿ ಕೆ.ಜಿ.ರಸ್ತೆಯ ಪಾದಚಾರಿ ಮಾರ್ಗವನ್ನು ಜೆಸಿಬಿಯಿಂದ ಅಗೆಯುತ್ತಿದ್ದು ಇದರಿಂದ ನಾಗರಿಕರು ತೊಂದರೆ ಅನುಭವಿಸುವಂತಾಗಿದೆ

-ಪ್ರಜಾವಾಣಿ ಚಿತ್ರ

ಜೂನ್ 2ರಂದು ಆರವಿಂದ ಬೆಲ್ಲದಗೆ ಕರೆ?

ಯುವರಾಜ್ ಬಳಸಿದ್ದ ಮೊಬೈಲ್ ಸಿಡಿಆರ್ ಪರಿಶೀಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಶಾಸಕ ಅರವಿಂದ ಬೆಲ್ಲದ ಅವರಿಗೆ ಕರೆ ಮಾಡಿದ್ದ ಎನ್ನಲಾದ ಯುವರಾಜ್ ಅಲಿಯಾಸ್ ಸೇವಾಲಾಲ್ ಸ್ವಾಮೀಜಿಯನ್ನು ವಿಚಾರಣೆ ನಡೆಸಿ ಹೇಳಿಕೆ ಪಡೆದಿರುವ ಎಸಿಪಿ ನೇತೃತ್ವದ ತಂಡ, ಆತ ಬಳಸಿದ್ದ ಮೊಬೈಲ್ ಕರೆಗಳ ಸಿಡಿಆರ್ ಪರಿಶೀಲಿಸಲು ಮುಂದಾಗಿದೆ.

ನಗರದ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಭಾನುವಾರ ಭೇಟಿ ನೀಡಿದ್ದ ಎಸಿಪಿ ಯತಿರಾಜ್ ನೇತೃತ್ವದ ತಂಡ, ಯುವರಾಜ್‌ನನ್ನೇ ವಿಚಾರಣೆ ನಡೆಸಿತ್ತು. ಪೊಲೀಸ್ ಕಸ್ಟಡಿ, ಆಸ್ಪತ್ರೆ ಹಾಗೂ ಜೈಲಿನಲ್ಲಿದ್ದ ವೇಳೆ ಮೊಬೈಲ್ ಬಳಕೆ ಮಾಡಿದ್ದ ಬಗ್ಗೆ ಮಾಹಿತಿಯನ್ನೂ ಕಲೆಹಾಕಿತ್ತು.

ಯುವರಾಜ್ ಬಳಸಿದ್ದ ಎನ್ನಲಾದ ಮೊಬೈಲ್ ನಂಬರ್‌ಗಳ ಪಟ್ಟಿ ಸಿದ್ಧಪಡಿಸಿರುವ ತಂಡ, ಅವುಗಳ ಕರೆ ವಿವರವನ್ನು ನೀಡುವಂತೆ ಸಂಬಂಧಪಟ್ಟ ಮೊಬೈಲ್ ಸೇವಾ ಕಂಪನಿಗಳನ್ನು ಕೋರಿದೆ. ಮಂಗಳವಾರ ಸಿಡಿಆರ್ ವಿವರ ಸಿಗುವ ಸಾಧ್ಯತೆ ಇದೆ. ಯುವರಾಜ್ ಯಾರಿಗೆಲ್ಲ ಕರೆ ಮಾಡಿದ್ದನೆಂಬುದು ಸಿಡಿಆರ್‌ನಿಂದ ತಿಳಿಯಲಿದೆ.

ಜೂನ್ 2ರಂದು ಕರೆ: 'ಕೋಟ್ಯಂತರ ರೂಪಾಯಿ ವಂಚನೆ ಪ್ರಕರಣದಲ್ಲಿ ಬಂಧಿತನಾಗಿ ನ್ಯಾಯಾಂಗ ಬಂಧನದಲ್ಲಿರುವ ಯುವರಾಜ್, ಇದೇ ಜೂನ್ 2ರಂದು ಅರವಿಂದ ಬೆಲ್ಲದ ಅವರಿಗೆ ಎರಡು ಬಾರಿ ಕರೆ ಮಾಡಿರುವುದು ಪುರಾವೆಗಳಿಂದ ಗೊತ್ತಾಗಿದೆ' ಎಂದು ಮೂಲಗಳು ಹೇಳಿವೆ.

'ಕಾರ್ಯಕ್ರಮವೊಂದರಲ್ಲಿ ಬೆಲ್ಲದ ಪಾಲ್ಗೊಂಡಿದ್ದರು. ಅವರ ಮೊಬೈಲ್ ಆಪ್ತ ಸಹಾಯಕನ ಬಳಿ ಇತ್ತು. ಅವರೇ ಯುವರಾಜ್‌ನ ಕರೆ ಸ್ವೀಕರಿಸಿ, ಕೆಲ ಸಮಯ ಬಿಟ್ಟು ವಾಪಸು ಕರೆ ಮಾಡಿಸುವುದಾಗಿ ಹೇಳಿದ್ದರು. ಕಾರ್ಯಕ್ರಮ ಮುಗಿಯುತ್ತಿದ್ದಂತೆ ಶಾಸಕ ಬೆಲ್ಲದಗೆ ಮೊಬೈಲ್ ಕೊಟ್ಟಿದ್ದ ಆಪ್ತ ಸಹಾಯಕ, 'ಯಾರೋ ಸ್ವಾಮೀಜಿ ಕರೆ ಮಾಡಿದ್ದರು' ಎಂಬುದಾಗಿ ಹೇಳಿದ್ದರು.'

'ಅದೇ ನಂಬರ್‌ಗೆ ವಾಪಸು ಕರೆ ಮಾಡಿದ್ದ ಬೆಲ್ಲದ, 'ಯಾರು' ಎಂದು ಪ್ರಶ್ನಿಸಿದ್ದರು. ಯುವರಾಜ್, 'ನಾನು ಯುವರಾಜ್ ಸ್ವಾಮೀಜಿ. ನಿಮ್ಮ ತಂದೆ ಚಂದ್ರಕಾಂತ ಬೆಲ್ಲದ ಅವರಿಗೆ ನನ್ನ ಪರಿಚಯವಿದೆ. ನನ್ನ ಮೇಲೆ ಸುಳ್ಳು ಪ್ರಕರಣ ದಾಖಲಿಸಿ ಜೈಲಿಗೆ ಕಳುಹಿಸಿದ್ದಾರೆ. ಇದೀಗ ಜೈಲಿನಲ್ಲಿ ಇದ್ದೇನೆ. ದಯವಿಟ್ಟು ನನ್ನನ್ನು ಜೈಲು ವಾಸದಿಂದ ಪಾರು ಮಾಡಿ' ಎಂದಿದ್ದ. ಅದನ್ನು ಕೇಳುತ್ತಿದ್ದಂತೆ ಬೆಲ್ಲದ ಕರೆ ಕಡಿತಗೊಳಿಸಿದ್ದರು.

ಅದಾದ 15 ದಿನಗಳ ಬಳಿಕ ಬೆಲ್ಲದ ಅವರು ಗೃಹ ಸಚಿವರಿಗೆ ದೂರು ನೀಡಿದ್ದಾರೆ. ಈ ಎಲ್ಲ ಸಂಗತಿ ಅವರ ಹೇಳಿಕೆಯಲ್ಲಿದೆ' ಎಂದೂ ಮೂಲಗಳು ತಿಳಿಸಿವೆ.

ಆಸ್ಪತ್ರೆಗೂ ದಾಖಲು: 'ಹುಷಾರಿಲ್ಲವೆಂದು ಹೇಳಿ ಯುವರಾಜ್, ಆಗಾಗ ಆಸ್ಪತ್ರೆಗೂ ದಾಖಲಾಗುತ್ತಿದ್ದ. ಆ ಸಂದರ್ಭದಲ್ಲಿ ಆತ ಮೊಬೈಲ್ ಬಳಸಿರುವ ಮಾಹಿತಿ ಇದೆ. ಸಿಡಿಆರ್ ಬಂದ ಬಳಿಕ ಯಾವೆಲ್ಲ ನೆಟ್‌ವರ್ಕ್‌ನಿಂದ ಮೊಬೈಲ್ ಬಳಸಲಾಗಿದೆ ಎಂಬುದು ತಿಳಿಯಲಿದೆ' ಎಂದು ಮೂಲಗಳು ಹೇಳಿವೆ.

ಸಂಕ್ಷಿಪ್ತ ಸುದ್ದಿ

ಹಳಗನ್ನಡ-ಶಾಸನ ತರಗತಿ ಆರಂಭ

ಬೆಂಗಳೂರು: ಬಿಎಂಶ್ರೀ ಪ್ರತಿಷ್ಠಾನವು ಜುಲೈ 22ರಿಂದ ಹಳಗನ್ನಡ ಹಾಗೂ ಶಾಸನ ತರಗತಿಗಳನ್ನು ಆನ್‌ಲೈನ್ ಮೂಲಕ ಆರಂಭಿಸಲಿದೆ.

ಆಸಕ್ತರು ದೂರವಾಣಿ ಸಂಖ್ಯೆ 080-26615877 ಅಥವಾ ಇ-ಮೇಲ್ bmsritrust@gmail.com ಮೂಲಕ ಜುಲೈ 15ರೊಳಗೆ ಹೆಸರು ನೋಂದಾಯಿಸಿಕೊಳ್ಳುವಂತೆ ಪ್ರಕಟಣೆ ತಿಳಿಸಿದೆ.

ಆನ್‌ಲೈನ್ ಪ್ರತಿಭಾ ಪ್ರದರ್ಶನ ಸ್ಪರ್ಧೆ

ಬೆಂಗಳೂರು: ಆರ್ಟ್ ರಿಫ್ಲೆಕ್ಷನ್ಸ್ ಅಕಾಡೆಮಿಯು ಪ್ರತಿಭಾ ಪ್ರದರ್ಶನ, ಚಿತ್ರಕಲಾ ಸ್ಪರ್ಧೆಯನ್ನು ಆನ್‌ಲೈನ್ ಮೂಲಕ ಹಮ್ಮಿಕೊಂಡಿದೆ.

ಸಂಗೀತ, ಭರತನಾಟ್ಯ, ವಾದ್ಯ ನುಡಿಸುವುದು, ಚಿತ್ರಕಲೆ, ಕ್ರಾಫ್ಟ್ ಅಥವಾ ಯಾವುದೇ ನಿಮ್ಮ ಪ್ರತಿಭೆಯ 4ರಿಂದ 5 ನಿಮಿಷದ ವಿಡಿಯೊ ಚಿತ್ರೀಕರಿಸಿ ಜೂನ್ 30ರೊಳಗೆ ಕಳುಹಿಸಬೇಕು. ಸಂಪರ್ಕ: 9380671947

ನಿಧನ ವಾರ್ತೆ

ವಿಜಯಕುಮಾರ್

ಬೆಂಗಳೂರು: ಮರಿಯಪ್ಪನಪಾಳ್ಯದ ನಾಗದೇವನಹಳ್ಳಿಯ ವಿಜಯಕುಮಾರ್ ಸಿ. ಕ

ಗರ್ಭಿಣಿಯರಿಗೆ ಮನೆಯಿಂದ ಕೆಲಸ: ನೌಕರರ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಸಂಪೂರ್ಣ ನಿಯಂತ್ರಣಕ್ಕೆ ಬಾರದೇ ಇರುವುದರಿಂದ ಶಿಕ್ಷಣ ಇಲಾಖೆಯೂ ಸೇರಿದಂತೆ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಗರ್ಭಿಣಿಯರಿಗೆ ಮುಂದಿನ ಎರಡು ತಿಂಗಳು ಮನೆಯಿಂದಲೇ ಕೆಲಸ ಮಾಡಲು ಅವಕಾಶ ಕಲ್ಪಿಸಬೇಕು ಎಂದು ಆಗ್ರಹಿಸಿ ಮುಖ್ಯಮಂತ್ರಿ ಬಿ. ಎಸ್. ಯಡಿಯೂರಪ್ಪ ಅವರಿಗೆ ರಾಜ್ಯದ ಸರ್ಕಾರದ ಮಹಿಳಾ ನೌಕರರು ಮನವಿ ಸಲ್ಲಿಸಿದ್ದಾರೆ.

ಮುಖ್ಯ ಕಾರ್ಯದರ್ಶಿ ಪಿ. ರವಿ ಕುಮಾರ್ ಅವರು ಇದೇ 19ರಂದು ಹೊರಡಿಸಿದ್ದ ಆದೇಶದಲ್ಲಿ ಗ್ರೂಪ್ ಬಿ, ಸಿ ಮತ್ತು ಡಿ ವೃಂದದ ಅಧಿಕಾರಿ ಮತ್ತು ಸಿಬ್ಬಂದಿ ವರ್ಗ ಶೇ 50ರಂತೆ ಪಾಳಿ ಆಧಾರದಲ್ಲಿ ಕರ್ತವ್ಯಕ್ಕೆ ಹಾಜರಾಗುವಂತೆ ಸೂಚಿಸಿದ್ದಾರೆ. ಅಲ್ಲದೆ, ಈ ವರ್ಗದ ಸಿಬ್ಬಂದಿ ಕೇಂದ್ರ ಸ್ಥಾನದಲ್ಲಿಯೇ ಇದ್ದು, ಕೋವಿಡ್ ಕರ್ತವ್ಯಕ್ಕೆ ನಿಯೋಜಿಸಿದರೆ ಕಡ್ಡಾಯವಾಗಿ ಹಾಜರಾಗಬೇಕು ಎಂದೂ ತಿಳಿಸಿದ್ದಾರೆ.

ಆದರೆ, ಈ ಸುತ್ತೋಲೆಯಲ್ಲಿ ಗರ್ಭಿಣಿಯರು ಮತ್ತು ಅಂಗವಿಕಲ ನೌಕರರಿಗೆ ಯಾವುದೇ ವಿನಾಯಿತಿ ನೀಡಿಲ್ಲ. ರಾಜ್ಯದಲ್ಲಿರುವ ಅಂದಾಜು 6 ಲಕ್ಷ ಸರ್ಕಾರಿ ನೌಕರರ ಪೈಕಿ ಶೇ 10ರಷ್ಟು ಗರ್ಭಿಣಿಯರು ಇರಬಹುದು. ಗರ್ಭಿಣಿಯರು ಕೋವಿಡ್ ಲಸಿಕೆತೆಗೆದುಕೊಳ್ಳಬಾರದು ಎಂದು ವಿಶ್ವ ಆರೋಗ್ಯ ಸಂಸ್ಥೆ, ಐಸಿಎಂಆರ್, ಏಮ್ಸ್, ರಾಜ್ಯ ಕೋವಿಡ್ ತಾಂತ್ರಿಕ ಸಮಿತಿಯ ತಜ್ಞರು ಸಲಹೆ ನೀಡಿದ್ದಾರೆ. ಹೀಗಾಗಿ, ಕೋವಿಡ್ ಮತ್ತು ಕಪ್ಪು ಶಿಲೀಂಧ್ರ (ಬ್ಲ್ಯಾಕ್ ಫಂಗಸ್) ರೋಗ ಸಂಪೂರ್ಣ ನಿಯಂತ್ರಣಕ್ಕೆ ಬರುವವರೆಗೆ ಗರ್ಭಿಣಿ ನೌಕರರಿಗೆ ತಮ್ಮ ಮನೆಯಿಂದಲೇ ಕೆಲಸ ನಿರ್ವಹಿಸಲು ಅವಕಾಶ ಕಲ್ಪಿಸಬೇಕು ಎಂದು ಮನವಿಯಲ್ಲಿ ಆಗ್ರಹಿಸಿದ್ದಾರೆ.

'ಬೇಗ ಬರ್ತೀನಿ ಅಂದವ್ರು ಬರಲೇ ಇಲ್ಲ'

• ಜಿ.ಶಿವಕುಮಾರ

ಬೆಂಗಳೂರು: 'ನಾನು ಚೆನ್ನಾಗಿದ್ದೀನಿ. ಇನ್ನೆರಡು ದಿನಗಳಲ್ಲಿ ಹುಷಾರಾಗಿ ಮನೆಗೆ ಬಂದು ಬಿಡ್ತೀನಿ. ನೀವೇನು ಹೆದರಬೇಡಿ'.. ಕೋವಿಡ್‌ನಿಂದಾಗಿ ಆಸ್ಪತ್ರೆಗೆ ದಾಖಲಾಗಿದ್ದ ಅಪ್ಪ, ತುರ್ತು ನಿಗಾ ಘಟಕಕ್ಕೆ (ಐಸಿಯು) ಸ್ಥಳಾಂತರಗೊಳ್ಳುವ ಮುನ್ನ ಆಡಿದ್ದ ಮಾತುಗಳಿವು.

ಅವರ ಆ ನುಡಿಗಳು ನಮ್ಮಲ್ಲಿ ಆಶಾಭಾವನೆ ಮೂಡಿಸಿದ್ದವು. ಅವರ ಬರುವಿಕೆಯನ್ನು ಎದುರು ನೋಡುತ್ತಿದ್ದೆವು. ಆದರೆ, ವಿಧಿಯಾಟ ಬೇರೆಯದ್ದೇ ಆಗಿತ್ತು. ಐಸಿಯುಗೆ ದಾಖಲಾಗಿ ಮೂರೇ ದಿನಗಳಲ್ಲಿ ಅವರು ಬಾರದ ಲೋಕಕ್ಕೆ ಹೋಗಿಬಿಟ್ಟರು. ಅಮ್ಮ ಕೂಡ ದೂರವಾದರು...

ಹೀಗೆ ಹೇಳುವಾಗ ಶ್ರೀದುರ್ಗಾ ಭವಾನಿ ಅವರ ಧ್ವನಿ ಕ್ಷೀಣಿಸಿತು. ಕಣ್ಣುಗಳು ಹನಿಗೂಡಿದವು.

ಮಕ್ಕಳ ಆಸರೆ ಕಸಿದ ಕೊರೊನಾ

ದುರ್ಗಾ ಭವಾನಿ ಅವರದ್ದು ಕೂಡು ಕುಟುಂಬ. ಅವರ ಅಪ್ಪ ಜೆ.ಶ್ರೀನಿವಾಸ್ (49 ವರ್ಷ) ಹಾಗೂ ದೊಡ್ಡಪ್ಪ ಶೇಖರ್ ಒಂದೇ ಮನೆಯಲ್ಲಿ ವಾಸವಿದ್ದರು. ಮೊದಲು ಅವರ ತಾಯಿ ಸಂಧ್ಯಾಗೆ (43) ಜ್ವರ ಬಾಧಿಸಿತ್ತು. ಕ್ಲಿನಿಕ್‌ಗೆ ಹೋಗಿ ತೋರಿಸಿಕೊಂಡಾಗ ಏನೂ ತೊಂದರೆ ಇಲ್ಲ ಎಂದು ವೈದ್ಯರು ತಿಳಿಸಿದ್ದರು. ಅವರು ಸೂಚಿಸಿದ ಔಷಧವನ್ನು ನಿತ್ಯವೂ ಸೇವಿಸುತ್ತಿದ್ದರು. ಒಂದು ವಾರದ ಬಳಿಕ ದೇಹದ ಆಮ್ಲಜನಕ ಪ್ರಮಾಣ ಕಡಿಮೆಯಾಗಿ ಉಸಿರಾಟದ ತೊಂದರೆ ಕಾಣಿಸಿಕೊಂಡಿತು. ಏಪ್ರಿಲ್ 20ಕ್ಕೆ ಮನೆಯವರೆಲ್ಲಾ ಕೋವಿಡ್ ಪರೀಕ್ಷೆ ಮಾಡಿಸಿಕೊಂಡಿದ್ದರು. ಆಗ ಕುಟುಂಬದ ಎಂಟು ಮಂದಿಗೆ ಸೋಂಕು ತಗುಲಿರುವುದು ಖಾತರಿಯಾಗಿತ್ತು.

'ಅಪ್ಪ ಹಾಗೂ ಅಮ್ಮನನ್ನು ಕ್ರಮವಾಗಿ ಈಸ್ಟ್ ಪಾಯಿಂಟ್ ಹಾಗೂ ವೈಟ್‌ಫೀಲ್ಡ್‌ನ ವೈದೇಹಿ ಆಸ್ಪತ್ರೆಗೆ ದಾಖಲಿಸಿದ್ದೆವು. ಅಪ್ಪನ ಸಾವಿಗೆ ಆಸ್ಪತ್ರೆಯವರ ನಿರ್ಲಕ್ಷ್ಯವೇ ಕಾರಣ. ವಿಶೇಷ ವಾರ್ಡ್‌ನಲ್ಲಿ ಚಿಕಿತ್ಸೆ ಕೊಡುತ್ತಿರುವುದಾಗಿ ಹೇಳಿ ಅವರನ್ನು ಒಂಬತ್ತು ದಿನಗಳವರೆಗೆ ಸಾಮಾನ್ಯ ವಾರ್ಡ್‌ನಲ್ಲಿ ಇಡಲಾಗಿತ್ತು. ಅಲ್ಲಿ ಸರಿಯಾಗಿ ಚಿಕಿತ್ಸೆಯನ್ನೇ ನೀಡಲಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

'ಅಪ್ಪ ಆಸ್ಪತ್ರೆಯಲ್ಲಿರುವ ವಿಷಯ ಅಮ್ಮನಿಗೆ ಗೊತ್ತಿರಲಿಲ್ಲ. ಅಮ್ಮ ಆಸ್ಪತ್ರೆಗೆ ದಾಖಲಾಗಿದ್ದನ್ನು ಅಪ್ಪನಿಗೆ ಹೇಳಿರಲಿಲ್ಲ. ಅಮ್ಮನಿಗೆ ನಾನೇ ನಿತ್ಯ ಊಟ ಮಾಡಿಸುತ್ತಿದ್ದೆ. ಆಗ ಚೆನ್ನಾಗಿ ಮಾತನಾಡುತ್ತಿದ್ದರು. ತಂಗಿ (ದಿವ್ಯಶ್ರೀ), ಅಪ್ಪ ಹಾಗೂ ಮನೆಯವರೆಲ್ಲಾ ಹೇಗಿದ್ದಾರೆ ಎಂದು ವಿಚಾರಿಸುತ್ತಿದ್ದರು. ಮೇ 9ರಂದು ಅಮ್ಮ ಅಸುನೀಗಿದರು. ಈ ವಿಚಾರವನ್ನು ಅಪ್ಪನಿಗೆ ತಿಳಿಸಿರಲಿಲ್ಲ. ಮನೆಗೆ ಮರಳಿದ ನಂತರ ಹೇಳೋಣ ಎಂದು ಸುಮ್ಮನಿದ್ದೆವು. ಆದರೆ, ಮೇ 14 ರಂದು ಅಪ್ಪ ಕೂಡ ಹೋಗಿಬಿಟ್ಟರು. ಅಮ್ಮನ ಸಾವಿನ ವಿಚಾರವನ್ನು ಕೊನೆಗೂ ಅವರಿಗೆ ತಿಳಿಸಲು ಆಗಲಿಲ್ಲ' ಎನ್ನುತ್ತಾ ಕಣ್ಣೀರಿಟ್ಟರು.

'ತುಂಬಾ ನೋವಾಗುತ್ತಿದೆ. ವಿಪರೀತ ಹೊಟ್ಟೆ ಹಸಿವು. ಇಲ್ಲಿ ಕೊಡುತ್ತಿರುವ ಆಹಾರ ಸಾಕಾಗುತ್ತಿಲ್ಲ ಎಂದು ಅಪ್ಪ ಹೇಳುತ್ತಿದ್ದರು. ನೀನು ಬರಬೇಕಾದರೆ ಏನಾದರೂ ತೆಗೆದುಕೊಂಡು ಬಾ ಎನ್ನುತ್ತಿದ್ದರು. ಹೀಗಾಗಿ ಹಣ್ಣು ಕೊಟ್ಟು ಬರುತ್ತಿದ್ದೆ. ಅಪ್ಪನ ಚಿಕಿತ್ಸೆಗೆ ₹1.57 ಲಕ್ಷ ವೆಚ್ಚವಾಗಿತ್ತು. ಅದನ್ನು ಕಟ್ಟಲು ಆಗಲಿಲ್ಲ. ಹೀಗಾಗಿ ಆಸ್ಪತ್ರೆಯವರು ಶವ ಹಸ್ತಾಂತರಿಸಲು ಸತಾಯಿಸಿದರು. ಇಂತಹ ಪರಿಸ್ಥಿತಿ ಯಾರಿಗೂ ಬರದಿರಲಿ' ಎಂದು ಗದ್ಗದಿತರಾದರು.

'ನಮ್ಮ ಜೊತೆ ಮಾತನಾಡಲೂ ಹಿಂಜರಿಯುತ್ತಾರೆ'

'ಕೋವಿಡ್ ಇದೆ ಎಂಬುದು ಗೊತ್ತಾದ ಬಳಿಕ ನೆರೆಹೊರೆಯವರು ನಮ್ಮ ನೆರವಿಗೆ ಬರಲಿಲ್ಲ. ಕರೆ ಮಾಡಿ ಆರೋಗ್ಯ ವಿಚಾರಿಸುವ ಸೌಜನ್ಯವನ್ನೂ ತೋರಲಿಲ್ಲ. ಇಂತಹ ಕಹಿ ಅನುಭವವಾಗಿದ್ದು ಇದೇ ಮೊದಲು. ನಾವೆಲ್ಲಾ ಈಗ ಚೇತರಿಸಿಕೊಂಡಿದ್ದೇವೆ. ಹೀಗಿದ್ದರೂ ಯಾರೂ ಮಾತನಾಡಿಸುತ್ತಿಲ್ಲ. ನಮ್ಮನ್ನು ಕಂಡರೆ ಸಾಕು ದೂರ ಹೋಗುತ್ತಾರೆ. ಹೀಗಾಗಿ ಮನೆ ಬಿಟ್ಟು ಆಚೆ ಹೋಗುತ್ತಿಲ್ಲ' ಎಂದು ದುರ್ಗಾ ಭವಾನಿ ಅವರ ದೊಡ್ಡಮ್ಮ ಭಾರ್ಗವಿ ಬೇಸರ ತೋಡಿಕೊಂಡರು.

'ದುರ್ಗಾ ವೈದ್ಯಕೀಯ ವ್ಯಾಸಂಗ ಮಾಡುತ್ತಿದ್ದಾಳೆ. ಆಕೆಯ ಶಿಕ್ಷಣ ವೆಚ್ಚ ಭರಿಸುವುದು ನಮ್ಮಿಂದ ಸಾಧ್ಯವಿಲ್ಲ. ಯಾರಾದರೂ ಸಹಾಯ ಮಾಡಿದರೆ ಅನುಕೂಲವಾಗುತ್ತದೆ' ಎಂದು ಮನವಿ ಮಾಡಿದರು.

ಭಾರ್ಗವಿ ಅವರ ಸಂಪರ್ಕಕ್ಕೆ: 8971845849.

ಜಾಗೃತಿ ಕೊರತೆ, ಹಾರ್ಮೋನ್‌ನಲ್ಲಿ ಅಸಮತೋಲನ ಆಗುವ ಭಯ

ಲಸಿಕೆ ಪಡೆಯಲು ತೃತೀಯ ಲಿಂಗಿಗಳ ಹಿಂದೇಟು

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಜಾಗೃತಿಯ ಕೊರತೆ, ಹಾರ್ಮೋನ್‌ಗಳಲ್ಲಿ ಅಸಮತೋಲನ ಆಗುವ ಭಯದಿಂದ ಕೋವಿಡ್ ಲಸಿಕೆ ಪಡೆಯಲು ತೃತೀಯ ಲಿಂಗಿಗಳು ಹಿಂದೇಟು ಹಾಕುತ್ತಿದ್ದಾರೆ. ಇನ್ನೊಂದೆಡೆ, ಎಷ್ಟು ತೃತೀಯಲಿಂಗಿಗಳಿಗೆ ಲಸಿಕೆ ಹಾಕಲಾಗಿದೆ ಎಂದು ಮಾಹಿತಿಯೇ ಕೋವಿನ್(cowin.gov.in) ಪೋರ್ಟಲ್‌ನಲ್ಲಿ ಲಭ್ಯವಿಲ್ಲ.

ಕೋವಿಡ್ ಲಸಿಕೆ ಬಗ್ಗೆ ಜಾಗೃತಿ ಇಲ್ಲದ ಕಾರಣ ಸಾಮಾನ್ಯ ಜನರೇ ಭಯದಿಂದ ಸಂಪೂರ್ಣವಾಗಿ ಹೊರಗೆ ಬಂದಿಲ್ಲ. ಲಿಂಗ ಪರಿವರ್ತನೆ ಮಾಡಿಸಿಕೊಂಡವರಲ್ಲಿ ಲಸಿಕೆ ಪಡೆದರೆ ಹಾರ್ಮೋನ್‌ನಲ್ಲಿ ವ್ಯತ್ಯಾಸ ಆಗಬಹುದೇ ಎಂಬ ಭಯ ಅವರಿಸಿದೆ. 'ಮದ್ಯಪಾನ, ಗುಟ್ಕಾ ಸೇವನೆಯಂತಹ ದುಶ್ಚಟ ಕೂಡ ಇವರನ್ನು ಕಾಡುತ್ತಿರುವ ಕಾರಣ ಲಸಿಕೆ ಪಡೆಯಲು ಹಿಂಜರಿಯುತ್ತಿದ್ದಾರೆ' ಎಂದು ಸಮುದಾಯದ ಮುಖಂಡರು ಹೇಳುತ್ತಾರೆ.

ವಿಶೇಷ ಕಾರ್ಯಾಚರಣೆ

ಬಿಬಿಎಂಪಿ ವ್ಯಾಪ್ತಿಯಲ್ಲಿ ತೃತೀಯ ಲಿಂಗಿಗಳಿಗೆ ಕೋವಿಡ್ ಲಸಿಕೆ ಕೊಡಿಸಲು ವಿಶೇಷ ಕಾರ್ಯಾಚರಣೆಯನ್ನು ಸ್ಮಾರ್ಟ್‌ಸಿಟಿ ಯೋಜನೆಯ ವಿಶೇಷಾಧಿಕಾರಿ ಡಾ. ವೈಷ್ಣವಿ ಮಾಡುತ್ತಿದ್ದಾರೆ.

ಕೇವಲ ಲಸಿಕೆ ಪಡೆಯಲು ಕರೆದರೆ ಹಿಂದೇಟು ಹಾಕುತ್ತಿರುವ ಕಾರಣ ಸ್ಥಳೀಯ ಮುಖಂಡರು, ಸ್ವಯಂಸೇವಾ ಸಂಸ್ಥೆಗಳನ್ನು ಸಂಪರ್ಕಿಸಿ ಅವರಿಂದ ದಿನಸಿ ಕಿಟ್ ಕೊಡಿಸುವ ಮೂಲಕ ಆ ಸಮುದಾಯದವರನ್ನು ವಿಶ್ವಾಸಕ್ಕೆ ಪಡೆದು ಬಳಿಕ ಅವರಿಗೆ ಲಸಿಕೆ ನೀಡುವ ಕೆಲಸ ಮಾಡುತ್ತಿದ್ದಾರೆ.

'ಲಸಿಕೆ ಬಗ್ಗೆ ಅವರಿಗೆ ತಿಳಿವಳಿಕೆ ಕೊರತೆ ಇದೆ. ಮೊದಲು ಅವರನ್ನು ವಿಶ್ವಾಸಕ್ಕೆ ಪಡೆದುಕೊಳ್ಳಬೇಕು. ಬಳಿಕ ಅವರಿಗೆ ತಿಳಿವಳಿಕೆ ನೀಡಿ ಆರೋಗ್ಯ ಸೇವೆ ನೀಡಬೇಕು. ಆ ಕೆಲಸ ಮಾಡುತ್ತಿದ್ದೇನೆ. ಈ ಸಮುದಾಯದವರಿಗೆ ಲಸಿಕೆ ಕೊಡಿಸುವುದು ಒಳ್ಳೆಯ ಕೆಲಸ ಎಂದು ನಂಬಿದ್ದೇನೆ' ಎಂದು ವೈಷ್ಣವಿ ತಿಳಿಸಿದರು.

'ಲಿಂಗ ಪರಿವರ್ತನೆ ಆದ ಕೆಲ ದಿನಗಳ ಕಾಲ ಮತ್ತು ಆ ಪ್ರಕ್ರಿಯೆಯಲ್ಲಿ ಇರುವವರಿಗೆ ಹಾರ್ಮೋನ್ ಥೆರಪಿ ನಡೆಯುತ್ತಿರುತ್ತದೆ. ಲಸಿಕೆ ಪಡೆಯುವ ಒಂದು ವಾರ ಮುಂಚೆ ಮತ್ತು ಲಸಿಕೆ ಪಡೆದ ಒಂದು ತಿಂಗಳ ತನಕ ಈ ಥೆರಪಿಗೆ ಒಳಗಾಗುವಂತಿಲ್ಲ. ಈ ಬಗ್ಗೆ ನಿಖರವಾದ ಮಾಹಿತಿಯನ್ನು ಸರ್ಕಾರ ಪ್ರಚಾರ ಮಾಡದ ಕಾರಣ ನಮ್ಮ ಸಮುದಾಯ ಭಯದಿಂದ ಹೊರಗೆ ಬಂದಿಲ್ಲ' ಎಂದು ಎಲ್‌ಜಿಬಿಟಿ ಕಾರ್ಯಕರ್ತೆ ಅಕ್ಕೈ ಪದ್ಮಶಾಲಿ ಹೇಳಿದರು.

ಪ್ರಜಾವಾಣಿ ವಿಶೇಷ

'ಸಾಮಾನ್ಯ ಜನರಲ್ಲಿ ಇರುವ ಭಯಕ್ಕಿಂತ ಮೂರು ಪಟ್ಟು ಭಯ ನಮ್ಮ ಸಮುದಾಯದವರಲ್ಲಿ ಇದೆ. ರಕ್ತ ಹೆಪ್ಪುಗಟ್ಟುವ ಸಾಧ್ಯತೆ ಇದೆ ಎಂಬ ಆತಂಕದಿಂದ ಬಹುತೇಕರು ಲಸಿಕೆ ಪಡೆಯಲು ಮುಂದೆ ಬರುತ್ತಿಲ್ಲ' ಎಂದು ಅವರು ಹೇಳಿದರು.

'ಲಾಕ್‌ಡೌನ್ ಸಂದರ್ಭದಲ್ಲಿ ದುಡಿಮೆಯೇ ಇಲ್ಲದೆ ಹೊಟ್ಟೆಪಾಡಿಗೆ ಪರದಾಡಬೇಕಾದ ಸ್ಥಿತಿ ಇತ್ತು. ಈ ಸಂದರ್ಭದಲ್ಲಿ ಜೀವನ ನಡೆಸುವುದೇ ಕಷ್ಟವಾಗಿದೆ. ಹೀಗಾಗಿ, ಲಸಿಕೆ ಬಗ್ಗೆ ಸಮುದಾಯದವರು ಯೋಚಿಸುತ್ತಿಲ್ಲ. ಇಂತಹ ಶೋಚನೀಯ ಸಂದರ್ಭದಲ್ಲಿ ತೃತೀಯ ಲಿಂಗಿಗಳಿಗೆ ಜೀವನ ನಡೆಸಲು ಬೇಕಾದ ಸಹಕಾರ ನೀಡುವ ಜತೆಗೆ ಅವರಲ್ಲಿ ಜಾಗೃತಿ ಮೂಡಿಸಿ ಕೋವಿಡ್ ಲಸಿಕೆ ನೀಡಬೇಕಾಗುತ್ತದೆ' ಎಂದು ಅವರು ತಿಳಿಸಿದರು.

'ಈ ಕೆಲಸವನ್ನು ಸರ್ಕಾರ ಸಮರ್ಪಕವಾಗಿ ಮಾಡಿಲ್ಲ. ಈ ಬಗ್ಗೆ ಇ-ಮೇಲ್ ಮಾಡಿದ ಬಳಿಕ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಡಾ. ವೈಷ್ಣವಿ ಮತ್ತು ಡಾ. ರವೀಂದ್ರ ಅವರನ್ನು ನೇಮಿಸಿದರು. ಅವರ ಪ್ರಯತ್ನದ ಫಲವಾಗಿ ಕೆಂಗೇರಿ, ದಾಸರಹಳ್ಳಿ, ಹೆಬ್ಬಾಳ, ಬ್ಯಾಟರಾಯನಪುರ, ಜಯನಗರದಲ್ಲಿ ಒಂದಷ್ಟು ಜನರಿಗೆ ಇತ್ತೀಚೆಗೆ ಲಸಿಕೆ ನೀಡಲಾಗುತ್ತಿದೆ' ಎಂದು ಹೇಳಿದರು.

'ವಿಕ್ಟೋರಿಯಾ ಆಸ್ಪತ್ರೆ, ನಿಮ್ಹಾನ್ಸ್, ಎಂ.ಎಸ್. ರಾಮಯ್ಯ ಆಸ್ಪತ್ರೆಗಳ ಮೂಲಕ ಜಾಗೃತಿ ಮೂಡಿಸುವ ಕೆಲಸವನ್ನು ನಾವೂ ಮಾಡುತ್ತಿದ್ದೇವೆ. ನಾವು ಲಸಿಕೆ ಪಡೆದ ಚಿತ್ರಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿ ಭಯ ಹೋಗಲಾಡಿಸುವ ಕೆಲಸ ಮಾಡುತ್ತಿದ್ದೇವೆ. ವ್ಯಾಪಕವಾಗಿ ಪ್ರಚಾರ ಮಾಡುವ ಕೆಲಸ ಸರ್ಕಾರದ್ದು' ಎಂದರು.

ಲಸಿಕೆಗೆ ಸರದಿ... ಮಹಾ ಲಸಿಕಾ ಅಭಿಯಾನದ ವೇಳೆ ಕಾಟನ್ ಪೇಟೆಯಲ್ಲಿ ನಾಗರಿಕರು ಲಸಿಕೆಗಾಗಿ ಸರದಿ ಸಾಲಿನಲ್ಲಿ ನಿಂತಿದ್ದರು -ಪ್ರಜಾವಾಣಿ ಚಿತ್ರ

ಬಿಬಿಎಂಪಿ ವ್ಯಾಪ್ತಿಯಲ್ಲಿ 1.69 ಲಕ್ಷ ಮಂದಿಗೆ ಲಸಿಕೆ

ಲಸಿಕಾ ಉತ್ಸವಕ್ಕೆ ಉತ್ತಮ ಸ್ಪಂದನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಕೋವಿಡ್ ಲಸಿಕೆ ಉತ್ಸವಕ್ಕೆ ಉತ್ತಮ ಸ್ಪಂದನೆ ವ್ಯಕ್ತವಾಯಿತು. ಈ ಮೊದಲೇ ನಿಗದಿ ಪಡಿಸಿದ್ದ ಎಲ್ಲ ಲಸಿಕಾ ಕೇಂದ್ರಗಳಲ್ಲಿ ಬೆಳಿಗ್ಗೆಯಿಂದಲೇ ಜನರ ಸಾಲು ಕಂಡು ಬಂತು.

18 ವರ್ಷ ಮೇಲ್ಪಟ್ಟ ಎಲ್ಲರಿಗೂ ಲಸಿಕೆ ಹಾಕಲಾಗುವುದು ಎಂದು ಸರ್ಕಾರ ಮೊದಲೇ ಘೋಷಿಸಿದ್ದರಿಂದ ಯುವಕ-ಯುವತಿಯರು, ಮಧ್ಯವಯಸ್ಕರು ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬಂದರು. ಲಸಿಕಾ ಅಭಿಯಾನ ಹಮ್ಮಿಕೊಂಡಿರುವ ಬಗ್ಗೆ ಸ್ಥಳೀಯರಿಗೆ ಮುಂಚಿತವಾಗಿಯೇ ಮನೆ ಮನೆಗೆ ತೆರಳಿ ಮಾಹಿತಿ ನೀಡಲಾಗಿತ್ತು. ಲಸಿಕೆ ವಿತರಿಸುವ ಕುರಿತು ಕಾರ್ಖಾನೆ, ಹೋಟೆಲ್, ಕಟ್ಟಡ ಮಾಲೀಕರಲ್ಲದೆ, ಇನ್ನಿತರೆ ಮುಖ್ಯಸ್ಥರಿಗೆ ಮಾಹಿತಿ ನೀಡಲಾಗಿತ್ತು.

ಕೆಲವು ಕೇಂದ್ರಗಳಲ್ಲಿ ಅಂತರ ನಿಯಮ ಪಾಲನೆ ಸರಿಯಾಗಿರಲಿಲ್ಲ. ಬಿಬಿಎಂಪಿ ಇಟ್ಟುಕೊಂಡಿದ್ದ ಗುರಿಗಿಂತ ದುಪ್ಪಟ್ಟು ಪ್ರಮಾಣದಲ್ಲಿ ಲಸಿಕೆ ವಿತರಿಸಲಾಯಿತು. ಲಸಿಕೆ ಕೊರತೆ ಕಂಡು ಬರಲಿಲ್ಲ. ಬಹುತೇಕ ಕಡೆ ಹಿರಿಯ ಅಧಿಕಾರಿಗಳು ಖುದ್ದು ಸ್ಥಳಕ್ಕೆ ಭೇಟಿ ನೀಡಿ ಲಸಿಕಾ ಉತ್ಸವದ ಪ್ರಕ್ರಿಯೆ ಪರಿಶೀಲಿಸಿದರು.

ಸರ್ಕಾರಿ ಕಚೇರಿಗಳು, ಬೀದಿ ಬದಿ ವ್ಯಾಪಾರಿಗಳು, ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿ, ಕ್ಯಾಬ್/ಆಟೊ ಚಾಲಕರು, ಎಪಿಎಂಸಿ ಮಾರುಕಟ್ಟೆಯಲ್ಲಿನ ವರ್ತಕರು, ಬ್ಯಾಂಕ್ ಸಿಬ್ಬಂದಿ, ಹೋಟೆಲ್ ಸಿಬ್ಬಂದಿ, ಕಟ್ಟಡ ಕಾರ್ಮಿಕರು ಸೇರಿದಂತೆ ಇನ್ನಿತರೆ ಕಡೆ ಪಾಳಿಯಂತೆ ಲಸಿಕೆ ನೀಡಲಾಯಿತು.

ವೈದ್ಯರು, ಶುಶ್ರೂಷಕರು, ಅಶಾ ಕಾರ್ಯಕರ್ತೆಯರು, ಹೋಂ ಗಾರ್ಡ್‌ಗಳು, ಮಾರ್ಷಲ್‌ಗಳು ಲಸಿಕೆ ಕಾರ್ಯಕ್ರಮ ನಿರ್ವಹಿಸಿದರು.

1.69 ಲಕ್ಷ ಲಸಿಕೆ: ಬಿಬಿಎಂಪಿ ವ್ಯಾಪ್ತಿಯ ಎಲ್ಲ 8 ವಲಯಗಳಲ್ಲಿ ಒಟ್ಟು 65 ಸಾವಿರ ಮಂದಿಗೆ ಲಸಿಕೆ ನೀಡುವ ಗುರಿ ಹೊಂದಲಾಗಿತ್ತು. ಆದರೆ 1,68,958 ಮಂದಿಗೆ ಲಸಿಕೆ ನೀಡಲಾಯಿತು.

ಅಂಕಿ ಅಂಶ

1.44 ಲಕ್ಷ ಡೋಸ್ ಕೋವಿಶೀಲ್ಡ್ ಲಸಿಕೆ ವಿತರಣೆ

43,000 ಡೋಸ್ ಕೋವ್ಯಾಕ್ಸಿನ್ ಲಸಿಕೆ ವಿತರಣೆ

528 ಕಾರ್ಯನಿರ್ವಹಿಸಿದ ಲಸಿಕಾ ಕೇಂದ್ರಗಳ ಸಂಖ್ಯೆ

978 ಸೋಮವಾರ ಕೆಲಸ ಮಾಡಿದ ಆಶಾ ಕಾರ್ಯಕರ್ತೆಯರು

ನಗರದ ಕೋವಿಡ್ ಅಂಕಿ-ಅಂಶ



ಒಟ್ಟು ಪ್ರಕರಣಗಳು	12,06,293 ▲
ಸಕ್ರಿಯ ಪ್ರಕರಣಗಳು	70,312 ▼
ಗುಣಮುಖರಾದವರು	11,20,507 ▲
ಒಟ್ಟು ಸಾವು	15,473 ▲
ದಿನದ ವರಿಕೆ	
ಹೊಸ ಪ್ರಕರಣ	1,034 ▲
ಗುಣಮುಖ	1,976 ▲
ಸಾವು	28 ▲

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

'ಡಿಸೆಂಬರ್ ಅಂತ್ಯದೊಳಗೆ ಎಲ್ಲರಿಗೂ ಲಸಿಕೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಡಿಸೆಂಬರ್ ಅಂತ್ಯದೊಳಗೆ ಎಲ್ಲ ನಾಗರಿಕರಿಗೂ ಲಸಿಕೆ ನೀಡಿ ರಾಜ್ಯವನ್ನು ಕೋವಿಡ್ ಮುಕ್ತಗೊಳಿಸುವ ಗುರಿ ಇದೆ' ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ತಿಳಿಸಿದರು.

ಶಿವಾಜಿನಗರದ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಕಾಲೇಜಿನಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಲಸಿಕಾ ಮಹಾ ಅಭಿಯಾನದಲ್ಲಿ ಪಾಲ್ಗೊಂಡು ಮಾತನಾಡಿದರು.

'ರಾಜ್ಯದಲ್ಲಿ 15 ಲಕ್ಷಕ್ಕೂ ಅಧಿಕ ಕೋವಿಶೀಲ್ಡ್ ಹಾಗೂ 7 ಲಕ್ಷ ಕೋವ್ಯಾಕ್ಸಿನ್ ಲಸಿಕೆ ದಾಸ್ತಾನು ಇದೆ. ಈಗಾಗಲೇ 1.86 ಕೋಟಿ ಜನರಿಗೆ ಲಸಿಕೆ ನೀಡಲಾಗಿದೆ. ರಾಜ್ಯದಾದ್ಯಂತ ಒಟ್ಟು 13 ಸಾವಿರ ಲಸಿಕಾ ಕೇಂದ್ರಗಳಿದ್ದು ಒಂದು ಕೇಂದ್ರ

ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಅಧಿಕಾರಸ್ಥರ ಪೈಪೋಟಿ: ಆಡಳಿತ ಯಂತ್ರಾಂಗಕ್ಕೆ ಕುಸಿತದ ಭೀತಿ

ಬೆಂಗಳೂರು: ರಾಜ್ಯ ಕೋವಿಡ್ ಸಂಕಷ್ಟದಲ್ಲಿ ಸಿಲುಕಿರುವಾಗಲೇ ಆಡಳಿತಾರೂಢ ಬಿಜೆಪಿಯಲ್ಲಿ ನಾಯಕತ್ವ ಬದಲಾವಣೆಯ ಪ್ರಶ್ನೆ ಮುನ್ನೆಲೆಗೆ ಬಂದಿದೆ. ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಪರ ಮತ್ತು ವಿರೋಧಿ ಬಣಗಳು ಪೈಪೋಟಿಗೆ ಇಳಿದಿವೆ. ಇನ್ನೊಂದು ತಟಸ್ಥ ಬಣವೂ ಸೃಷ್ಟಿಯಾಗಿದೆ. ಮೂರು ಬಣಗಳ ಪೈಪೋಟಿ, ತಂತ್ರ, ಪ್ರತಿತಂತ್ರಗಳಿಂದ ರಾಜ್ಯದ ಆಡಳಿತ ವ್ಯವಸ್ಥೆಯ ಮೇಲಾಗುತ್ತಿರುವ ಪರಿಣಾಮ, ರಾಜಕೀಯ ಒಳಸುಳಿಗಳ ಕುರಿತು 'ಪ್ರಜಾವಾಣಿ' ಸೋಮವಾರ ಆಯೋಜಿಸಿದ್ದ 'ಬಿಜೆಪಿ: ಮನೆಯೊಂದು ಮೂರು ಬಾಗಿಲು?' ಕುರಿತ ಸಂವಾದದಲ್ಲಿ ಪಾಲ್ಗೊಂಡಿದ್ದ ಅತಿಥಿಗಳು ಹಂಚಿಕೊಂಡಿರುವ ಅಭಿಪ್ರಾಯಗಳ ಸಂಕ್ಷಿಪ್ತ ರೂಪ ಇಲ್ಲಿದೆ...

ಪ್ರಜಾವಾಣಿ facebook LIVE

ಕುಸಿತದತ್ತ ಆಡಳಿತ ವ್ಯವಸ್ಥೆ

ರಾಜಕೀಯ ಪಕ್ಷಗಳ ವಿಚಾರಕ್ಕೆ ಬಂದಾಗ ಎಲ್ಲರ ಮನೆ ದೋಸೆಯೂ ತೂತೇ. ಆದರೆ, ಆಡಳಿತ ಪಕ್ಷದವರ ಮೇಲೆ ಹೆಚ್ಚಿನ ಜವಾಬ್ದಾರಿ ಇದೆ. ಈಗ ಇರುವ ಸರ್ಕಾರಕ್ಕೆ ಮೂರು ಬಾಗಿಲು ಇದೆಯೆ? ನೂರು ಬಾಗಿಲು ಇದೆಯೆ? ಎಂಬುದು ಯಾರಿಗೂ ಅರ್ಥವಾಗುತ್ತಿಲ್ಲ. ಈ ಸರ್ಕಾರದಲ್ಲಿ ಎಲ್ಲವೂ ಅಯೋಮಯವಾಗಿದೆ.

ಸಚಿವ ಕೆ.ಎಸ್. ಈಶ್ವರಪ್ಪ ಅವರು ಮುಖ್ಯಮಂತ್ರಿಯವರ ವಿರುದ್ಧವೇ ರಾಜ್ಯಪಾಲರಿಗೆ ದೂರು ನೀಡಿದ್ದಾರೆ. ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ನೇಮಕಕ್ಕೆ ಸಂಬಂಧಿಸಿದಂತೆ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಮತ್ತು ಡಾ.ಕೆ. ಸುಧಾಕರ್ ನಡುವೆ ಸಂಘರ್ಷ ನಡೆಯುತ್ತಿದೆ. ಸಚಿವ ಸಿ.ಪಿ. ಯೋಗೇಶ್ವರರ್ ಕೂಡ ಮುಖ್ಯಮಂತ್ರಿ ಯಡಿಯೂರಪ್ಪ ಅವರ ಕುಟುಂಬದ ಸದಸ್ಯರ ಹಸ್ತಕ್ಷೇಪದ ಕುರಿತು ಆರೋಪ ಮಾಡಿದ್ದಾರೆ.

ಕೋವಿಡ್‌ನಂತಹ ಸಂಕಷ್ಟದ ಸಂದರ್ಭದಲ್ಲಿ ಉತ್ತಮ ಆಡಳಿತ ಸಿಗುತ್ತಿಲ್ಲ ಎಂಬುದು ನಮ್ಮ ಆತಂಕ. ರಾಜ್ಯದ ಆರ್ಥಿಕ ಪರಿಸ್ಥಿತಿ ಕುಸಿದಿದೆ. ಸಾಲ ಹೆಚ್ಚಾಗಿದೆ. ಜಿಎಸ್‌ಟಿ ಪರಿಹಾರ ಸರಿಯಾಗಿ ಸಿಗುತ್ತಿಲ್ಲ. ಬಿಜೆಪಿಯಲ್ಲಿ ಗಟ್ಟಿಯಾದ ನಾಯಕತ್ವ ಇದ್ದಿದ್ದರೆ ದೆಹಲಿಯಲ್ಲಿ ಇದೆಲ್ಲವನ್ನೂ ಪ್ರಶ್ನಿಸುತ್ತಿರಲಿಲ್ಲವೆ?

ಆಡಳಿತದ ಮೇಲೆ ಸರ್ಕಾರಕ್ಕೆ ಹಿಡಿತ ಇಲ್ಲ ಎಂಬುದಕ್ಕೆ ಹತ್ತಾರು ಉದಾಹರಣೆಗಳಿವೆ. ಸರ್ಕಾರ ನಡೆಸುವವರ ಕಡೆಗೆ ಎಲ್ಲರ ಗಮನ ಇರುತ್ತದೆ. ವಿರೋಧ ಪಕ್ಷಗಳಲ್ಲಿ ಏನು ನಡೆಯುತ್ತಿದೆ ಎಂಬುದು ಮುಖ್ಯವಾಗುವುದಿಲ್ಲ. ಶಿಸ್ತು ಶಿಸ್ತು ಎನ್ನುವ ಬಿಜೆಪಿ ವರಿಷ್ಠರು ಹಾದಿ, ಬೀದಿಯಲ್ಲಿ ಆರೋಪ ಮಾಡುವ ಶಾಸಕರ ಕುರಿತು ಏನು ಮಾಡಿದ್ದಾರೆ? ರಾಜ್ಯದ ಜನರ ಅಭಿಪ್ರಾಯ ಸಂಗ್ರಹಿಸಿ. ವಾಸ್ತವ ಸ್ಥಿತಿ ಗೊತ್ತಾಗುತ್ತದೆ.

'ಬಿಎಸ್‌ವೈ ಮುಕ್ತ ಬಿಜೆಪಿ' ಅಭಿಯಾನ ಶುರುವಾಗಿದೆ. ಅದರ ಪರಿಣಾಮವಾಗಿ ಆಡಳಿತ ವ್ಯವಸ್ಥೆ ಕುಸಿಯುತ್ತಿದೆ. ಎಲ್ಲರೂ ಸ್ವಂತ ಹಿತಾಸಕ್ತಿ ಕಾಯಲು ಹೊರಟಿದ್ದಾರೆ.

– **ಪ್ರಿಯಾಂಕ್ ಖರ್ಗೆ,** ಕಾಂಗ್ರೆಸ್ ಶಾಸಕ

ಅಪಸ್ವರ ಎತ್ತಿರುವವರು ಮೂರೇ ಮಂದಿ

ಪಕ್ಷದಲ್ಲಿ ನಡೆಯುತ್ತಿರುವ ಬೆಳವಣಿಗೆಗಳಿಂದ ರಾಜ್ಯ ಸರ್ಕಾರದ ಆಡಳಿತದ ಮೇಲೆ ಯಾವುದೇ ಪರಿಣಾಮ ಉಂಟಾಗಿಲ್ಲ. ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ನೇತೃತ್ವದ ಸರ್ಕಾರ ಆಡಳಿತ ನಿರ್ವಹಣೆ ಮತ್ತು ಕೋವಿಡ್ ನಿಯಂತ್ರಣದಲ್ಲಿ ಕಿಂಚಿತ್ತೂ ಲೋಪ ಎಸಗಿಲ್ಲ.

ನಾಯಕತ್ವದ ವಿಚಾರದಲ್ಲಿ ಅಪಸ್ವರಗಳು ಬಂದದ್ದು ನಿಜ. ಅದು ಬಯಲಿಗೆ ಬರಬಾರದಿತ್ತು. ಪಕ್ಷದಲ್ಲಿ ಆಂತರಿಕವಾಗಿ ಚರ್ಚಿಸಬೇಕಾದ ವಿಚಾರಗಳು ಬಯಲಿಗೆ ಬಂದಾಗ ಅವು ಪ್ರತಿಪಕ್ಷಗಳಿಗೆ ಆಹಾರವಾಗುವುದು ಸಹಜ. ರಾಷ್ಟ್ರೀಯ ಪಕ್ಷಗಳಲ್ಲಿ ಹೈಕಮಾಂಡ್ ಎಲ್ಲವನ್ನೂ ಸರಿಪಡಿಸುತ್ತದೆ.

ವಿಶ್ವನಾಥ್, ಯೋಗೇಶ್ವರ್ ನೇರವಾಗಿ ಮುಖ್ಯಮಂತ್ರಿಯವರ ಮಗನ ವಿರುದ್ಧ ಆರೋಪ ಮಾಡುತ್ತಿದ್ದಾರೆ. ವಿಶ್ವನಾಥ್ ಮತ್ತು ಯೋಗೇಶ್ವರ್ ಹೇಗೆಲ್ಲಾ ಪಕ್ಷಾಂತರ ಮಾಡಿದರು ಮತ್ತು ಅವರು ಹೇಗೆ ವರ್ತಿಸುತ್ತಿದ್ದಾರೆ ಎಂಬುದನ್ನು ಎಲ್ಲರೂ ಗಮನಿಸುತ್ತಿದ್ದಾರೆ. ಯಡಿಯೂರಪ್ಪ ಸದೃಢರಾಗಿದ್ದಾರೆ. ಉತ್ತಮ ಆಡಳಿತ ನೀಡುತ್ತಿದ್ದಾರೆ. ಅವರ ನಾಯಕತ್ವದ ವಿರುದ್ಧ ಮಾತನಾಡುತ್ತಿರುವವರು ಕೇವಲ ಮೂರು ಮಂದಿ.

– **ತೇಜಸ್ವಿನಿ ಗೌಡ,** ವಿಧಾನ ಪರಿಷತ್‌ನ ಬಿಜೆಪಿ ಸದಸ್ಯೆ

ಬಿಎಸ್‌ವೈ ರಾಜೀನಾಮೆ ನೀಡುವುದೇ ಒಳ್ಳೆಯದು

ಸರ್ಕಾರದಲ್ಲಿ ಇದ್ದವರು ಆತ್ಮಾವಲೋಕನ ಮಾಡಿಕೊಳ್ಳಬೇಕು. ಇದು ಅಭದ್ರ ಸರ್ಕಾರ. ಮೂರು ಬಾಗಿಲೋ? ಆರು ಬಾಗಿಲೋ? ಅದನ್ನು ಮುಚ್ಚುವುದಕ್ಕೆ ಏನಾದರೂ ಇದೆಯೆ ಎನ್ನುವ ಅನುಮಾನ ಇದೆ. ಬಿಜೆಪಿಯಲ್ಲಿರುವ ಬಿಕ್ಕಟ್ಟು ಪರಿಹಾರಕ್ಕೆ ದೆಹಲಿಯಿಂದ ಬಂದ ಉಸ್ತುವಾರಿ ಮೂರು ದಿನ ಸಭೆ ನಡೆಸಿ ಹೋಗಿದ್ದಾರೆ. ಒಂದು ಕಡೆ ನಾಯಕತ್ವ ಬದಲಾವಣೆ ಇಲ್ಲ ಎಂದರೆ, ಮತ್ತೊಂದು ಕಡೆಯಿಂದ ಯಡಿಯೂರಪ್ಪ ಅವರನ್ನು ಆಂಧ್ರಪ್ರದೇಶದ ರಾಜ್ಯಪಾಲರನ್ನಾಗಿ ನೇಮಿಸಲಾಗುತ್ತಿದೆ ಎಂಬ ಸುದ್ದಿ ಹರಿದಾಡುತ್ತಿದೆ. ಈಗಿನ ಪರಿಸ್ಥಿತಿಯನ್ನು ನೋಡಿದರೆ ಯಡಿಯೂರಪ್ಪ ಗೌರವಯುತವಾಗಿ ರಾಜೀನಾಮೆ ನೀಡಿ ಕೆಳಕ್ಕೆ ಇಳಿಯುವುದೇ ಒಳ್ಳೆಯದು. ಬೇರೆಯವರಾದರೂ ಬಂದು ಒಳ್ಳೆಯ ಆಡಳಿತ ನೀಡಬಹುದು.

ಸಚಿವರೇ ಮುಖ್ಯಮಂತ್ರಿ ಮತ್ತು ಅವರ ಕುಟುಂಬದ ವಿರುದ್ಧ ಆರೋಪ ಮಾಡುತ್ತಿದ್ದಾರೆ. ಆ ಸಚಿವರನ್ನು ಕಿತ್ತು ಹಾಕಲು ಮುಖ್ಯಮಂತ್ರಿಗೆ ಸಾಧ್ಯವಾಗುತ್ತಿಲ್ಲ. ಇದು ಸುಭದ್ರ ಸರ್ಕಾರವೆ? ಅಶಿಸ್ತು ಪ್ರದರ್ಶಿಸುವವರ ವಿರುದ್ಧ ಕ್ರಮ ಜರುಗಿಸಿ ಹದ್ದುಬಸ್ತಿಗೆ ತರದಿದ್ದರೆ ಆಡಳಿತ ವ್ಯವಸ್ಥೆಗೆ ಅಪಾಯ.

– **ವೆಂಕಟರಾವ್ ನಾಡಗೌಡ,** ಜೆಡಿಎಸ್ ಶಾಸಕ

ಪೂರ್ಣ ಸಂವಾದಕ್ಕೆ ನೋಡಿ:
https://www.facebook.com/prajavani.net/videos

ಪ್ರಜಾವಾಣಿ facebook LIVE
FB.com/prajavani.net
ಸರಣಿ ಚಿಂತನೆ
ಕೊರೊನಾ ಕಾಡಿದ ಸಮಯ
ಆಗಿದ್ದು - ಆಗಬೇಕಾದ್ದು
ಅನಾಥರಾದ ಜಾನಪದ ಕಲಾವಿದರು

ಪ್ರೊ.ಹಿ.ಚಿ.ಬೋರಲಿಂಗಯ್ಯ
ವಿಶ್ರಾಂತ ಕುಲಪತಿಗಳು,
ಕನ್ನಡ ವಿಶ್ವವಿದ್ಯಾಲಯ, ಹಂಪಿ ಮತ್ತು ಜನಪದ ತಜ್ಞರು
ಇಂದು ಸಂಜೆ 6.30 ರಿಂದ
ನಾಳೆ 6.30 ರಿಂದ
ಬುಧವಾರ, 23 ನೇ ಜೂನ್
ಡಾ. ಮೂಡ್ನಾಕೂಡು ಚಿನ್ನಸ್ವಾಮಿ ಅವರಿಂದ ಚಿಂತನೆ
ಶೋಷಿತರ ಸಂಕಟಗಳು

ಜಿಲೆಟಿನ್ ಕಡ್ಡಿ ಸ್ಫೋಟ: ಇಬ್ಬರು ಮಕ್ಕಳಿಗೆ ಗಾಯ

ಪ್ರಜಾವಾಣಿ ವಾರ್ತೆ

ಕೃತಿಕಾ

ಅಭಿಷೇಕ್

ಆಲೂರು: ವಾಟೆಹೊಳೆ ಜಲಾಶಯ ಸಮೀಪದಲ್ಲಿರುವ ಚನ್ನಹಳ್ಳಿ ಗ್ರಾಮದಲ್ಲಿ ಸೋಮವಾರ ಆಟವಾಡುವ ಸಂದರ್ಭದಲ್ಲಿ ಸಿಕ್ಕಿದ ಜಿಲೆಟಿನ್ ಕಡ್ಡಿಯನ್ನು ಕಲ್ಲಿನಿಂದ ಜಜ್ಜುವಾಗ ಸ್ಫೋಟಗೊಂಡು, ಇಬ್ಬರು ಮಕ್ಕಳು ಗಾಯ ಗೊಂಡಿದ್ದಾರೆ.

ಗ್ರಾಮದ ರಘು ಅವರ ಪುತ್ರ ಅಭಿಷೇಕ್ (12) ಹಾಗೂ ರಂಗಸ್ವಾಮಿ ಅವರ ಪುತ್ರಿ ಕೃತಿಕಾ (8) ಗಾಯಗೊಂಡವರು. ಇಬ್ಬರ ಮುಖದಲ್ಲಿ ಗಾಯಗಳಾಗಿವೆ. ಸ್ಥಳೀಯರು ಇಬ್ಬರನ್ನೂ ಹಾಸನದ ಆಸ್ಪತ್ರೆಗೆ ದಾಖಲಿಸಿದ್ದು, ಅಪಾಯದಿಂದ ಪಾರಾಗಿದ್ದಾರೆ.

ಎತ್ತಿನಹೊಳೆ ಯೋಜನೆಯ ಕಾಮಗಾರಿಯಲ್ಲಿ ತೊಡಗಿಸಿಕೊಂಡಿರುವ ಕಾರ್ಮಿಕರು, ಎರಡು ವರ್ಷಗಳ ಹಿಂದೆ ಚನ್ನಹಳ್ಳಿ ಗ್ರಾಮದಲ್ಲಿ ತಾತ್ಕಾಲಿಕವಾಗಿ ಶೆಡ್ ನಿರ್ಮಿಸಿ ವಾಸವಾಗಿದ್ದರು. ಕಲ್ಲು ಸ್ಫೋಟಿಸಲು ಬಳಸುತ್ತಿದ್ದ ಜಿಲೆಟಿನ್ ಕಡ್ಡಿಗಳನ್ನು ಅವರು ಸ್ಥಳಾಂತರಗೊಳ್ಳುವ ಸಂದರ್ಭದಲ್ಲಿ ಬಿಟ್ಟು ಹೋಗಿರುವ ಸಾಧ್ಯತೆ ಇದೆ. ಮಕ್ಕಳು ಆಟ ಆಡುವಾಗ ಅವು ಸಿಕ್ಕಿದ್ದು, ಈ ಅವಘಡ ಸಂಭವಿಸಿದೆ ಎಂದು ಆಲೂರು ಠಾಣೆ ಪೊಲೀಸ್ ಇನ್‌ಸ್ಪೆಕ್ಟರ್ ಬಿ.ಜಿ.ಕುಮಾರ್ ತಿಳಿಸಿದ್ದಾರೆ.

ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀನಿವಾಸಗೌಡ, ಡಿವೈಎಸ್ಪಿ ಗೋಪಿ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ನಿಧನವಾರ್ತೆ

ಆರೂರು ಸರೋಜಿನಿ ಪಟ್ಟಾಭಿ ನಿಧನ



ಮಂಗಳೂರು: ಕನ್ನಡ, ತುಳು ಚಿತ್ರರಂಗದಲ್ಲಿ ನಿರ್ದೇಶಕರಾಗಿ ಹೆಸರುವಾಸಿಯಾಗಿದ್ದ ದಿ. ಆರೂರು ಪಟ್ಟಾಭಿ ಅವರ ಪತ್ನಿ, ಖ್ಯಾತ ಗಾಯಕಿ ಆರೂರು ಸರೋಜಿನಿ ಪಟ್ಟಾಭಿ (95) ಅವರು ಚೆನ್ನೈನ ಮಂದವಳ್ಳಿಯ ಸ್ವಗೃಹದಲ್ಲಿ ನಿಧನರಾದರು.

ವಿವಾಹ ಪೂರ್ವದಲ್ಲಿ 'ಜಿನ್ನಿ' ಎಂದೇ ಖ್ಯಾತರಾಗಿದ್ದ ಅವರು, ತುಳು ಹಾಗೂ ಕನ್ನಡ ಚಿತ್ರಗೀತೆಗಳಿಗೆ ಹಾಡುಗಳನ್ನು ಹಾಡಿದ್ದರು.

ಕನ್ನಡ ಚಿತ್ರದಲ್ಲಿನ 'ಕುಂತ್ರೆ ನಿಂತ್ರೆ ಅವಂದೆ ಧ್ಯಾನ' ಹಾಡಿನ ಮೂಲಕ ಮನೆ ಮಾತಾಗಿದ್ದರು. ಪ್ರಸಿದ್ಧ ನೃತ್ಯಗಾರ್ತಿ ವೈಜಯಂತಿ ಮಾಲಾ ಬಳಗದಲ್ಲಿ ನಟುವಾಂಗ ಕಲಾವಿದೆಯಾಗಿ ವಿಶ್ವದಾದ್ಯಂತ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು 'ನೈಟಿಂಗೇಲ್' ಎಂದು ಕರೆಸಿಕೊಂಡಿದ್ದರು.

ತಮ್ಮ ಕೊನೆಯ ದಿನಗಳವರೆಗೂ ಮನೆಯಲ್ಲೇ ಶಾಸ್ತ್ರೀಯ ಸಂಗೀತ, ಭಾವಗೀತೆ, ಭಕ್ತಿಗೀತೆಗಳ ಪಾಠ ನೀಡುತ್ತಿದ್ದರು.

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಲೋ.ಇ ವಿಭಾಗ, ಶಿವಮೊಗ್ಗ
ಸಂಖ್ಯೆ: ಕಾಪಾಅ/ಶಿವಿಶಿ/ಜೆಇ-1/ಐಎಫ್‌ಟಿ-4/2021-22 ದಿ:17-06-2021
ಅಲ್ಪಾವಧಿ ಟೆಂಡರ್ ಪ್ರಕಟಣೆ
ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ಅರ್ಹ ನೊಂದಾಯಿತ 3ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಂದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ (http://eproc.karnataka.gov.in) ಮೂಲಕ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ.
1. ಸೊರಬ ತಾಲ್ಲೂಕು: 1 ಕಾಮಗಾರಿ. 136912 3ನೇ ಕರೆ
ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಲು ಮತ್ತು ಸಲ್ಲಿಸಲು : ದಿನಾಂಕ:21-06-2021 ರಿಂದ 28-06-2021 ರವರೆಗೆ, ಕಾಮಗಾರಿ ಪೂರ್ಣಗೊಳಿಸಲು ಕಾಲಾವಧಿ 11 ತಿಂಗಳು (ಮಳೆಗಾಲ ಸೇರಿ)
ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದಾರವಾಣಿ 08182-274942) ಹಾಗೂ ಸಹಾಯಕ ದೂರವಾಣಿ ಸಂಖ್ಯೆ: 080-23010900 / 080-23010901 ರಿಂದ ಮಾಹಿತಿ ಪಡೆಯಬಹುದು.
ಸಹಿ/- ಕಾ.ಇಂ, ಲೋ.ಬಂ ಮತ್ತು ಒ.ಜ.ಸಾ ಇಲಾಖೆ, ವಿಭಾಗ, ಶಿವಮೊಗ್ಗ.
ವಾ.ಸಾ.ಸಂ.ಇ/ಶಿ/ನಂ-54/06/ಎಂಸಿಎ/21-22

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ರಾಧಾಗಿರಿಧಾರಿ ಕಾಂಪ್ಲೆಕ್ಸ್, ಜೆಪಿಎನ್ ರಸ್ತೆ, ಶಿವಮೊಗ್ಗ.
ದೂರವಾಣಿ ಸಂ: 08182-295654
ಇ-ಮೇಲ್: eekshipshmg@gmail.com
No EE/KSHIP/DN/SMG/AE-2/PK-1C/tree2020-21/
Dated: 22-06-2021
ಕೋಟೇಶನ್ ಆಹ್ವಾನ ಪ್ರಕಟಣೆ
ಬೆಂಗಳೂರು ನೈಸ್ ರೋಡ್‌ದಿಂದ ಮಾಗಡಿ NH-75 ರವರೆಗಿನ ಕಿ.ಮೀ 15+325 ರಿಂದ ಕಿ.ಮೀ 35+000 ರವರೆಗೆ ರಸ್ತೆ ಬದಿಯ .0.6, 0.9, 1.2, 1.5 ಮೀ ಸುತ್ತಳತೆಯ ನಿಂತಿರುವ ಮರಗಳನ್ನು ನಿಗದಿಪಡಿಸಿದ ಸ್ಥಳಕ್ಕೆ ಸ್ಥಳಾಂತರಿಸಿ ನಿರ್ವಹಿಸುವ ಕಾಮಗಾರಿಗೆ ಆಸಕ್ತಿಯುಳ್ಳ ಅರ್ಹ ನಿರ್ವಹಣೆಗಾರರು ತಮ್ಮ ಕೋಟೇಶನ್‌ನ್ನು ಈ ಕಛೇರಿಗೆ ದಿನಾಂಕ: 30-06-2021 ರೊಳಗಾಗಿ ತಲುಪಿಸುವಂತೆ ಆಹ್ವಾನಿಸಿದೆ.
ಹೆಚ್ಚಿನ ಮಾಹಿತಿಗಾಗಿ ಮೇಲೆ ತಿಳಿಸಿದ ವಿಳಾಸಕ್ಕೆ ಸಂಪರ್ಕಿಸಬಹುದಾಗಿದೆ.
ಸಹಿ/- ಕಾರ್ಯಪಾಲಕ ಇಂಜಿನಿಯರ್, ಕೆಶಿಪ್ ವಿಭಾಗ, ಶಿವಮೊಗ್ಗ.
ವಾ.ಸಾ.ಸಂ.ಇ/ಶಿ/ನಂ-58/06/ಎಂಸಿಎ/21-22

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ,
ವಿಭಾಗ, ಚಿತ್ರದುರ್ಗ.
ಸಂ: ಕಾ.ಸಾ.ಚಿ/ಪಿ.ಬಿ-1/ಅಲ್ಪಾವಧಿ ಟೆಂಡರ್ ಅವಧಿ ವಿಸ್ತರಣೆ/2021-22/646
ದಿನಾಂಕ: 18.06.2021
ಅಲ್ಪಾವಧಿ ಟೆಂಡರ್ ಅವಧಿ ವಿಸ್ತರಣೆ
ಉಲ್ಲೇಖ: ಸಂ: ಕಾ.ಸಾ.ಚಿ/ಪಿ.ಬಿ-1/ಟೆಂಡರ್ ಪ್ರಕಟಣೆ-ಐಎಫ್‌ಟಿ-03/2021-22/613 ದಿನಾಂಕ: 14.06.2021
ಕರ್ನಾಟಕ ಸರ್ಕಾರ ಮಾನ್ಯ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ & ಅಂತರ್ಜಲ ಅಭಿವೃದ್ಧಿ ವಿಭಾಗ, ಚಿತ್ರದುರ್ಗ ಇವರು ಕೆಟಿಪಿಪಿ ಆಕ್ಟ್-2000 ನಿಯಮದಂತೆ ಹಾಗೂ ಸ್ಟ್ಯಾಂಡರ್ಡ್ ಬಿಡ್ ಡಾಕ್ಯುಮೆಂಟ್ ಕೆ.ಡಬ್ಲ್ಯೂ-3 & 4 ನಿಬಂಧನೆಗಳಿಗೊಳಪಟ್ಟಂತೆ ಐ.ಎಫ್.ಟಿ.-03ರಲ್ಲಿ ಕರೆಯಲಾದ 06 ಕಾಮಗಾರಿಗಳ ಪೈಕಿ ಯಾವುದೇ ಕಾಮಗಾರಿಯನ್ನು ತಾಂತ್ರಿಕ ಕಾರಣಗಳಿಂದ ಪ್ರಚುರಪಡಿಸಲಾಗಿರುವುದಿಲ್ಲ. ಆದ್ದರಿಂದ ಐಎಫ್‌ಟಿ-03ರಲ್ಲಿ 06 ಕಾಮಗಾರಿಗಳ ಪ್ರಚುರವನ್ನು ಈ ಕೆಳಗಿನಂತೆ ನಿಗದಿಪಡಿಸಲಾಗಿರುತ್ತದೆ. ಸದರಿ ಟೆಂಡರ್ ಪ್ರಕ್ರಿಯೆಗಳನ್ನು ಈ ಕೆಳಗಿನಂತೆ ನಿಗದಿಪಡಿಸಿದೆ. ದಿನಾಂಕ: 22.06.2021ರಿಂದ ಇ-ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ: 28.06.2021 ಸಾಯಂಕಾಲ 05:30ರ ವರೆಗೆ, ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 29.06.2021ರ ಸಾಯಂಕಾಲ 04:00 ಗಂಟೆಯವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ: 30.06.2021 ಸಾಯಂಕಾಲ 04:30 ಗಂಟೆಯ ನಂತರ (ಸಾಧ್ಯವಾದಲ್ಲಿ), ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ: 01.07.2021 ಸಾಯಂಕಾಲ 04:30 ಗಂಟೆಯ ನಂತರ (ಸಾಧ್ಯವಾದಲ್ಲಿ). ಸದರಿ ಕಾಮಗಾರಿಯಲ್ಲಿ ಟೆಂಡರ್ ಮೊತ್ತ ಅಥವಾ ಇ.ಎಂ.ಡಿ.ಯಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಇ-ಪ್ರೊಕ್ಯೂರ್‌ಮೆಂಟ್‌ನ ಬಿಡ್ ಡಾಕ್ಯುಮೆಂಟ್‌ನಲ್ಲಿ ನಮೂದಿಸಿರುವ ಮೊತ್ತ ಅಂತಿಮವಾಗಿರುತ್ತವೆ. ಹೆಚ್ಚಿನ ಮಾಹಿತಿಯನ್ನು ಈ ಕಛೇರಿಯಿಂದ (08194-231811) ಹಾಗೂ ಹೆಚ್.ಪಿ. ಕಂಪನಿಯ ಸಹಾಯಕ ದೂರವಾಣಿ ಸಂಖ್ಯೆ: 080-25501216/080-25501227ರಿಂದ ಪಡೆಯಬಹುದು.
RO No. 199: DIPR/CTA/MCA/2021-22 ಸಹಿ/- ಕಾರ್ಯಪಾಲಕ ಇಂಜಿನಿಯರ್

ಶಿವಮೊಗ್ಗ ಸ್ಮಾರ್ಟ್ ಸಿಟಿ ಲಿಮಿಟೆಡ್.
(ಮಹಾನಗರ ಪಾಲಿಕೆ ಕಟ್ಟಡ, ಎಸ್.ಎನ್. ಮಾರುಕಟ್ಟೆ, ನೆಹರು ರಸ್ತೆ (ದೂ:08182-279951, ಶಿವಮೊಗ್ಗ)
ಸಂ.ಎಡಿಎಂ/92/ಎಡಿಎಲ್-ಆರ್‌ಇಸಿ-6/2021 ದಿ: 16.06.2021
ನೇಮಕಾತಿ ಅಧಿಸೂಚನೆ
ಶಿವಮೊಗ್ಗ ಸ್ಮಾರ್ಟ್ ಸಿಟಿ ಲಿಮಿಟೆಡ್ ಕಂಪನಿಯು ಗುತ್ತಿಗೆ ಆಧಾರದ ಮೇರೆಗೆ ಒಂದು ಕಾರ್ಯಪಾಲಕ ಇಂಜಿನಿಯರ್ (ವಿದ್ಯುತ್) ಮತ್ತು ಒಂದು ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಹುದ್ದೆಗಳನ್ನು ನೇಮಕಾತಿ ಮಾಡಿಕೊಳ್ಳಲು ಇಚ್ಚಿಸಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 02.07.2021. ಅರ್ಜಿ ನಮೂನೆ ಹಾಗೂ ಇತರೆ ವಿವರಗಳಿಗೆ ವೆಬ್‌ಸೈಟ್ shivamoggasmartcity.co.in ಅಥವಾ shimogacity.mrc.gov.in ಹಾಗೂ ಶಿವಮೊಗ್ಗ ಸ್ಮಾರ್ಟ್ ಸಿಟಿ ಲಿಮಿಟೆಡ್ ಕಛೇರಿಯ ಸೂಚನಾ ಫಲಕವನ್ನು ನೋಡುವುದು.
ಸಹಿ/- (ಚಿದಾನಂದ ಎಸ್.ವಟಾರೆ) ವ್ಯವಸ್ಥಾಪಕ ನಿರ್ದೇಶಕರು, ಶಿವಮೊಗ್ಗ ಸ್ಮಾರ್ಟ್ ಸಿಟಿ ಲಿಮಿಟೆಡ್, ಶಿವಮೊಗ್ಗ.
ವಾ.ಸಾ.ಸಂ.ಇ/ಶಿ/ನಂ-43/06/ಎಂಸಿಎ/21-22

ವೈ

ಕ್ಷೇಮ ಕುಶಲ

ಮಳೆಗಾಲದಲ್ಲಿ ಏನೆಲ್ಲ ತಿನ್ನಬಹುದು...

ಡಾ. ವಿಜಯಲಕ್ಷ್ಮಿ ಪಿ.

ನಾವೆಲ್ಲಾ ಚಿಕ್ಕವರಿದ್ದಾಗ ಮನೆಯಲ್ಲಿ ಕೊಷ್ಟಕ ಹೇಳಿಕೊಡುತ್ತಿದ್ದರು. ಆಗ 'ಶ್ರಾವಣ ಭಾದ್ರಪದ... ವರ್ಷಋತು...' ಅಂತಾ ಹೇಳ್ತಾ ಇದ್ದೆವು. ಅಂದರೆ ಶ್ರಾವಣಮಾಸದಲ್ಲಿ ಮಳೆ ಬರುತ್ತದೆ, ಅದನ್ನ ಮಳೆಗಾಲ ಅಂತಾ ಕರೀತಾರೆ ಅಂತಾನೂ ಹೇಳಿಕೊಡುತ್ತಿದ್ದರು. ಆದರೆ 'ಈಗಿನ್ನು ಚೈತ್ರಮಾಸಾನೇ ಮುಗಿದಿಲ್ಲಾ, ಆಗಲೇ ಮಳೆಗಾಲಾನಾ' ಅಂದರೆ 'ಕಾಲ ಬದಲಾಗಿದೆ ಅಂತಾರೆ'. ಈಗಿನ ಮಕ್ಕಳಿಗೆ ಇದರ ಪರಿಚಯವೂ ಇಲ್ಲದಿರಬಹುದು;ಅದನ್ನು ಪರಿಚಯಿಸುವ ಕೆಲಸವನ್ನೂ ಮಾಡಬೇಕಿದೆ. ಇರಲಿ, ಆದರೆ ಬೇರೆ ಬೇರೆ ಪ್ರದೇಶಗಳಲ್ಲಿ ಮಳೆ ಬರುವ ರೀತಿ ಬೇರೆ ಬೇರೆ. ಅದಕ್ಕೆ ವ್ಯವಸಾಯ ಮಾಡುವವರು ಇಂತಹ ನಕ್ಷತ್ರದಲ್ಲಿ ಮಳೆ ಬಂದರೆ ಇಷ್ಟು ದಿನ, ಹೀಗೆ ಮಳೆ ಬರತ್ತೆ ಅಂತಾ ಲೆಕ್ಕವನ್ನೂ ಇಟ್ಟುಕೊಂಡಿದ್ದರು. ಆದರೆ ಕೆಮ್ಮು ದಮ್ಮು ಅಲರ್ಜಿ ಇರುವ ಅಂತಹ ಅನೇಕರಿಗೆ ಅವರ ಕಾಯಿಲೆಗಳೇ ಕಾಲಸೂಚಕ ಅಗಿರುತ್ತಿದ್ದುದೂ ಉಂಟು. ಕೆಲವರಿಗೆ ಮಳೆಗಾಲ ಬಂದರೆ ಕಾಯಿಲೆ, ಕೆಲವರಿಗೆ ಮಳೆಗಾಲದಲ್ಲಿ ಆರಾಮ. ಇದೇಕೆ ಹೀಗೆ – ಎಂದರೆ ದೇಹದ ಮೇಲೆ ವಾತಾವರಣದ ಪರಿಣಾಮ.

ನಮ್ಮ ಹಿರಿಯರು ಮಳೆಗಾಲದ ಮಳೆನೀರನ್ನೇ ರೋಗಪರಿಹಾರಕವಾಗಿ ಉಪಯೋಗಿಸುವಷ್ಟು ಬುದ್ಧಿವಂತರಾಗಿದ್ದರು. ಅದಕ್ಕೆ ಮಳೆ ನೀರನ್ನು ಮತ್ತು ಔಷಧಸಸ್ಯಗಳನ್ನು ಉಪಯೋಗಿಸಿ ಅಣುತೈಲ ಎಂಬ

ಎಣ್ಣೆಯನ್ನು ತಯಾರಿಸಿ ಮೂಗಿಗೆ ಹಾಕಿಕೊಳ್ಳುತ್ತಿದ್ದರು. ಇದರಿಂದ ಕಣ್ಣು ಕಿವಿ ಮೂಗುಗಳಲ್ಲಿ ಕಫ ಸೇರುವುದು ಕಡಿಮೆಯಾಗಿ ಸುಲಭವಾದ ಉಸಿರಾಟಕ್ಕೆ ಅನುವು ಮಾಡಿಕೊಡುತ್ತಿತ್ತು. ಅಷ್ಟೇ ಅಲ್ಲದೆ, ಬಾಲನೆರೆ ಕೂದಲು ಉದುರುವುದನ್ನೂ ಇದು ತಡೆಗಟ್ಟುತ್ತಿತ್ತು. ಈಗ ಅಮ್ಲೀಯ ಮಳೆಯೇ ಹೆಚ್ಚಾಗಿ ಮಳೆನೀರೂ ಶುದ್ಧವಲ್ಲದ ಪರಿಸ್ಥಿತಿ ಉಂಟಾಗಿದೆ. ಸದೃಢವಾದ ಇಂದ್ರಿಯಗಳು, ಚುರುಕಾದ ಬುದ್ಧಿಶಕ್ತಿ, ನೆನಪಿನ ಶಕ್ತಿಗಳಿಗೆ, ಅಣುತೈಲವು ರಾಮಬಾಣವಾಗಿರುತ್ತಿತ್ತು. ಇಂದು ನಾವು ಅನುಭವಿಸುತ್ತಿರುವ ಕೋವಿಡ್ ಎಂಬ ಜನಪದೋದ್ವಂಸಕ ರೋಗದ ಪರಿಣಾಮಗಳನ್ನು ಎದುರಿಸಲು ಒಂದು ಸಮರ್ಥ ಸಾಧನ - ಶುದ್ಧ ಮಳೆ ನೀರಿನಿಂದ ತಯಾರಿಸಿದ ತೈಲ.

ಮಳೆಗಾಲದಲ್ಲಿ ನಿತ್ಯಸೇವಿಸಬಹುದಾದ ಜೇನನ್ನು ಬೇರೆಲ್ಲಾ ಕಾಲದಲ್ಲಿಯೂ ವಿವೇಚನೆಯಿಂದ ಸೇವಿಸಬೇಕು. ಬಿಸಿನೀರಿಗೆ ಜೇನು ಬೆರೆಸುವುದು ಸರ್ವಾದಾ ಅಪಥ್ಯಕರವಾಗುತ್ತದೆ. ಈ ಕಾಲದಲ್ಲಿ ಒಣಗಿದ ನೆಲ್ಲಿಕಾಯಿ ಮತ್ತು ಬೀಜ ಇರುವ ಒಣ ಕಪ್ಪು ದ್ರಾಕ್ಷಿಯನ್ನು ಸಮಪ್ರಮಾಣದಲ್ಲಿ ಚೆನ್ನಾಗಿ ಅರೆದು ಕುದಿಸಿ ಶೋಧಿಸಿ ಸೇವಿಸಿವುದು ಆರೋಗ್ಯಕರ. ಕೋವಿಡ್‌ನಿಂದ ಎದುರಾಗಬಹುದಾದ ಅಡ್ಡಪರಿಣಾಮಗಳನ್ನೂ ಹೋಗಲಾಡಿಸುವ ಸಾಮರ್ಥ್ಯ ಈ ಕಷಾಯಕ್ಕಿದೆ. ಸುಸ್ತು, ಅತಿಯಾದ ಅಮ್ಲೀಯತೆ, ಅದರಿಂದುಂಟಾಗುವ ತಲೆನೋವು, ಗಂಟಲು ಕೆರೆತ – ಇತ್ಯಾದಿ ತೊಂದರೆಗಳಿಗೂ ಇದು ರಾಮಬಾಣ.

ಭತ್ತದ ಅರಳು, ದ್ರಾಕ್ಷಿ (ಒಣ ಅಥವಾ ಹಸಿ) ಜೇನು, ನೀರನ್ನು ಬೆರೆಸಿ ಅರೆದು ಅಥವಾ ಮಂಥಿನಲ್ಲಿ ಚೆನ್ನಾಗಿ ಕಡೆದು ಕುಡಿಯುವುದು ಮಳೆಗಾಲದಲ್ಲಿ ಒಂದು ಹೊಸ ರುಚಿಯಾದ ವಿಶಿಷ್ಟ ಪೇಯ. ಈ ಕಾಲದಲ್ಲಿ ಮಾಂಸ-ಮದ್ಯಗಳ ಸೇವನೆ ವರ್ಜ್ಯ. ಅದರಲ್ಲೂ ಜಲಚರ ಪ್ರಾಣಿಗಳ ಮಾಂಸ ಎಂದರೆ, ಮೀನು, ಏಡಿ, ಸಂಪೂರ್ಣ ವರ್ಜ್ಯ. ಇದು ಪರಿಸರದ ಸಮತೋಲನ, ಮನುಷ್ಯರ ಅರೋಗ್ಯ – ಎರಡಕ್ಕೂ ಹಾನಿಕರ. ಹಸಿ ತರಕಾರಿ, ಹಣ್ಣುಗಳ ಸೇವನೆ, ಸೊಪ್ಪುಗಳ ಸೇವನೆ, ಮಳೆಗಾಲದಲ್ಲಿ ಸಾಧುವಲ್ಲ. ಇದು ಮಧುಮೇಹ, ಉಬ್ಬಸ, ಕೆಮ್ಮು ಮುಂತಾದ ರೋಗಗಳಿಗೆ ಕಾರಕವಾಗುತ್ತದೆ. ನೆನೆಸಿದ ಕಾಳುಗಳು, ಬೇಸಗೆಯಲ್ಲಿ ಬೆಳೆದು ಶೇಖರಿಸಲು ಸಾಧ್ಯವಾಗುವಂತಹ ಸೌತೆ, ಕುಂಬಳ, ಬೂದುಗುಂಬಳ, ಪುನರ್ಪುಳಿ (ಕೋಕಮ್), ಉಪ್ಪಿನಲ್ಲಿ ಹಾಕಿಟ್ಟ ಹಲಸಿನ ತೊಳೆ ಹಾಗೂ ಈ ರೀತಿಯ ಆಹಾರ ಪದಾರ್ಥಗಳನ್ನು ಆಯಾ ಪ್ರದೇಶದ ಆಹಾರಕ್ಕನುಗುಣವಾಗಿ ಈ ಕಾಲದಲ್ಲಿ ಉಪಯೋಗಿಸಬೇಕು. ಒಣ ಅಂಜೂರ, ದ್ರಾಕ್ಷಿ, ಖರ್ಜೂರ, ದಾಳಿಂಬೆ – ಇವುಗಳ ಉಪಯೋಗವೂ ಹಿತಕರವಾಗುತ್ತದೆ. ಮಳೆಗಾಲದ ಅರ್ಧದಿಂದ ನಂತರ ಪಡವಲ, ಮೆಂತ್ಯಕಾಳು, ಹೀರೆಕಾಯಿ, ಒಣ ಮೂಲಂಗಿ, ಒಣಮಾವಿನಕಾಯಿ – ಈ ರೀತಿಯಾದ ನೀರಿನಂಶ ಕಡಿಮೆ ಇರುವ ಅಥವಾ ಸ್ವಲ್ಪ ಕಹಿ ರುಚಿಯ ತರಕಾರಿಗಳನ್ನೇ ಉಪಯೋಗಿಸಬೇಕು. ದನಿಯಾ, ಜೀರಿಗೆ, ಮೆಣಸು – ಇವನ್ನು ಉಪಯೋಗಿಸಬಹುದು, ಬಿಸಿ ನೀರನ್ನೇ ಕುಡಿಯಬೇಕು. (ಅರ್ಧ ಬಿಸಿ ಮಾಡಿದ ನೀರಲ್ಲ, ಕುದಿಸಿ ಆರುತ್ತಾ ಇರುವ ನೀರು.) ಇದಕ್ಕೆ ಶುಂಠಿ, ಶ್ರೀಗಂಧ, ಕರ್ಪೂರ, ಏಲಕ್ಕಿ, ಕೇಸರಿ – ಇವುಗಳಲ್ಲಿ ಯಾವುದಾದರೂ ಒಂದನ್ನು ಅಲ್ಪ ಪ್ರಮಾಣದಲ್ಲಿ ಸೇರಿಸಿದರೆ ಆರೋಗ್ಯ ವೃದ್ಧಿಯಾಗುತ್ತದೆ.

ಮಳೆಯಲ್ಲಿ ನೆನೆಯುವುದು ಸರ್ವಥಾ ನಿಷಿದ್ಧ; ನೆನೆದರೂ ಕೂಡಲೇ ಬಿಸಿನೀರಿವಲ್ಲಿ ಸ್ನಾನ ಮಾಡುವುದರಿಂದ ನೆಗಡಿ, ತಲೆನೋವು, ಮೈಕೈ ನೋವು, ಜ್ವರ ಇತ್ಯಾದಿಗಳನ್ನು ತಡೆಗಟ್ಟಬಹುದು. ಒಟ್ಟಿನಲ್ಲಿ ಆಯಾ ಕಾಲಕ್ಕೆ ಹಿತವಾದ ಆಹಾರವನ್ನು ಮಿತವಾಗಿ ಉಪಯೋಗಿಸಿ ಆರೋಗ್ಯವಂತರಾಗಿ ಬದುಕೋಣ.

ಲೇಖಕಿ: ಆಯುರ್ವೇದವೈದ್ಯೆ

ಮಳೆಗಾಲದಲ್ಲಿ ಮಳೆ ಬಿಸಿಲುಗಳ ವ್ಯತ್ಯಾಸದಿಂದ ಸೆಖೆ, ಚಳಿ – ಎರಡೂ ಆಗುವ ಸಾಧ್ಯತೆ ಇದೆ. ಆದ್ದರಿಂದ ನಮ್ಮ ಆಹಾರ-ವಿಹಾರಗಳು ಸಮಶೀತೋಷ್ಣಗಳಾಗಿರಬೇಕು. ಈ ಕಾಲದಲ್ಲಿ ಆಹಾರದೊಡನೆ ಜೇನನ್ನು ಸೇರಿಸುವುದು ಒಳಿತು; ಎಂದರೆ ಕಾದಾರಿಸಿದ ನೀರಿಗೆ ಅಲ್ಪ ಪ್ರಮಾಣದಲ್ಲಿ ಜೇನನ್ನು ಬೆರೆಸಿ ಸೇವಿಸುವುದು ಆರೋಗ್ಯಕರ.

ಯೋಗ ನಮ್ಮ ಕಾಲದ ಬದುಕು

ಯೋಗವು ಧನಾತ್ಮಕ ಆಚರಣೆ; ಕೊಡೊನಾದಂಥ ವಿಷಮ ಸಂದರ್ಭವನ್ನೂ ಹೆಚ್ಚಿಗೆ ಒತ್ತಡವಿಲ್ಲದೆ ದಾಟಿಬಿಡುವ ಮನೋದೈಹಿಕ ಬಲವನ್ನು ತುಂಬಬಲ್ಲದು....

ನವೀನ ಗಂಗೋತ್ರಿ

ಇನ್ನೊಂದು ಸುತ್ತಿನ ಅಂತರರಾಷ್ಟ್ರೀಯ ಯೋಗದಿನ ಮುಗಿದಿದೆ. ಅಂತರರಾಷ್ಟ್ರೀಯ ಯೋಗದಿನದ ಆಚರಣೆಯು ಇತ್ತೀಚಿನ ಐದಾರು ವರ್ಷಗಳ ಬೆಳವಣಿಗೆಯಾದರೂ ಯೋಗ ಎಂಬುದು ಪ್ರಪ್ರಾಚೀನವಾದ ಮತ್ತು ಭಾರತದ ಮೂರ್ನಾಲ್ಕು ಸಹಸ್ರಮಾನದ ಬದುಕಿನಲ್ಲಿ ಬಹುಮುಖ್ಯವಾಗಿದ್ದ ಒಂದು ಸಂಗತಿ. ಬೇರೆ ಬೇರೆ ದರ್ಶನಗಳಲ್ಲಿ ಯೋಗಶಬ್ದಕ್ಕೆ ಬೇರೆ ಬೇರೆ ಅರ್ಥಗಳಿವೆ. ವ್ಯಾಸಭಾರತದ ಗೀತಾಚಾರ್ಯನಾದರೋ ಹಲವಾರು ಬಗೆಯ ಜೀವನದೃಷ್ಟಿಗಳನ್ನು ಪರಿಚಯಿಸುತ್ತ ಅವನ್ನೆಲ್ಲ ಯೋಗವೆಂದೇ ಗುರುತಿಸುತ್ತಾನೆ. ಅಷ್ಟಲ್ಲದೆ ಯೋಗ ಎನ್ನುವ ಪದಕ್ಕೆ ಸಾಕ್ಷಾತ್ತಾಗಿ ಎರಡು-ಮೂರು ವಿಧದ ನೇರ ವ್ಯಾಖ್ಯಾನವನ್ನೂ ಕೊಡುತ್ತಾನೆ. ಕರ್ಮದಲ್ಲಿ ಕೌಶಲವನ್ನು ಸಾಧಿಸುವುದೂ, ಸಮತೆಯನ್ನು ಕಾಪಾಡಿಕೊಳ್ಳುವುದೂ ಅವನ ಪ್ರಕಾರ ಯೋಗವೇ ಆಗಿದೆ. ಈ ಎಲ್ಲ ವ್ಯಾಖ್ಯಾನಗಳ ಹೊರತಾಗಿ ಯೋಗವೆಂಬುದು ತಾನೊಂದು ಸ್ವತಂತ್ರ ದರ್ಶನವಾಗಿ ಹೊಮ್ಮಿದ್ದೂ ನಮ್ಮ ನೆಲದಲ್ಲೇ. ಅಂತರರಾಷ್ಟ್ರೀಯ ಯೋಗದಿನದ ಹಿನ್ನೆಲೆಯಲ್ಲಿ ಮತ್ತು ನಮ್ಮ ಸುತ್ತಲೂ ಕವಿದಿರುವ ಜಗದ್ವ್ಯಾಪಿ ರೋಗದ, ಆ ರೋಗದ ಉಪದ್ರವಗಳ ಹಿನ್ನೆಲೆಯಲ್ಲಿ ಯೋಗದ ಪ್ರಸ್ತುತತೆಯನ್ನು ತಿಳಿಯುವ ಹೊತ್ತು ಇದು.

ನಾವಿವತ್ತು ಯೋಗವೆಂದು ಬಹುವಾಗಿ ಪರಿಗಣಿಸುತ್ತಿರುವ ಆಸನ, ಪ್ರಾಣಾಯಾಮ ಮತ್ತು ಧ್ಯಾನಗಳು ಯೋಗದ ಎಂಟು ಅಂಗಗಳ ಸಾಲಿನಲ್ಲಿ ಬರುವಂಥವು. ಎಂಟು ಅಂಗಗಳ ಪೈಕಿ ಈ ಮೂರಕ್ಕೆ ಅದೆಷ್ಟು ಪ್ರಚಾರ ದೊರೆತಿದೆಯೆಂದರೆ ಯೋಗದ ಇನ್ನುಳಿದ ಅಂಗಗಳ ಇರುವಿಕೆಯೇ ಮರೆತುಹೋಗುವಷ್ಟು! ಆದರೀಗ ಆಸನಪ್ರಾಣಾಯಾಮಧ್ಯಾನ ಮಾತ್ರವೇ ಯೋಗವೆಂದು ತಿಳಿಯುವ ಹಂತದಿಂದ ಮುಂದಕ್ಕೆ ಸಾಗಿ ಯೋಗದ ವಿಸ್ತಾರರೂಪವನ್ನು ಅರಿವಾಗಿಸಿಕೊಳ್ಳಬೇಕಾದ ಕಾಲದಲ್ಲಿದ್ದೇವೆ. ಯೋಗವೊಂದು ಆಜೀವನವ್ಯಾಪಿಯಾದ ಜಗದ್ದರ್ಶನ ಅಥವಾ ಬದುಕಿನ ಕಾಣ್ಕೆ. ಅದು ಕೇವಲ ಅಂಗಸಾಧನೆಯ ಹಾದಿಯಲ್ಲ, ಒತ್ತಡವನ್ನು ಕಳೆಯುವುದಕ್ಕಾಗಿ ಹಮ್ಮಿಕೊಳ್ಳುವ ಧ್ಯಾನವೂ ಅಲ್ಲ. ಅದು ವ್ಯಕ್ತಿಯನ್ನೂ ಸಮಾಜವನ್ನೂ ಧನಾತ್ಮಕವಾಗಿ ಸೋಕುವ, ಮಾನವ ಮಾತ್ರನಲ್ಲದೆ ಪೂರ್ಣ ಜೀವಲೋಕದ ಕಲ್ಯಾಣವನ್ನು ಪರಿಗಣಿಸುವ ಬದುಕಿನ ಹಾದಿ.

ಕಳೆದೊಂದೂವರೆ ವರ್ಷದಿಂದ ನಮ್ಮೆಲ್ಲರ ಬದುಕಿನ ವಿಧಾನವೇ ಮೊದಲಿಗಿಂತ ಬದಲಾಗಿದೆ. ಹೋಗಬೇಕೆಂದಲ್ಲಿ ಹೋಗಲಾಗದ, ಮಾಡಬೇಕೆನಿದ ಹಲವಾರು ಕಾರ್ಯಗಳನ್ನು ಮಾಡಲಾಗದ, ತಿನ್ನಬೇಕೆನಿಸಿದ್ದನ್ನು ತಿನ್ನಲಾಗದ – ಒಟ್ಟಿನಲ್ಲಿ ಇರಬೇಕೆಂದೆನಿಸಿದಂತೆಲ್ಲ ಇರಲಾಗದ ಸ್ಥಿತಿಗೆ ನೂಕಲ್ಪಟ್ಟಿದ್ದೇವೆ. ಈ ದುರಿತಕಾಲವನ್ನೂ ಸಹ್ಯವಾಗಿಸಿಕೊಳ್ಳುವ ನಿಟ್ಟಿನಲ್ಲಿ ಯೋಗವೊಂದು ದಾರಿಯಾಗಬಲ್ಲದು. ಯೋಗದ ಮೊದಲಿನವೆರಡು ಅಂಗಗಳು ಯಮ ಮತ್ತು ನಿಯಮ. ಸ್ಥೂಲವಾಗಿ ಹೇಳಬೇಕೆಂದರೆ ಇವೆರಡು ನಮ್ಮ ದೈನಂದಿನ ಬದುಕು, ವ್ಯವಹಾರ ಮತ್ತು ಆಚಾರವನ್ನು ನೇರ್ಪುಗೊಳಿಸುವ ಸಂಗತಿಗಳು. ಉದಾಹರಣೆಗೆ ಶೌಚ (ಶುಚಿತ್ವ) ಎನ್ನುವುದು ಒಂದು ಯೌಗಿಕ ನಿಯಮ. ಇದ್ದಕ್ಕಿದ್ದಂತೆ ಇತ್ತೀಚೆಗೆ ಇದೊಂದು ಮೌಲ್ಯವು ಜಗತ್ತಿನಾದ್ಯಂತ ಪಡೆದುಕೊಂಡ ಮಹತ್ವವನ್ನಿಲ್ಲಿ ನೆನೆಯಬಹುದು. ಜಗತ್ತಿನಲ್ಲಿ ಕೋವಿಡ್ ಕಾರಣದಿಂದ ನೇರವಾಗಿ ಬಾಧೆಗೊಳಗಾದವರಿಗಿಂತ ಹೆಚ್ಚಾಗಿ ಅದರ ಉಪಪರಿಣಾಮಗಳಿಂದ ಮಾನಸಿಕ ಖಿನ್ನತೆ, ಹತಾಶೆ ಮತ್ತಿತರ ಸಂಕಷ್ಟಗಳಿಗೆ ಸಿಲುಕಿದವರ ಸಂಖ್ಯೆ ದೊಡ್ಡದಿದೆ. ಇದು ಔಷಧಿಗಳಿಗೆ ನಿಲುಕುವ ಸಮಸ್ಯೆಯಲ್ಲ; ಬದಲಾಗಿ ಜೀವನಪದ್ಧತಿಯಲ್ಲಿ ಸುಧಾರಣೆ ತಂದುಕೊಳ್ಳುವ ಮೂಲಕ ಸರಿಪಡಿಸಬೇಕಾದ್ದು. ಆಸನ ಪ್ರಾಣಾಯಾಮದ ಮೂಲಕವಷ್ಟೇ ಯೋಗವನ್ನು ಅಳವಡಿಸಿಕೊಂಡರೂ ಸಾಕು, ಈ ರೀತಿಯ ಮನೋದೈಹಿಕ ಸಮಸ್ಯೆಗಳನ್ನು ಮೀರಬಹುದು. ನಿತ್ಯವೂ ತಪ್ಪದೆ ಅರ್ಧ ಗಂಟೆ ಆಚರಿಸುವ ಯೋಗಾಸನ ಪ್ರಾಣಾಯಾಮ ಅಭ್ಯಾಸವು ಬದುಕಿಗೊಂದು ನಿಯಮಿತತೆಯನ್ನು ತಂದುಕೊಡುತ್ತದೆ. ನಿಯಮಿತವಾಗಿ ಆಚರಿಸುವ ಯಾವುದೇ ಧನಾತ್ಮಕ ಸಂಗತಿಯೂ ತಂದುಕೊಡುವ ಮನೋಬಲ ಮತ್ತು ಜೀವಶಕ್ತಿಯು ಅಪಾರವಾದ್ದು. ಯೋಗವು ಹಾಗೊಂದು ಧನಾತ್ಮಕ ಆಚರಣೆ; ಮತ್ತದು ಕೊರೊನಾದಂಥ ವಿಷಮ ಸಂದರ್ಭವನ್ನೂ ಹೆಚ್ಚಿಗೆ ಒತ್ತಡವಿಲ್ಲದೆ ದಾಟಿಬಿಡುವ ಮನೋದೈಹಿಕ ಬಲವನ್ನು ತುಂಬಬಲ್ಲದು.

ಸಿಇಟಿ ದಿಕ್ಸೂಚಿ

Chemistry - Classification of Elements and Periodicity in Properties

1. Which of the following is the correct order of radius?

(1) $H^- > H > H^+$ (2) $Na^+ > F^- > O^{2-}$

(3) $F^- > O^{2-} > Na^+$ (4) $Al^{3+} > Mg^{2+} > N^{3-}$

2. The last element of the p-block in 6th period is represented by the outer most electronic configuration

(1) $4f^{14}5d^{10}6s^26p^4$ (2) $7s^27p^6$

(3) $4f^{14}5d^{10}6s^26p^6$ (4) $5f^{14}6d^{10}7s^27p^6$

3. Generally, the first ionization energy increases along a period. But there are some exceptions. The one which is not an exception is

(1) Be and B (2) Na and Mg

(3) Mg and Al (4) N and O

4. Which one of the following sets of ions represents the collection of isoelectronic species?

(1) $K^+, C\ell^-, Mg^{2+}, Sc^{3+}$

(2) $Na^+, Ca^{2+}, Sc^{3+}, F^-$

(3) $K^+, Ca^{2+}, Sc^{3+}, C\ell^-$

(4) $Na^+, Mg^{2+}, A\ell^{3+}, C\ell^-$

5. The first ionization enthalpy of the following elements are in the order:

(1) P < Si < N < C

(2) C < N < Si < P

(3) Si < P < C < N

(4) P < Si < N < C

6. The electronegativities of C, N, Siand P are in the order of

(1) P < Si < C < N

(2) Si < P < N < C

(3) Si < P < C < N

(4) P < Si < N < C

7. For one of the element various successive ionization enthalpies (in kJ mol–(1) are given below:

I.E.	1st	2nd	3rd	4th	5th
	577.5	1810	2750	11, 580	14,820

The element is

(1) Si (2) P (3) Al (4) Mg

8. The correct order of electronegativities of N, O, F & P is

(1) F > N > P > O

(2) F > O > P > N

(3) F > O > N > P

(4) N > O > F > P

9. The correct order of ionisation energy of C, N, O & F is

(1) F < N < C < O

(2) C < N < O < F

(3) C < O < N < F

(4) F < O < N < C

Answers

1. Answer (1)

Solution: The correct order of radius is

$$H^- > H > H^+$$

Since size of cation is smaller than corresponding parent atom and size of anion is greater than its parent atom.

2. Answer (3)

Solution: Radon

$$(Rn) - [Xe]4f^{14}5d^{10}6s^26p^6$$

3. Answer (2)

Solution :First ionization energy of Mg is more than that of Na. It is not an exception

4. Answer (3) Solution:

$$K^+ = 18e^-.Ca^{2+} = 18e^-, Sc^{3+} = 18e^-, Cl^- = 18e^-$$

5. Answer (3)

Solution :As we move from left to right in the periodic table, the ionization energy increases and as we move down the table ionization energy decreases as the number of shells increases, hence z-effective decreases.

6. Answer (3)

Solution : As we move down the group, the electronegativity increases Si < P < C < N.

7. Answer (3)

Solution :From the data given after the removal of three electrons a large jump in I.E is observed. so element has attained stable configuration element is Al

8. Answer (3)

Solution :Electronegativity decreases down the group and increases along the period

9. Answer (3)

Solution :Filled leading to higher value of ionisation energy than oxygen.

Hence, the order is C < O < N < F

(ಪ್ರಶ್ನೋತ್ತರಗಳ ಸಂಯೋಜನೆ: ಆಕಾಶ್ ಇನ್‌ಸ್ಟಿಟ್ಯೂಟ್, ಬೆಂಗಳೂರು)

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ- 10

126. ಭಾರತದ ಸಂವಿಧಾನದ 24ನೇ ವಿಧಿಯ ಪ್ರಕಾರ ಬಾಲ ಕಾರ್ಮಿಕರೆಂದರೆ ಎಷ್ಟು ವರ್ಷಕ್ಕಿಂತ ಕೆಳಗಿನವರು?

ಎ) 18 ವರ್ಷ ಬಿ) 16 ವರ್ಷ

ಸಿ) 15 ವರ್ಷ ಡಿ) 14 ವರ್ಷ

127. ನಮ್ಮ ಸಂವಿಧಾನದ ಯಾವ ವಿಧಿಯು ಅಸ್ಪೃಶ್ಯತಾ ಆಚರಣೆಯನ್ನು ತೊಡೆದು ಹಾಕಿದೆ?

ಎ) 19ನೆಯ ವಿಧಿ ಬಿ) 20ನೆಯ ವಿಧಿ

ಸಿ) 17ನೆಯ ವಿಧಿ ಡಿ) 21ನೆಯ ವಿಧಿ

128. ಕೆಳಗಿನ ರಾಷ್ಟ್ರಗಳ ಪೈಕಿ ಯಾವ ರಾಷ್ಟ್ರವು ಭಾರತದೊಂದಿಗೆ ಅತ್ಯಂತ ಉದ್ದನೆಯ ಗಡಿ ಹೊಂದಿದೆ?

ಎ) ಪಾಕಿಸ್ತಾನ ಬಿ) ಭೂತಾನ್

ಸಿ) ನೇಪಾಳ ಡಿ) ಚೀನಾ

129. ಹಿಮಾಲಯ ಪರ್ವತ ಶ್ರೇಣಿಯ ಪಶ್ಚಿಮದ ಗಡಿ ಯಾವುದು?

ಎ) ಮೌಂಟ್ ಎವರೆಸ್ಟ್ ಬಿ) ಪಾಮಿರ್

ಸಿ) ಕಾಂಚನಜುಂಗ ಡಿ) ಇದ್ಯಾವುದೂ ಅಲ್ಲ

130. ಜನಾಂಗೀಯ ನಿಂದನೆ ಆರೋಪದಲ್ಲಿ ಕ್ರಿಕೆಟ್‌ನಿಂದ ಅಮಾನತುಗೊಂಡಿರುವ ಒಲಿ ರಾಬಿನ್‌ಸನ್ ಯಾವ ದೇಶದವರು?

ಎ) ಇಂಗ್ಲೆಂಡ್

ಬಿ) ನ್ಯೂಜಿಲೆಂಡ್

ಸಿ) ಐರ್ಲೆಂಡ್

ಡಿ) ವೆಸ್ಟ್‌ಇಂಡೀಸ್

131. ಬಾದಾಮಿಯಲ್ಲಿ ಗುಹಾಂತರ ದೇವಾಲಯಗಳನ್ನು ನಿರ್ಮಿಸಿದವರು ಯಾರು?

ಎ) ರಾಷ್ಟ್ರಕೂಟರು ಬಿ) ಚೋಳರು

ಸಿ) ಪಲ್ಲವರು ಡಿ) ಚಾಲುಕ್ಯರು

132. ಹೊಯ್ಸಳರ ರಾಜಧಾನಿ ಯಾವುದಾಗಿತ್ತು?

ಎ) ಮೈಸೂರು

ಬಿ) ಹಂಪಿ

ಸಿ) ದ್ವಾರಸಮುದ್ರ

ಡಿ) ಬಾದಾಮಿ

133. ಮಧ್ಯಕಾಲೀನ ಭಾರತದ ಮೊದಲ ಮುಸ್ಲಿಂ ಮಹಿಳಾ ಸಾಮ್ರಾಜ್ಞಿ ಯಾರು?

ಎ) ಮುಮ್ತಾಜ್ ಮಹಲ್

ಬಿ) ನೂರ್ ಜಹಾನ್

ಸಿ) ಜಹನಾರ ಬೇಗಂ

ಡಿ) ರಜಿಯಾ ಬೇಗಂ

134. ಚಕ್ರವರ್ತಿ ಅಕ್ಬರ್‌ನ ಮೂಲ ಹೆಸರು ಯಾವುದು?

ಎ) ಜಲಾಲ್-ಉದ್-ದೀನ್ ಮಹಮದ್

ಬಿ) ಹುಮಾಯೂನ್

ಸಿ) ಬೈರಂ ಖಾನ್

ಡಿ) ದಿವಾನ್-ಇ-ಅಲಿ

135. ಯಾರನ್ನು ಆಧುನಿಕ ಮೈಸೂರಿನ ಶಿಲ್ಪಿ ಎಂದು ಪರಿಗಣಿಸಲಾಗಿದೆ?

ಎ) ಸರ್ ಮಿರ್ಜಾ ಇಸ್ಮಾಯಿಲ್

ಬಿ) ಜೇಮ್ಸ್ ಗೋರ್ಡನ್

ಸಿ) ಸರ್ ಎಂ. ವಿಶ್ವೇಶ್ವರಯ್ಯ

ಡಿ) ದಿವಾನ್ ರಂಗಾಚಾರ್ಲು

136. AXB = C ಆಗಿದ್ದು, A = 13 ಮತ್ತು C = 0 ಆದರೆ, B ಯ ಬೆಲೆ ಏನಾಗಿರುತ್ತದೆ?

ಎ) 6 ಬಿ) 7

ಸಿ) 1 ಡಿ) 0

137. ಈ ಸರಣಿಯ ಮುಂದಿನ ಸಂಖ್ಯೆ ಯಾವುದು?

5, 12, 4, 13, 3, 14, ...?

ಎ) 15 ಬಿ) 2

ಸಿ) 1 ಡಿ) 6

138. ಪೋಖ್ರಾನ್ ಯಾವ ರಾಜ್ಯದಲ್ಲಿದೆ?

ಎ) ಗುಜರಾತ್

ಬಿ) ಹರಿಯಾಣ

ಸಿ) ರಾಜಸ್ಥಾನ

ಡಿ) ಪಂಜಾಬ್

139. ಲಕ್ಷದ್ವೀಪದ ಆಡಳಿತಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವವರು ಯಾರು?

ಎ) ಕರಮ್‌ಬೀರ್ ಸಿಂಗ್

ಬಿ) ಅವನೀಶ್ ಕಪೂರ್

ಸಿ) ಪ್ರಫುಲ್ ಖೋಡಾ ಪಟೇಲ್

ಡಿ) ರಮಣ್‌ದೀಪ್

140. ಮಹಾತ್ಮಾಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯ ಪ್ರತಿ ದಿನದ ಕೂಲಿ ಎಷ್ಟು?

ಎ) ₹189

ಬಿ) ₹ 389

ಸಿ) ₹169

ಡಿ) ₹ 289

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಭಾಗ- 9ರ ಉತ್ತರ

111. ಡಿ, 112. ಎ, 113. ಬಿ, 114. ಡಿ, 115. ಬಿ, 116. ಸಿ, 117. ಡಿ, 118. ಎ, 119. ಬಿ, 120. ಸಿ, 121. ಡಿ, 122. ಎ, 123. ಡಿ, 124. ಬಿ, 125. ಎ

ಗೊಂದಲ ಸೃಷ್ಟಿಸಬೇಡಿ: ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲಾ ತಾಕೀತು

ಭಾವಿ ಸಿ.ಎಂ ಹೇಳಿಕೆ: ಹೈಕಮಾಂಡ್ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಮುಂದಿನ ಮುಖ್ಯಮಂತ್ರಿ ಯಾರು ಆಗಲಿದ್ದಾರೆ ಎಂಬುದನ್ನು ಬಿಂಬಿಸುತ್ತಾ ಗೊಂದಲ ಸೃಷ್ಟಿಸುವ ಕೆಲಸ ಬಿಟ್ಟು, ಪಕ್ಷವನ್ನು ಅಧಿಕಾರಕ್ಕೆ ತರುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸಬೇಕು' ಎಂದು ಕಾಂಗ್ರೆಸ್ ಹೈಕಮಾಂಡ್ ರಾಜ್ಯ ಮುಖಂಡರಿಗೆ ಎಚ್ಚರಿಕೆ ನೀಡಿದೆ.

ಶಾಸಕರಾದ ಜಮೀರ್ ಅಹಮದ್ ಹಾಗೂ ರಾಘವೇಂದ್ರ ಹಿಟ್ನಾಳ್, ಮತ್ತಿತರರು 'ಸಿದ್ದರಾಮಯ್ಯನವರೇ ರಾಜ್ಯದ ಮುಂದಿನ ಮುಖ್ಯಮಂತ್ರಿ' ಎಂಬ ಹೇಳಿಕೆ ನೀಡುತ್ತಿದ್ದಾರೆ. ಇದನ್ನು ಕೆಲವು ಮುಖಂಡರು ವಿರೋಧಿಸಿರುವ ಕಾರಣ ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲಾ ಸೋಮವಾರ ಪ್ರಕಟಣೆ ಮೂಲಕ

ಸುರ್ಜೇವಾಲಾ

ಈ ಎಚ್ಚರಿಕೆ ನೀಡಿದ್ದಾರೆ.

'ಇತ್ತೀಚೆಗೆ ಪಕ್ಷದ ಕೆಲವು ರಾಜ್ಯ ಮುಖಂಡರು ನಾಯಕತ್ವದ ಬಗ್ಗೆ ಹಾಗೂ ಕಾಂಗ್ರೆಸ್ ಸರ್ಕಾರ ರಚನೆ ಆದರಲ್ಲಿ ಮುಖ್ಯಮಂತ್ರಿ ಯಾರು ಆಗಲಿದ್ದಾರೆ ಎಂಬ ಬಗ್ಗೆ ಕಳವಳಕಾರಿ ಹೇಳಿಕೆ ನೀಡುತ್ತಿರುವುದನ್ನು ಗಮನಿಸುತ್ತಲೇ ಇದ್ದೇನೆ. ಮುಖ್ಯಮಂತ್ರಿ ಆಯ್ಕೆಯ ವಿಚಾರವು ಪಕ್ಷ ಹಾಗೂ ಶಾಸಕರ ನಿರ್ಧಾರಕ್ಕೆ ಬಿಟ್ಟದ್ದು' ಎಂದಿದ್ದಾರೆ.

ಈ ರೀತಿ ಹೇಳಿಕೆ ನೀಡುವುದನ್ನು ಪಕ್ಷ ಖಂಡಿತ ಸಹಿಸುವುದಿಲ್ಲ. ಗೊಂದಲ ಉಂಟುಮಾಡುವ ಹೇಳಿಕೆ ನೀಡುವವರಿಗೆ ಇದು ಮುನ್ನೆಚ್ಚರಿಕೆಯಾಗಿದೆ. ರಾಜ್ಯದ ಪ್ರಗತಿ ಮತ್ತು ಜನರ ಹಿತವೇ ಸದ್ಯ ಕಾಂಗ್ರೆಸ್ ಎದುರಿಗಿರುವ ಏಕೈಕ ಗುರಿ' ಎಂದೂ ಅವರು ಒತ್ತಿ ಹೇಳಿದ್ದಾರೆ.

'ರಾಜ್ಯದ ಜನರ ಹಿತ ಕಾಯುವ ಉದ್ದೇಶದೊಂದಿಗೆ ಪಕ್ಷದ ಎಲ್ಲ ನಾಯಕರು ಒಂದಾಗಿ ಮಹಾಭಾರತದ 'ಅರ್ಜುನ'ನಂತೆ ಹೋರಾಡಲಿದ್ದಾರೆ. ಭ್ರಷ್ಟ ಬಿಜೆಪಿ ಸರ್ಕಾರವನ್ನು ಕಿತ್ತೆಸೆಯುವುದೇ ನಮ್ಮ ಏಕೈಕ ಗುರಿ' ಎಂದಿದ್ದಾರೆ.

'ಕಾಂಗ್ರೆಸ್‌ನ ಉತ್ತಮ ಆಡಳಿತವನ್ನು ನೆನಪಿಟ್ಟುಕೊಂಡಿರುವ ಕರ್ನಾಟಕದ ಜನತೆ, ಜನಪರ ಯೋಜನೆಗಳ ಜಾರಿಯ ನಿಟ್ಟಿನಲ್ಲಿ ಮತ್ತೆ ನಮ್ಮತ್ತ ಗಮನ ಹರಿಸಿದ್ದಾರೆ. ಮತ್ತೆ ಅಧಿಕಾರಕ್ಕೆ ಬರುವ ಮೂಲಕ ಜನರ ಆಶೋತ್ತರಗಳಿಗೆ ಸ್ಪಂದಿಸುವತ್ತ ಗಮನ ಹರಿಸಬೇಕಿದೆ' ಎಂದೂ ಅವರು ಪಕ್ಷದ ಶಾಸಕರು ಮತ್ತು ಮುಖಂಡರಿಗೆ ಕಿವಿಮಾತು ಹೇಳಿದ್ದಾರೆ.

ಕಾಂಗ್ರೆಸ್‌ನಲ್ಲಿ ಬಣಗಳಿಲ್ಲ: ಸಿದ್ದರಾಮಯ್ಯ

ಸಿದ್ದರಾಮಯ್ಯ

ಕೊಪ್ಪಳ: 'ಕಾಂಗ್ರೆಸ್‌ನಲ್ಲಿ ಬಣಗಳಿಲ್ಲ. ಭಿನ್ನಾಭಿಪ್ರಾಯ, ಒಡಕಿನ ಮಾತೇ ಇಲ್ಲ. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ನನಗೆ ತಿಳಿಸಿಯೇ ದೆಹಲಿಗೆ ತೆರಳಿದ್ದು, ನಮ್ಮ ಪಕ್ಷದ ರಾಜ್ಯ ಉಸ್ತುವಾರಿ ಸುರ್ಜೇವಾಲಾ ಅವರನ್ನು ಭೇಟಿಯಾಗುವರು' ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

'ಚುನಾವಣೆ ಇನ್ನೂ ದೂರವಿದೆ. ಚುನಾವಣೆ ನಡೆದು ನಮ್ಮ ಪಕ್ಷ ಅಧಿಕಾರಕ್ಕೆ ಬಂದ ಬಳಿಕ ಮುಖ್ಯಮಂತ್ರಿ ಆಯ್ಕೆ ಕುರಿತು ಎಲ್ಲರ ಅಭಿಪ್ರಾಯ ಪಡೆಯಲಾಗುತ್ತದೆ. ಕೆಲವರು ನನ್ನನ್ನೇ ಮುಖ್ಯಮಂತ್ರಿ ಮಾಡಬೇಕೆಂದು ಹೇಳಿರುವುದು ಅವರ ವೈಯಕ್ತಿಕ ಅಭಿಪ್ರಾಯ' ಎಂದು ಸೋಮವಾರ ಇಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

ಸಿದ್ದು ಮುಂದಿನ ಸಿಎಂ: ಕೊರೊನಾದಿಂದ ಸಂಕಷ್ಟಕ್ಕೀಡಾದವರಿಗೆ ಆಹಾರ ಧಾನ್ಯದ ಕಿಟ್ ವಿತರಿಸಲು ಶಾಸಕ ರಾಘವೇಂದ್ರ ಹಿಟ್ನಾಳ ಸಮಾರಂಭ ಏರ್ಪಡಿಸಿದ್ದರು.

ಸಿದ್ದರಾಮಯ್ಯ ಅವರೂ ಪಾಲ್ಗೊಂಡಿದ್ದ ಈ ಸಮಾರಂಭದಲ್ಲಿ ಮಾತನಾಡಿದ ರಾಘವೇಂದ್ರ, 'ಅನ್ನಭಾಗ್ಯದ ಮೂಲಕ ಬಡವರ ಹಸಿವು ನೀಗಿಸಿದ ನಾಯಕ ಸಿದ್ದರಾಮಯ್ಯ ಮುಂದಿನ ಮುಖ್ಯಮಂತ್ರಿಯಾಗಬೇಕು. ನೀವು ಬೆಂಬಲಿಸಬೇಕು' ಎಂದು ಜನರಿಗೆ ಮನವಿ ಮಾಡಿದರು.

ವೇದಿಕೆಯಲ್ಲಿದ್ದ ಹೆಬ್ಬಾಳ ಶಾಸಕ ಭೈರತಿ ಸುರೇಶ ಅವರು ರಾಘವೇಂದ್ರ ಹಿಟ್ನಾಳ ಬಳಿ ಬಂದು, ಕಿವಿಯಲ್ಲಿ ಏನೋ ಹೇಳಿದರು. ನಂತರ ರಾಘವೇಂದ್ರ ಅವರ ಮಾತಿನ ಧಾಟಿ ಬದಲಾಯಿತು.

ಶಾಸಕ ಜಮೀರ್ ಅಹಮದ್ ಖಾನ್ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರೂ ಮಾತನಾಡಲಿಲ್ಲ.

'ಬಿಎಸ್‌ವೈ ಬದಲಾವಣೆ ಖಚಿತ': 'ಬಿಜೆಪಿಯಲ್ಲಿ ಗೊಂದಲಗಳಿದ್ದು, ಮುಂದಿನ ದಿನಗಳಲ್ಲಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಬದಲಾವಣೆ ನಿಶ್ಚಿತ' ಎಂದು ಸಿದ್ದರಾಮಯ್ಯ ತಿಳಿಸಿದರು.

'ಬಿಜೆಪಿ ಶಾಸಕ ಅರವಿಂದ ಬೆಲ್ಲದ ತಮ್ಮ ಫೋನ್ ಕದ್ದಾಲಿಕೆಯಾಗುತ್ತಿದೆ ಎಂದು ಹೇಳಿದ್ದಾರೆ. ಹೀಗಾಗಿ ತನಿಖೆ ನಡೆಸುವಂತೆ ಒತ್ತಾಯಿಸಿದ್ದೇನೆ. ನೀರಾವರಿ ಇಲಾಖೆ ಟೆಂಡರ್‌ನಲ್ಲಿ ₹2 ಸಾವಿರ ಕೋಟಿ ಕಿಕ್ ಬ್ಯಾಕ್ ಪಡೆದಿರುವ ಬಗ್ಗೆ ಬಿಜೆಪಿಯ ಎಚ್.ವಿಶ್ವನಾಥ ಅವರೇ ಆರೋಪಿಸಿದ್ದಾರೆ. ಇವು ನಾವು ಮಾಡಿದ ಆರೋಪಗಳಲ್ಲ' ಎಂದರು.

ಪದಾಧಿಕಾರಿಗಳ ಬದಲಾವಣೆಗೆ ಒತ್ತು: ಡಿಕೆಶಿ

ನವದೆಹಲಿ: 'ಜಿಲ್ಲಾ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ ಹಾಗೂ ಪಾಲಿಕೆ ಚುನಾವಣೆಗಳಿಗೆ ಪಕ್ಷವನ್ನು ಸನ್ನದ್ಧಗೊಳಿಸುವ ನಿಟ್ಟಿನಲ್ಲಿ ಕಾಂಗ್ರೆಸ್‌ನ ಜಿಲ್ಲಾ ಹಾಗೂ ಬ್ಲಾಕ್ ಮಟ್ಟದ ಪದಾಧಿಕಾರಿಗಳನ್ನು ಬದಲಿಸುವ ಚಿಂತನೆ ನಡೆದಿದೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಶಿವಕುಮಾರ್

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ರಾಜ್ಯದ ಅ ಧ ದ ಪ್ಪು ಜಿಲ್ಲೆಗಳಲ್ಲಿ ಕೊರೊನಾದಿಂದ ಸಮಸ್ಯೆಗೆ ಒಳಗಾಗಿರುವ ಜನರ ನೆರವಿಗೆ ಬಾರದ ಹಾಗೂ ಪಕ್ಷ ಸಂಘಟನೆಯಲ್ಲಿ ವಿಫಲರಾಗಿರುವ ಅಧ್ಯಕ್ಷರನ್ನೂ ಒಳಗೊಂಡಂತೆ ಆಯಾ ಘಟಕಗಳ ಪದಾಧಿಕಾರಿಗಳನ್ನು ಬದಲಿಸುವ ಅಗತ್ಯವಿದೆ' ಎಂದು ಅವರು ಅಭಿಪ್ರಾಯಪಟ್ಟರು.

'ಪಕ್ಷವನ್ನು ಪುನಶ್ಚೇತನಗೊಳಿಸುವ ನಿಟ್ಟಿನಲ್ಲಿ ಕೆಲವು ಬದಲಾವಣೆಗಳನ್ನು ತರುವುದು ಅಗತ್ಯ. ಕೆಪಿಸಿಸಿ ಅಧ್ಯಕ್ಷನಾದ ನಂತರ ಕೆಲವು ನಿಷ್ಕ್ರಿಯ ಅಧ್ಯಕ್ಷರು ಇರುವುದನ್ನು ಗಮನಿಸಿದ್ದೇನೆ. ಅಂಥವರನ್ನು ಬದಲಿಸಿ, ಕಾರ್ಯಕರ್ತರಲ್ಲೂ ಹುರುಪು ತುಂಬುವ ಕೆಲಸ ಮಾಡಬೇಕಿದೆ' ಎಂದು ಹೇಳಿದರು.

'ರಾಜ್ಯದಲ್ಲಿ ಈಗ ಮುಖ್ಯಮಂತ್ರಿ ಸ್ಥಾನ ಖಾಲಿ ಇಲ್ಲ. ಆದರೂ ಕೆಲವರು ಮುಂದಿನ ಮುಖ್ಯಮಂತ್ರಿ ಯಾರು ಆಗಲಿದ್ದಾರೆ ಎಂಬ ಗೊಂದಲಮಯ ಹೇಳಿಕೆ ನೀಡುತ್ತಿದ್ದಾರೆ. ಈ ಬಗ್ಗೆ ಮಹತ್ವ ನೀಡುವ ಅಗತ್ಯ ಇಲ್ಲ' ಎಂದು ಹೇಳಿದರು.

'ಪಕ್ಷದ ಮುಖಂಡರಾದ ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಅವರೊಂದಿಗೆ ಚರ್ಚಿಸಿ ಪಕ್ಷ ಸಂಘಟನೆ ಹಾಗೂ ಪದಾಧಿಕಾರಿಗಳ ಬದಲಾವಣೆಗೆ ಸಂಬಂಧಿಸಿದಂತೆ ಒಪ್ಪಿಗೆ ಪಡೆಯುವೆ' ಎಂದು ಅವರು ಹೇಳಿದರು.

ಸದನ ಸಮಿತಿ ರಚಿಸಿ: 'ಜಲಸಂಪನ್ಮೂಲ ಇಲಾಖೆಯಲ್ಲಿ ನಡೆದಿದೆ ಎನ್ನಲಾದ ಅಕ್ರಮದ ತನಿಖೆಗಾಗಿ ಜಂಟಿ ಸದನ ಸಮಿತಿ ರಚಿಸಿ ತನಿಖೆ ನಡೆಸುವಂತೆ ಮುಖ್ಯಮಂತ್ರಿ ಯಡಿಯೂರಪ್ಪ ಅವರನ್ನು ಕೋರಿದ್ದೇವೆ. ಕೂಡಲೇ ವಿಧಾನ ಮಂಡಲದ 'ವರ್ಚುವಲ್' ಅಧಿವೇಶನ ನಡೆಸುವಂತೆಯೂ ಆಗ್ರಹಿಸಲಾಗಿದೆ' ಎಂದರು.

ನಲಪಾಡ್– ರಕ್ಷಾ ಸಂಧಾನ ಸಭೆ

ನವದೆಹಲಿ: ಯುವ ಕಾಂಗ್ರೆಸ್‌ನ ರಾಜ್ಯ ಘಟಕದ ಅಧ್ಯಕ್ಷ ಸ್ಥಾನವನ್ನು ಅಂತಿಮಗೊಳಿಸುವ ನಿಟ್ಟಿನಲ್ಲಿ ಶಾಂತಿನಗರ ಶಾಸಕ ಎನ್.ಎ. ಹ್ಯಾರಿಸ್ ಅವರ ಪುತ್ರ ಮೊಹಮ್ಮದ್ ನಲಪಾಡ್ ಹಾಗೂ ಮಾಜಿ ಸಚಿವ ಎಂ.ಆರ್. ಸೀತಾರಾಮ್ ಅವರ ಪುತ್ರ ರಕ್ಷಾ ರಾಮಯ್ಯ ನಡುವೆ ಸಂಧಾನ ಏರ್ಪಡಿಸಲು ಕಾಂಗ್ರೆಸ್ ಯುವ ಘಟಕ ಪ್ರಯತ್ನಿಸುತ್ತಿದೆ.

ಕಳೆದ ಫೆಬ್ರುವರಿಯಲ್ಲೇ ಅಧ್ಯಕ್ಷ ಸ್ಥಾನದ ಚುನಾವಣೆ ಮುಗಿದಿದೆ. ಹಲ್ಲೆಯಂತಹ ಗಂಭೀರ ಅಪರಾಧ ಪ್ರಕರಣದಲ್ಲಿ ಭಾಗಿಯಾಗಿರುವ ಮೊಹಮ್ಮದ್ ನಲಪಾಡ್ ಅತಿ ಹೆಚ್ಚು ಮತ ಪಡೆದಿದ್ದರೂ ಅಧ್ಯಕ್ಷ ಸ್ಥಾನ ದೊರೆಯಲಿಲ್ಲ. ಮತ ಗಳಿಕೆಯ ಆಧಾರದಲ್ಲಿ ನಂತರದ ಸ್ಥಾನದಲ್ಲಿರುವ ರಕ್ಷಾ ರಾಮಯ್ಯ ಅವರಿಗೆ ಅಧ್ಯಕ್ಷ ಸ್ಥಾನವನ್ನು ನೀಡಲು ನಿರ್ಧರಿಸಲಾಗಿತ್ತು.

'ನಿಯಮಾನುಸಾರ ಸ್ಪರ್ಧೆಗೆ ಅವಕಾಶ ನೀಡಿದ್ದರಿಂದ ಅತಿ ಹೆಚ್ಚು ಮತ ಪಡೆದಿದ್ದೇನೆ. ಆದರೂ, ನನ್ನ ಆಯ್ಕೆಯನ್ನು ಮಾನ್ಯ ಮಾಡದೆ, ಅನರ್ಹಗೊಳಿಸಲಾಗಿದೆ' ಎಂದು ನಲಪಾಡ್ ಪ್ರಶ್ನಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಇಬ್ಬರೂ ಯುವ ಮುಖಂಡರ ನಡುವೆ ಯುವ ಕಾಂಗ್ರೆಸ್ ಉಸ್ತುವಾರಿ ಕೃಷ್ಣ ಅಲ್ಲವಾರು ನೇತೃತ್ವದಲ್ಲಿ ಸಂಧಾನ ಸಭೆ ನಡೆಸಲಾಗುತ್ತಿದೆ. ಮುಂದಿನ ಎರಡು ದಿನಗಳ ಅವಧಿಯಲ್ಲಿ ಈ ಸಂಬಂಧ ಅಂತಿಮ ತೀರ್ಮಾನ ಹೊರಬರುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

'ಸಿ.ಎಂ ಅಭ್ಯರ್ಥಿ: ಹೈಕಮಾಂಡ್ ನಿರ್ಧಾರ'

ತುಮಕೂರು: 'ಪಕ್ಷ ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ ಮುಖ್ಯಮಂತ್ರಿ ಯಾರಾಗಬೇಕು ಎಂಬುದನ್ನು ಕಾಂಗ್ರೆಸ್ ಹೈಕಮಾಂಡ್ ನಿರ್ಧರಿಸುತ್ತದೆ' ಎಂದು ಶಾಸಕ ಜಿ.ಪರಮೇಶ್ವರ ಹೇಳಿದರು.

'ಸಿದ್ದರಾಮಯ್ಯ ಅವರೇ ಮುಂದಿನ ಮುಖ್ಯಮಂತ್ರಿ' ಎಂದು ಶಾಸಕ ಜಮೀರ್ ಅಹಮದ್ ಹೇಳಿಕೆಗೆ ಸೋಮವಾರ ಸುದ್ದಿಗಾರರಿಗೆ ಪ್ರತಿಕ್ರಿಯೆ ನೀಡಿದರು. 'ಜಮೀರ್ ಅಹಮದ್ ಹೇಳಿಕೆ ಅವರ ವೈಯಕ್ತಿಕ ಅಭಿಪ್ರಾಯ. ಇದು ಪಕ್ಷದ ನಿರ್ಧಾರವಲ್ಲ. ಶಾಸಕಾಂಗ

ಜಿ.ಪರಮೇಶ್ವರ್

ಪಕ್ಷದ ಸಭೆಯಲ್ಲಿ ಮುಖ್ಯಮಂತ್ರಿ ಅಭ್ಯರ್ಥಿಯನ್ನು ಆಯ್ಕೆ ಮಾಡಲಾಗುತ್ತದೆ' ಎಂದು ಸ್ಪಷ್ಟಪಡಿಸಿದರು.

ವಿಧಾನಸಭೆ ಚುನಾವಣೆ ಸಾಕಷ್ಟು ದೂರವಿದೆ. ಇನ್ನೂ ಚುನಾವಣೆಯೇ ನಡೆದಿಲ್ಲ. ಈಗಲೇ ಮುಖ್ಯಮಂತ್ರಿ ಯಾರಾಗಬೇಕು ಎಂದು ಹೇಗೆ ನಿರ್ಧರಿಸಲಾಗುತ್ತದೆ. ಈಗ ಈ ವಿಚಾರದ ಚರ್ಚೆ ಅಪ್ರಸ್ತುತ' ಎಂದು ತಿಳಿಸಿದರು.

ಡಿಕೆಶಿಗೆ ಸಿದ್ದರಾಮಯ್ಯ ಭಯ: ಬಿಜೆಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಾಸಕ ಜಮೀರ್ ಅಹಮ್ಮದ್ ವಿರುದ್ಧ ಕ್ರಮ ಕೈಗೊಳ್ಳಲು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರಿಗೆ ಸಿದ್ದರಾಮಯ್ಯ ಕುರಿತು ಇರುವ ಭಯವೇ ಕಾರಣ' ಎಂದು ಬಿಜೆಪಿ ಟ್ವೀಟ್ ಮಾಡಿದೆ.

'ಬಿಜೆಪಿ ನಾಯಕತ್ವದ ಬಗ್ಗೆ ಮಾತನಾಡುವ ಶಿವಕುಮಾರ್ ಅವರು ಕಾಂಗ್ರೆಸ್ ನಾಯಕತ್ವ ಜಗ್ಗಾಟದ ಬಗ್ಗೆ ಮೌನವಾಗಿದ್ದಾರೆ' ಎಂದು ಹೇಳಿದೆ.

'ಕೆಪಿಸಿಸಿ ಅಧ್ಯಕ್ಷರು ಕಾಂಗ್ರೆಸ್‌ನಲ್ಲಿ ವ್ಯಕ್ತಿ ಪೂಜೆಗಿಂತ ಪಕ್ಷ ಪೂಜೆಗೆ ಆದ್ಯತೆ ಎಂದು ಹೇಳುತ್ತಾರೆ. ಆದರೆ ಸಿದ್ದರಾಮಯ್ಯ ಅವರನ್ನು ತಲೆ ಮೇಲೆ ಹೊತ್ತು ತಿರುಗುತ್ತಿರುವ ಜಮೀರ್ ವಿರುದ್ಧ ಕ್ರಮ ತೆಗೆದುಕೊಳ್ಳುವ ಧೈರ್ಯ ತೋರುತ್ತಿಲ್ಲ' ಎಂದು ಲೇವಡಿ ಮಾಡಿದೆ.

'ರಾಜ್ಯದಲ್ಲಿ ಕೆಪಿಸಿಸಿ ಅಧ್ಯಕ್ಷರೇ ಸುಪ್ರೀಂ ಎಂದು ಪರಮೇಶ್ವರ ಹೇಳಿದ್ದಾರೆ. ಆದರೂ ಕ್ರಮ ತೆಗೆದುಕೊಳ್ಳಲು ನಿಮಗೆ ಏಕೆ ಧೈರ್ಯವಿಲ್ಲ? ಜಮೀರ್ ವಿರುದ್ಧ ಕ್ರಮ ತೆಗೆದುಕೊಂಡರೆ ವಲಸೆ ನಾಯಕ ಸಿದ್ದರಾಮಯ್ಯ ಅವರ ಕೆಂಗಣ್ಣಿಗೆ ಗುರಿಯಾಗುವ ಭಯ ನಿಮ್ಮನ್ನು ಕಾಡುತ್ತಿದೆಯೇ' ಎಂದು ಬಿಜೆಪಿ ಪ್ರಶ್ನಿಸಿದೆ.

'ಮುಂದಿನ ಮುಖ್ಯಮಂತ್ರಿ ಸ್ಥಾನದ ವಿಚಾರವನ್ನು ಸಿದ್ದರಾಮಯ್ಯ ಅವರು ತಮ್ಮ ಬೆಂಬಲಿಗರ ಮೂಲಕ ಮುನ್ನೆಲೆಗೆ ಬಿಟ್ಟಿದ್ದಾರೆ. ಆದರೆ, ದುರ್ಬಲ ಅಧ್ಯಕ್ಷರಿಗೆ ಏನೂ ಮಾಡಲಾಗುತ್ತಿಲ್ಲ' ಎಂದು ಬಿಜೆಪಿ ಹಂಗಿಸಿದೆ.

ಸುದ್ದಿ 2 ನಿಮಿಷ

ಅರುಣ್ ಸಿಂಗ್ ವರದಿ ಬಗ್ಗೆ ಗೊತ್ತಿಲ್ಲ: ಯೋಗೇಶ್ವರ್

ಚನ್ನಪಟ್ಟಣ: 'ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಅವರು ಪಕ್ಷದ ಹೈಕಮಾಂಡ್‌ಗೆ ಕೊಟ್ಟಿರುವ ವರದಿ ಬಗ್ಗೆ ನನಗೇನು ಗೊತ್ತಿಲ್ಲ' ಎಂದು ಪ್ರವಾಸೋದ್ಯಮ ಸಚಿವ ಸಿ.ಪಿ. ಯೋಗೇಶ್ವರ್ ತಿಳಿಸಿದರು.

ಪಟ್ಟಣದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ನಾನು ಯಾವುದೇ ರಾಜಕೀಯ ವಿಚಾರ ಮಾತನಾಡುವುದಿಲ್ಲ. ಈ ಬಗ್ಗೆ ತೀರ್ಮಾನ ಮಾಡಿದ್ದೇನೆ. ಅರುಣ್ ಸಿಂಗ್ ಜೊತೆಗೆ ಚರ್ಚೆ ಮಾಡಿರುವ ವಿಚಾರವನ್ನು ಮಾಧ್ಯಮದ ಮುಂದೆ ಮಾತನಾಡುವುದಿಲ್ಲ' ಎಂದರು.

'ಪಕ್ಷದ ಮೂರು ಮಂದಿ ವಿರುದ್ಧ ಶಿಸ್ತು ಕ್ರಮಕ್ಕೆಗೊಳ್ಳುವ ವಿಚಾರದ ಬಗ್ಗೆಯೂ ನನಗೆ ಗೊತ್ತಿಲ್ಲ. ಪಕ್ಷದ ಹಿರಿಯರು ಇದರ ಬಗ್ಗೆ ತೀರ್ಮಾನ ಮಾಡುತ್ತಾರೆ. ಪಕ್ಷ ಏನು ಮಾಡಲಿದೆ ಎನ್ನುವುದನ್ನು ಕಾದು ನೋಡುತ್ತೇನೆ' ಎಂದರು.

ಕಾಂಗ್ರೆಸ್ ನಾಯಕರ ವಿರುದ್ಧ ವಾಗ್ದಾಳಿ: ಕೋವಿಡ್ ವ್ಯಾಕ್ಸಿನ್ ವಿಚಾರವಾಗಿ ಕಾಂಗ್ರೆಸ್ ನಾಯಕರು ಸಾಕಷ್ಟು ಅಪಪ್ರಚಾರ ಮಾಡಿದರು. ಈಗ ಅವರ ಮನೆಯವರೆ ವ್ಯಾಕ್ಸಿನ್ ಹಾಕಿಸಿಕೊಳ್ಳುತ್ತಿದ್ದಾರೆ ಎಂದು ಯೋಗೇಶ್ವರ್ ವಾಗ್ದಾಳಿ ನಡೆಸಿದರು.

ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಅವರಂತಹ ಕಾಂಗ್ರೆಸ್ ಧುರೀಣರು ವ್ಯಾಕ್ಸಿನ್ ಬಗ್ಗೆ ಅಪಪ್ರಚಾರ ಮಾಡಿದರು. ಆದರೆ, ಈಗ ಜನರಿಗೆ ಎಲ್ಲವೂ ಗೊತ್ತಾಗಿದೆ. ಹಾಗಾಗಿ, ಜನರೇ ಆಸ್ಪತ್ರೆಗಳಿಗೆ ಬಂದು ವ್ಯಾಕ್ಸಿನ್ ಹಾಕಿಸಿಕೊಳ್ಳುತ್ತಿದ್ದಾರೆ ಎಂದರು.

ರಾಜ್ಯದಲ್ಲಿ ಕೋವಿಡ್‌ನಿಂದ ಸಾವು, ನೋವು ಆಗಲು ಕಾಂಗ್ರೆಸ್ಸಿಗರ ಅಪಪ್ರಚಾರವೇ ಕಾರಣ. ಸೂಕ್ತ ಸಮಯದಲ್ಲಿ ಜನತೆ ವ್ಯಾಕ್ಸಿನ್ ತೆಗೆದುಕೊಂಡಿದ್ದರೆ ಸಾವು, ನೋವಿನ ಪ್ರಮಾಣ ಕಡಿಮೆಯಾಗುತ್ತಿತ್ತು. ಕಾಂಗ್ರೆಸ್ ನಾಯಕರ ಅಪಪ್ರಚಾರದಿಂದಾಗಿ ಜನತೆ ವ್ಯಾಕ್ಸಿನ್ ತೆಗೆದುಕೊಳ್ಳಲು ಹಿಂಜರಿದರು. ಇದರಿಂದ ಸಾವಿನ ಪ್ರಮಾಣದಲ್ಲಿ ಏರಿಕೆಯಾಯಿತು. ಕಾಂಗ್ರೆಸ್ ನಾಯಕರು ಈ ಪಾಪದ ಮೂಟೆ ಹೊರುತ್ತಾರೆ ಎಂದರು.

ದೇವೇಂದ್ರ ಫಡಣವಿಸ್ ಭೇಟಿಯಾದ ರಮೇಶ ಜಾರಕಿಹೊಳಿ

ಬೆಳಗಾವಿ: ಸಚಿವ ಸಂಪುಟಕ್ಕೆ ಮರು ಸೇರ್ಪಡೆ ಮತ್ತು ತಮ್ಮ ವಿರುದ್ಧದ ಸಿ.ಡಿ. ಪ್ರಕರಣದಿಂದ ಮುಕ್ತರಾಗಲು ಕಸರತ್ತು ನಡೆಸುತ್ತಿರುವ ಗೋಕಾಕದ ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಮಹಾರಾಷ್ಟ್ರ ವಿಧಾನಸಭೆ ವಿರೋಧಪಕ್ಷದ ನಾಯಕ ದೇವೇಂದ್ರ ಫಡಣವೀಸ್ ಅವರನ್ನು ಸೋಮವಾರ ಭೇಟಿಯಾಗಿ ಚರ್ಚಿಸಿರುವುದು ಕುತೂಹಲಕ್ಕೆ ಎಡೆ ಮಾಡಿಕೊಟ್ಟಿದೆ.

ಮುಂಬೈನಲ್ಲಿ ಬೀಡು ಬಿಟ್ಟು ಅಲ್ಲಿನ ನಾಯಕರ ಮೂಲಕ ಪಕ್ಷದ ವರಿಷ್ಠರ ಮೇಲೆ ಪ್ರಭಾವ ಬೀರಲು ಮುಂದಾಗಿದ್ದಾರೆ.

ಮೊದಲಿಗೆ ಫಡಣವಿಸ್ ಅವರೊಂದಿಗೆ ಚರ್ಚಿಸಿದ್ದಾರೆ. ತಮ್ಮನ್ನು ಸಂಕಷ್ಟದಿಂದ ಪಾರು ಮಾಡುವಂತೆ ಕೋರಿದ್ದಾರೆ. ಅವರು ಸಕಾರಾತ್ಮಕವಾಗಿ ಸ್ಪಂದಿಸಿದ್ದು, ವಿಷಯವನ್ನು ವರಿಷ್ಠರ ಗಮನಕ್ಕೂ ತರುವುದಾಗಿ ಭರವಸೆ ನೀಡಿದ್ದಾರೆ ಎಂದು ಹೇಳಲಾಗಿದೆ.

'₹ 19,370 ಕೋಟಿ ಅಲ್ಪಾವಧಿ ಬೆಳೆ ಸಾಲ ಗುರಿ'

ಪ್ರಜಾವಾಣಿ ವಾರ್ತೆ

ಸ್ತ್ರೀ ಸ್ವಸಹಾಯ ಸಂಘದ ಫಲಾನುಭವಿಯೊಬ್ಬರಿಗೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸಾಂಕೇತಿಕವಾಗಿ ಸಾಲ ಪತ್ರ ವಿತರಿಸಿದರು. ಉಪಮುಖ್ಯಮಂತ್ರಿ ಲಕ್

ಪವಾರ್ ನೇತೃತ್ವದಲ್ಲಿ ಇಂದು ಸಭೆ; ಪ್ರಶಾಂತ್ ಕಿಶೋರ್ ಜತೆ ಮಾತುಕತೆ

ವಿರೋಧಿ ಮೈತ್ರಿಕೂಟದ ಮೊದಲ ಮೆಟ್ಟಿಲು?

ಪ್ರಜಾವಾಣಿ ವಾರ್ತೆ

ನವದೆಹಲಿ: 2022ರ ರಾಷ್ಟ್ರಪತಿ ಚುನಾವಣೆ ಮತ್ತು 2024ರ ಸಾರ್ವತ್ರಿಕ ಚುನಾವಣೆಗಳನ್ನು ದೃಷ್ಟಿಯಲ್ಲಿಟ್ಟು ಪ್ರಾದೇಶಿಕ ಮೈತ್ರಿಕೂಟ ಕಟ್ಟುವ ಯತ್ನದ ಭಾಗವಾಗಿ ದೆಹಲಿಯಲ್ಲಿ ಮಂಗಳವಾರ ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ನೇತೃತ್ವದಲ್ಲಿ ಪ್ರತಿಪಕ್ಷಗಳ ನಾಯಕರು ಸಭೆ ನಡೆಸಲಿದ್ದಾರೆ.

ಶರದ್ ಪವಾರ್

ಚುನಾವಣಾ ರಾಜಕೀಯ ನಿಪುಣ ಪ್ರಶಾಂತ್ ಕಿಶೋರ್ ಅವರು ಶರದ್ ಪವಾರ್ ಅವರ ಜೊತೆ ಸೋಮವಾರ ಎರಡು ಗಂಟೆ ಕಾಲ ಮಾತುಕತೆ ನಡೆಸಿದ್ದಾರೆ. ಹದಿನೈದು ದಿನಗಳ ಅವಧಿಯಲ್ಲಿ ಪವಾರ್– ಕಿಶೋರ್ ಮಧ್ಯೆ ನಡೆದ ಎರಡನೇ ಮಾತುಕತೆ ಇದಾಗಿದ್ದು, ಮುಂದಿನ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಎದುರಿಸುವ ಸಮರ್ಥ ಮೈತ್ರಿಕೂಟವನ್ನು ರಚಿಸುವ ಯತ್ನವಿದು ಎನ್ನಲಾಗುತ್ತಿದೆ.

ಎಲ್ಲಾ ವಿರೋಧ ಪಕ್ಷಗಳನ್ನು ಒಗ್ಗೂಡಿಸಲು ಪವಾರ್ ಮಂಗಳವಾರ ದಿಂದ ಕೆಲಸ ಮಾಡುವರು. ಅವರ ಅಧ್ಯಕ್ಷತೆಯಲ್ಲಿ ನಡೆಯಲಿರುವ ಸಭೆಯು ಮುಂಬರುವ ಲೋಕಸಭಾ ಅಧಿವೇಶನದ ಬಗ್ಗೆ ಮತ್ತು ದೇಶದ ರಾಜಕೀಯ ಪರಿಸ್ಥಿತಿಗಳ ಬಗ್ಗೆ ಚರ್ಚಿಸಲಿದೆ ಎಂದು ಎನ್‌ಸಿಪಿ ವಕ್ತಾರ ನವಾಬ್ ಮಲಿಕ್ ಹೇಳಿದ್ದಾರೆ.

ಸಭೆಯಲ್ಲಿ ಮಾಜಿ ಹಣಕಾಸು ಸಚಿವ ಹಾಗೂ ಟಿಎಂಸಿ ಮುಖಂಡ ಯಶವಂತ್ ಸಿನ್ಹಾ, ಎಎಪಿ ಸಂಸದ ಸಂಜಯ್ ಸಿಂಗ್, ಸಿಪಿಐನ ಡಿ. ರಾಜಾ, ನ್ಯಾಷನಲ್ ಕಾನ್ಫರೆನ್ಸ್ ಪಕ್ಷದ ಫಾರೂಕ್ ಅಬ್ದುಲ್ಲಾ, ಬಿಜೆಪಿ ಮಾಜಿ ನಾಯಕ ಸುಧೀಂದ್ರ ಕುಲಕರ್ಣಿ, ಜೆಡಿಯುನ ಮಾಜಿ ಸಂಸದ ಪವನ್ ವರ್ಮಾ, ಕಾಂಗ್ರೆಸ್ ಮಾಜಿ ವಕ್ತಾರ ಸಂಜಯ್ ಝಾ, ಮಾಜಿ ಸಂಸದರಾದ ಕೆಟಿಎಸ್ ತುಳಸಿ, ಜಾವೇದ್ ಅಖ್ತರ್, ಎನ್‌ಸಿಪಿ ಸಂಸದರಾದ ವಂದನಾ ಚವಾಣ್ ಮತ್ತು ಮಾಜಿ ಸಂಸದ ಮಜೀದ್ ಮೆಮನ್ ಪಾಲ್ಗೊಳ್ಳುವ ನಿರೀಕ್ಷೆ ಇದೆ.

ಮೋದಿಯವರ ಕಟು ವಿಮರ್ಶಕ ಯಶವಂತ್ ಸಿನ್ಹಾ ಅವರು ಪ್ರತಿಪಕ್ಷ-ಗಳಗನ್ನು ಒಗ್ಗೂಡಿಸುವ ಪ್ರಯತ್ನ-ಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ. ಮುಂದಿನ ಸಾರ್ವತ್ರಿಕ ಚುನಾವಣೆಗೆ ಮುಂಚಿತವಾಗಿ ಯುಪಿಎ ಸಂಭಾವ್ಯ ಅಧ್ಯಕ್ಷರಾಗಿ ಪವಾರ್ ಅವರನ್ನು ಯೋಜಿಸುವ ಚಿಂತನೆಯೂ ಇದ್ದು, ಮುಖ್ಯ ವಿರೋಧ ಪಕ್ಷವಾದ ಕಾಂಗ್ರೆಸ್ ಮುಖಂಡರು ಈ ಸಭೆಗೆ ಹಾಜರಾಗು-ತ್ತಾರೆಯೇ ಎಂಬ ಕುತೂಹಲ ಇದೆ.

ಮುಂದಿನ ವರ್ಷ ನಡೆಯಲಿರುವ ರಾಷ್ಟ್ರಪತಿ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಪ್ರತಿಪಕ್ಷ ನಾಯಕರು ಹೇಗೆ ಒಟ್ಟಾಗಿ ಕೆಲಸ ಮಾಡುತ್ತಾರೆ ಎಂಬುದನ್ನು ಇದು ತೋರಿಸುತ್ತಿದೆ. ಪವಾರ್ ಅವರು ಎಲ್ಲ ರಾಜಕೀಯ ಪಕ್ಷಗಳ ಜೊತೆ ಉತ್ತಮ ಬಾಂಧವ್ಯ ಹೊಂದಿದ್ದಾರೆ. ವಿರೋಧ ಪಕ್ಷದ ಅನೇಕರಿಗೆ ಇದನ್ನು ಸಾಧಿಸಲು ಸಾಧ್ಯವಿಲ್ಲ ಎಂದು ಮಲಿಕ್ ಹೇಳಿದ್ದಾರೆ.

2012ರ ರಾಷ್ಟ್ರಪತಿ ಚುನಾವಣೆಯಲ್ಲಿ ಯುಪಿಎ ಅಭ್ಯರ್ಥಿ ಪ್ರಣಬ್ ಮುಖರ್ಜಿ ಅವರು ಎನ್‌ಡಿಎ ಮನವೊಲಿಸಲು ಯಶಸ್ವಿಯಾಗಿದ್ದರು. ಜೆಡಿಯು ಮತ್ತು ಶಿವಸೇನಾದ ಬೆಂಬಲವನ್ನೂ ಪಡೆದಿದ್ದರು. ಪವಾರ್ ಎಲ್ಲಾ ಪಕ್ಷಗಳನ್ನು ಸೆಳೆಯುವ ಶಕ್ತಿಯಾಗಿ ಹೊರಹೊಮ್ಮಿದರೆ, 2022ರ ರಾಷ್ಟ್ರಪತಿ ಚುನಾವಣೆಯು ಅವರಿಗೆ ಮೊದಲ ಪರೀಕ್ಷೆಯಾಗಲಿದೆ. ಕಾಂಗ್ರೆಸ್ ಇಲ್ಲಿಯವರೆಗೆ ಈ ವಿಷಯದ ಬಗ್ಗೆ ತನ್ನ ಅಭಿಪ್ರಾಯ ತಿಳಿಸದ ಕಾರಣ, ಕಾಂಗ್ರೆಸ್ ಹಾಗೂ ಬಿಜೆಪಿಯೇತರ ಪಕ್ಷಗಳ ಗುಂಪು ಕಟ್ಟುವ ಸಾಧ್ಯತೆಯನ್ನು ಪ್ರಾದೇಶಿಕ ಪಕ್ಷಗಳು ಎದುರು ನೋಡುತ್ತಿವೆ.

ಒಡಕು ಮೂಡಿಸುವ ಯತ್ನ ಫಲಿಸದು: ರಾವುತ್

'ಮಹಾ ವಿಕಾಸ ಅಘಾಡಿ (ಎಂವಿಎ) ಮಿತ್ರಪಕ್ಷಗಳ ನಡುವಿನ ಸಮನ್ವಯವು ಸಮ್ಮಿಶ್ರ ಸರ್ಕಾರ ಹೇಗೆ ಕಾರ್ಯ-ನಿರ್ವಹಿಸಬೇಕು ಎಂಬುದಕ್ಕೆ ಮಾದರಿಯಾಗಿದೆ' ಎಂದು ಶಿವಸೇನಾದ ಸಂಸದ ಸಂಜಯ್ ರಾವುತ್ ಸೋಮವಾರ ಹೇಳಿದ್ದಾರೆ. ರಾಜ್ಯದ ಆಡಳಿತ ಪಕ್ಷಗಳಾದ ಶಿವಸೇನಾ, ಎನ್‌ಸಿಪಿ ಮತ್ತು ಕಾಂಗ್ರೆಸ್ ನಡುವೆ ಬಿರುಕು ಮೂಡಿಸುವ ಪ್ರಯತ್ನಗಳು ಸಫಲವಾಗುವುದಿಲ್ಲ ಎಂದು ಅವರು ಹೇಳಿದ್ದಾರೆ.

'ಮೂರು ಪಕ್ಷಗಳ ನಡುವಿನ ಬಾಂಧವ್ಯವು ಪ್ರಬಲವಾಗಿದೆ' ಎಂದು ಪ್ರತಿಪಾದಿಸಿದ ಅವರು, ಎಲ್ಲರೂ ತಮ್ಮ ಪಕ್ಷದ ಸಂಘಟನೆಗಳನ್ನು ಬಲಪಡಿಸಲು ಕೆಲಸ ಮಾಡುತ್ತಿದ್ದಾರೆ ಎಂದರು.

ಮುಂದಿನ ಚುನಾವಣೆಗಳಲ್ಲಿ ಏಕಾಂಗಿಯಾಗಿ ಸ್ಪರ್ಧಿಸು-ವುದಾಗಿ ಕಾಂಗ್ರೆಸ್‌ನ ಮಹಾರಾಷ್ಟ್ರ ಘಟಕದ ಅಧ್ಯಕ್ಷ ನಾನಾ ಪಟೋಲೆ ಹೇಳಿಕೆ ನೀಡಿದ ಕೆಲವೇ ದಿನಗಳಲ್ಲಿ ರಾವುತ್ ಈ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. 'ಮುಂದಿನ ಚುನಾವಣೆಗಳ ಬಗ್ಗೆ ಯಾವುದೇ ನಿರ್ಧಾರ ಆಗಿಲ್ಲ. ಸೂಕ್ತ ಸಮಯದಲ್ಲಿ ನಿರ್ಧಾರ ತೆಗೆದುಕೊಳ್ಳಲಾಗುವುದು. ಪ್ರಸ್ತುತ ಸರ್ಕಾರವು ಐದು ವರ್ಷಗಳ ಕಾಲ ಉಳಿಯುತ್ತದೆ. ಸಾಮಾನ್ಯ ಕನಿಷ್ಠ ಕಾರ್ಯಕ್ರಮವೇ ಈ ಮೈತ್ರಿಕೂಟದ ಆತ್ಮ' ಎಂದು ಅವರು ಹೇಳಿದರು.

ಆದಷ್ಟು ಬೇಗ ಬಿಜೆಪಿ ಜೊತೆ ಹೊಂದಾಣಿಕೆ ಮಾಡಿಕೊಳ್ಳಬೇಕು ಎಂದು ಶಿವಸೇನಾ ಶಾಸಕ ಪ್ರತಾಪ್ ಸರನಾಯಕ್ ಅವರು ಉದ್ಧವ್ ಠಾಕ್ರೆ ಅವರನ್ನು ಆಗ್ರಹಿ-ಸಿದ್ದರು. ಪ್ರತಾಪ್ ವಿರುದ್ಧ ಜಾರಿ ನಿರ್ದೇಶನಾಲಯ ತನಿಖೆ ನಡೆಸುತ್ತಿದೆ.

'ಕಾಂಗ್ರೆಸ್ ಮುಖ್ಯಮಂತ್ರಿ'

ಅತ್ತ ಪ್ರಾದೇಶಿಕ ನಾಯಕರೊಂದಿಗೆ ಪವಾರ್ ಅವರ ಸಭೆ ನಿಗದಿಯಾಗಿದ್ದರೆ, ಇತ್ತ ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ಮತ್ತು ಹಿರಿಯ ಕಾಂಗ್ರೆಸ್ ಮುಖಂಡ ಪೃಥ್ವಿರಾಜ್ ಚವಾಣ್ ಅವರು, ಮುಂದಿನ ಮುಖ್ಯಮಂತ್ರಿ ಕಾಂಗ್ರೆಸ್ ಪಕ್ಷದವರಾಗಿರಬೇಕು ಎಂದಿದ್ದಾರೆ. ಅಷ್ಟೇ ಅಲ್ಲದೆ ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಏಕಾಂಗಿಯಾಗಿ ಎದುರಿಸುವುದಾಗಿಯೂ ಹೇಳಿದ್ದಾರೆ.

ಈ ಮಾತುಗಳು ಶಿವಸೇನೆ–ಎನ್‌ಸಿಪಿ–ಕಾಂಗ್ರೆಸ್ ಮೈತ್ರಿಕೂಟದ ಮಹಾ ವಿಕಾಸ ಅಘಾಡಿ ಸರ್ಕಾರದಲ್ಲಿ ಗೊಂದಲ ಸೃಷ್ಟಿಸಿವೆ.

'ಸಿಖ್ ಸಮುದಾಯದವರೇ ಸಿ.ಎಂ ಅಭ್ಯರ್ಥಿ'

ಅಮೃತಸರ (ಪಿಟಿಐ): ರಾಜ್ಯದಲ್ಲಿ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಆಮ್ ಆದ್ಮಿ ಪಕ್ಷದ ಮುಖ್ಯಮಂತ್ರಿ ಅಭ್ಯರ್ಥಿ ಸಿಖ್ ಸಮುದಾಯದವರೇ ಆಗಿರುತ್ತಾರೆ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಘೋಷಿಸಿದರು.

ಸೋಮವಾರ ಸುದ್ದಿಗಾರರ ಪ್ರಶ್ನೆಗಳಿಗೆ ಉತ್ತರಿಸಿದ ಅವರು, 'ಎಎಪಿಯ ಮುಖ್ಯಮಂತ್ರಿ ಅಭ್ಯರ್ಥಿ ಯಾರು ಎಂಬ ಕುರಿತು ಪಕ್ಷದಲ್ಲಿ ಚರ್ಚೆ ನಡೆಯುತ್ತಿವೆ. ಸಮಯ ಬಂದಾಗ ಘೋಷಣೆ ಮಾಡಲಾಗುತ್ತದೆ. ಇಡೀ ಪಂಜಾಬ್ ಆ ವ್ಯಕ್ತಿ ಕುರಿತು ಹೆಮ್ಮೆ ಪಡುತ್ತದೆ. ಆ ವ್ಯಕ್ತಿ ನಿಶ್ಚಿತವಾಗಿ ಸಿಖ್ ಸಮುದಾಯದವರೇ ಆಗಿರುತ್ತಾರೆ' ಎಂದರು. ರಾಜ್ಯದಲ್ಲಿ ಸದ್ಯದ ಆಡಳಿದಿಂದ ಜನರು ಬೇಸತ್ತಿದ್ದಾರೆ. ಅವರು ಹೊಸ ಬಗೆಯ ನಾಯಕತ್ವವನ್ನು ನಿರೀಕ್ಷಿಸುತ್ತಿದ್ದಾರೆ ಎಂದರು.

ಕಾಂಗ್ರೆಸ್ ನಾಯಕ ನವಜೋತ್‌ಸಿಂಗ್ ಸಿಧು ಅವರು ಎಎಪಿ ಸೇರುತ್ತಾರೆ ಎಂಬ ವದಂತಿಯ ಬಗ್ಗೆ ಪ್ರತಿಕ್ರಿಯಿಸುತ್ತಾ, 'ಸಿಧು ಕಾಂಗ್ರೆಸ್‌ನ ಹಿರಿಯ ನಾಯಕ. ಅವರ ಬಗ್ಗೆ ನನಗೆ ಗೌರವ ಇದೆ. ಯಾವ ನಾಯಕನ ಬಗ್ಗೆಯೂ ಹಗುರವಾಗಿ ಮಾತನಾಡಲು ಇಷ್ಟಪಡುವುದಿಲ್ಲ' ಎಂದರು. ಸಿಧು ಜತೆಗೆ ತಾನು ಮಾತುಕತೆ ನಡೆಸಿಲ್ಲ ಎಂದು ಸ್ಪಷ್ಟಪಡಿಸಿದರು.

ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರೆವಾಲ್ ಅವರು ಪಂಜಾಬ್‌ನ ಅಮೃತಸರದಲ್ಲಿರುವ ವಿಶ್ವ ಪ್ರಸಿದ್ಧ ಸ್ವರ್ಣ ಮಂದಿರಕ್ಕೆ ಸೋಮವಾರ ಭೇಟಿ ನೀಡಿದರು –ಪಿಟಿಐ ಚಿತ್ರ

ಮಾಜಿ ಅಧಿಕಾರಿ ಸೇರ್ಪಡೆ: ಮಾಜಿ ಎಪಿಎಸ್ ಅಧಿಕಾರಿ ಕುವರ್ ವಿಜಯ್ ಪ್ರತಾಪ್ ಸಿಂಗ್ ಅವರು ಆಮ್ ಆದ್ಮಿ ಪಕ್ಷಕ್ಕೆ ಸೋಮವಾರ ಸೇರ್ಪಡೆಯಾದರು. ಎಎಪಿ ರಾಷ್ಟ್ರೀಯ ಸಂಚಾಲಕ ಅರವಿಂದ್ ಕೇಜ್ರಿವಾಲ್ ಪಕ್ಷಕ್ಕೆ ಬರಮಾಡಿಕೊಂಡರು.

2015ರಲ್ಲಿ ಪಂಜಾಬ್‌ನಲ್ಲಿ ನಡೆದಿದ್ದ ಕೋಡ್ಕಾಪುರ ಪೊಲೀಸ್ ಗುಂಡಿನ ದಾಳಿ ಪ್ರಕರಣ ತನಿಖೆ ನಡೆಸಿದ್ದ ವಿಶೇಷ ತನಿಖಾ ತಂಡದಲ್ಲಿ (ಎಸ್‌ಐಟಿ) ವಿಜಯ್ ಪ್ರತಾಪ್ ಒಬ್ಬರಾ-ಗಿದ್ದರು. ಪ್ರಕರಣದ ಕುರಿತು ಎಸ್‌ಐಟಿ ನೀಡಿದ್ದ ವರದಿಯನ್ನು ಪಂಜಾಬ್ ಮತ್ತು ಹರಿಯಾಣ ಕೋರ್ಟ್ ತಿರಸ್ಕ-ರಿಸಿತ್ತು. ಜೊತೆಗೆ, ಹೊಸ ಎಸ್‌ಐಟಿ ತಂಡ ರಚಿಸಲು ಪಂಜಾಬ್ ಸರ್ಕಾರಕ್ಕೆ ನಿರ್ದೇಶನ ನೀಡಿತ್ತು. ಈ ಘಟನೆ ಬಳಿಕ ತಮ್ಮ ಹುದ್ದೆಗೆ ಅವರು ರಾಜೀನಾಮೆ ನೀಡಿದ್ದರು.

ಮಕ್ಕಳಿಗೆ ಅನುಕಂಪ ಆಧಾರಿತ ನೌಕರಿ: ತಿರಸ್ಕರಿಸಲು ಸಲಹೆ

ಚಂಡೀಗಡ (ಪಿಟಿಐ): ಇಬ್ಬರು ಶಾಸಕರ ಮಕ್ಕಳಿಗೆ 'ಅನುಕಂಪದ ಕೋಟಾ'ದಲ್ಲಿ ಸರ್ಕಾರಿ ನೌಕರಿ ನೀಡಲಾಗಿದೆ ಎಂಬುದು ಪಂಜಾಬ್‌ನ ಕಾಂಗ್ರೆಸ್ ಪಕ್ಷದಲ್ಲಿ ವಿವಾದಕ್ಕೆ ಆಸ್ಪದವಾದ ಹಿಂದೆಯೇ ಸಂಸದ ಪ್ರತಾಪ್ ಸಿಂಗ್ ಬಜ್ವಾ, 'ಮಕ್ಕಳಿಗೆ ನೀಡಲಾದ ಸರ್ಕಾರಿ ನೌಕರಿಯನ್ನು ತಿರಸ್ಕರಿಸಬೇಕು' ಎಂದು ಶಾಸಕರಿಗೆ ಒತ್ತಾಯಿಸಿದ್ದಾರೆ.

ಪಕ್ಷದ ಶಾಸಕರಾದ ಫತೇಜಂಗ್ ಸಿಂಗ್ ಬಜ್ವಾ ಮತ್ತು ರಾಕೇಶ್ ಪಾಂಡೆ ಅವರಿಗೆ ಈ ಮನವಿ ಮಾಡಲಾಗಿದೆ. ಕ್ರಮವಾಗಿ ಇವರ ಮಕ್ಕಳಾದ ಅರ್ಜುನ್ ಪ್ರತಾಪ್ ಸಿಂಗ್ ಬಜ್ವಾ ಮತ್ತು ಭೀಷಂ ಪಾಂಡೆ ಅವರಿಗೆ ಪೊಲೀಸ್ ಇನ್‌ಸ್ಪೆಕ್ಟರ್ ಮತ್ತು ತಹಶೀಲ್ದಾರ್ ಹುದ್ದೆಯನ್ನು 'ಅನುಕಂಪದ ಆಧಾರ'ದಲ್ಲಿ ಪಂಜಾಬ್ ಸರ್ಕಾರ ನೀಡಿತ್ತು.

ಅರ್ಜುನ್ ಬಜ್ವಾ ಅವರು ಮಾಜಿ ಸಚಿವ ಸತ್ನಂ ಸಿಂಗ್ ಬಜ್ವಾ ಅವರ ಮೊಮ್ಮಗ. ಅಮರೀಂದರ್ ಸಿಂಗ್ ನೇತೃತ್ವದ ಸರ್ಕಾರದ ಪ್ರಕಾರ, ಸತ್ನಂ ಸಿಂಗ್ ಅವರು 1987ರಲ್ಲಿ ರಾಜ್ಯದ ಶಾಂತಿ, ಸೌಹಾರ್ದಕ್ಕಾಗಿ ಜೀವತ್ಯಾಗ ಮಾಡಿದ್ದರು. ಅಂತೆಯೇ, ಭೀಷಂ ಪಾಂಡೆ ಅವರು ಮಾಜಿ ಸಚಿವ ಜೋಗಿಂದರ್ ಪಾಲ್ ಪಾಂಡೆ ಅವರ ಮೊಮ್ಮಗ. ಇವರು 1987ರಲ್ಲಿ ಭಯೋತ್ಪಾದಕರ ಗುಂಡಿಗೆ ಬಲಿಯಾಗಿದ್ದರು.

'ಸತ್ನಂ ಸಿಂಗ್ ಬಜ್ವಾ ಮತ್ತು ಜೋಗಿಂದರ್ ಪಾಲ್ ಪಾಂಡೆ ಇಬ್ಬರೂ ಸಮೂಹದ ನಾಯಕರು. ದಶಕಗಳ ಕಾಲ ಸಾರ್ವಜನಿಕ ಸೇವೆಯಲ್ಲಿ ತೊಡಗಿ-ಸಿಕೊಂಡಿದ್ದರು. ದೇಶದ ಸೌಹಾರ್ದಕ್ಕಾಗಿ ತಮ್ಮ ಜೀವತ್ಯಾಗ ಮಾಡಿದ್ದಾರೆ' ಎಂದು ಹಿರಿಯ ಕಾಂಗ್ರೆಸ್ ನಾಯಕ ಪ್ರತಾಪ್ ಸಿಂಗ್ ಬಜ್ವಾ ಇದೇ ಸಂದರ್ಭದಲ್ಲಿ ಸ್ಮರಿಸಿದರು.

ಜುಲೈ–ಆಗಸ್ಟ್‌ನಲ್ಲಿ ಲಸಿಕೆ ಪ್ರಕ್ರಿಯೆಗೆ ವೇಗ: ಅಮಿತ್ ಶಾ

ಅಹಮದಾಬಾದ್ (ಪಿಟಿಐ): 'ಜುಲೈ ಮತ್ತು ಆಗಸ್ಟ್ ತಿಂಗಳಲ್ಲಿ ಕೋವಿಡ್ ಲಸಿಕೆ ನೀಡಿಕೆ ಪ್ರಕ್ರಿಯೆಯ ವೇಗವನ್ನು ಹೆಚ್ಚಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ' ಎಂದು ಗೃಹ ಸಚಿವ ಅಮಿತ್ ಶಾ ತಿಳಿಸಿದರು.

ಸೋಮವಾರ ಇಲ್ಲಿನ ಲಸಿಕಾ ಕೇಂದ್ರಕ್ಕೆ ಭೇಟಿ ನೀಡಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, '18 ವರ್ಷಕ್ಕಿಂತ ಮೇಲ್ಪಟ್ಟವ-ರಿಗೆ ಉಚಿತ ಕೋವಿಡ್ ಲಸಿಕೆ ನೀಡುವ ಪ್ರಧಾನಿಯವರ ನಿರ್ಧಾರದೊಂದಿಗೆ, ಲಸಿಕೆ ಅಭಿಯಾನದ ವೇಗ ಹೆಚ್ಚಿಸುವ ಮೂಲಕ ಪ್ರತಿಯೊಬ್ಬರಿಗೂ ಲಸಿಕೆ ತಲುಪಿಸುವ ಗುರಿಯನ್ನು ಸಾಧಿಸಲಾಗು-ತ್ತದೆ' ಎಂದು ಅವರು ಹೇಳಿದರು.

'ಪ್ರಧಾನಿ ನೇತೃತ್ವದಲ್ಲಿ ನಡೆಯುತ್ತಿರುವ ಕೋವಿಡ್ ವಿರುದ್ಧದ ಹೋರಾಟದಲ್ಲಿ ಲಸಿಕೆ ನೀಡಿಕೆಯ ಮಹತ್ವದ ಪಯಣ ಆರಂಭವಾಗಿದೆ' ಎಂದರು.

ಕೋವಿಡ್: ಒಂದೇ ದಿನ 82.7 ಲಕ್ಷ ಡೋಸ್ ಲಸಿಕೆ ಉಚಿತ ವಿತರಣೆ

ನವದೆಹಲಿ (ಪಿಟಿಐ): ಪರಿಷ್ಕೃತ ಮಾರ್ಗಸೂಚಿ ಅಸ್ತಿತ್ವಕ್ಕೆ ಬಂದ ಮೊದಲ ದಿನವೇ, ಸೋಮವಾರ ಸಂಜೆ ವೇಳೆಗೆ 82.7 ಲಕ್ಷಕ್ಕೂ ಹೆಚ್ಚು ಡೋಸ್ ಕೋವಿಡ್ ಲಸಿಕೆ ಉಚಿತವಾಗಿ ನೀಡಲಾಗಿದೆ ಎಂದು ಆರೋಗ್ಯ ಸಚಿವಾಲಯ ತಿಳಿಸಿದೆ.

ಕೋವಿನ್ ಮಾಹಿತಿ ಅನುಸಾರ ಒಟ್ಟಾರೆ 82,70,212 ಡೋಸ್ ಲಸಿಕೆಯನ್ನು ವಿವಿಧ 67,839 ಕೇಂದ್ರಗಳಲ್ಲಿ ನೀಡಲಾಗಿದೆ. ಈ ಮೂಲಕ ಕೇಂದ್ರ ಸರ್ಕಾರವು 18 ವರ್ಷ ಮೀರಿದ ಎಲ್ಲರಿಗೂ ಉಚಿತವಾಗಿ ಲಸಿಕೆ ನೀಡುವ ಕಾರ್ಯವನ್ನು ಆರಂಭಿಸಿತು.

ಸೋಮವಾರ ಒಂದೇ ದಿನ ಮಧ್ಯಪ್ರದೇಶದಲ್ಲಿ ಅತ್ಯಧಿಕ ಅಂದರೆ 15.98 ಲಕ್ಷ ಲಸಿಕೆ ನೀಡಿದ್ದರೆ, ನಂತರ ಸ್ಥಾನದಲ್ಲಿ ಕರ್ನಾಟಕ ಇದೆ. ಇಲ್ಲಿ 10.86 ಲಕ್ಷ ಡೋಸ್ ಲಸಿಕೆ ನೀಡಲಾಗಿದೆ. ಜನವರಿ 16ರಂದು ಲಸಿಕೆ ಅಭಿಯಾನ ಆರಂಭವಾದ ಬಳಿಕ ಈವರೆಗೆ ದಿನವೊಂದರಲ್ಲಿ ನೀಡಲಾದ ಗರಿಷ್ಠ ಪ್ರಮಾಣ ಇದಾಗಿದೆ. ಒಟ್ಟು ಲಸಿಕೆ ನೀಡಿಕೆ 28.33 ಕೋಟಿಗೆ ತಲುಪಿದೆ ಎಂದು ಸಚಿವಾಲಯವು ವಿವರಿಸಿದೆ.

'ಎಲ್ಲರಿಗೂ ಉಚಿತ ಲಸಿಕೆ ಅಭಿಯಾನ ಇಂದು ಆರಂಭವಾಗಿದೆ. ಬಡವರು, ಮಧ್ಯಮ ವರ್ಗ ಮತ್ತು ಯುವಕರಿಗೆ ಇದರ ನೆರವು ಸಿಗಲಿದೆ. ಲಸಿಕೆ ಪಡೆಯುವುದಾಗಿ ಎಲ್ಲರೂ ಪ್ರತಿಜ್ಞೆ ಮಾಡಬೇಕು. ನಾವೆಲ್ಲ ಜತೆಯಾಗಿ ಕೋವಿಡ್ ಪಿಡುಗು ಅನ್ನು ಸೋಲಿಸಬೇಕು' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದ್ದಾರೆ.

ಪರಿಷ್ಕೃತ ಲಸಿಕೆ ಮಾರ್ಗಸೂಚಿ ಪ್ರಕಾರ, ಕೇಂದ್ರ ಸರ್ಕಾರವೇ ಲಸಿಕೆಯನ್ನು ಉಚಿತವಾಗಿ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ವಿತರಿಸಲಿದೆ. ಜನಸಂಖ್ಯೆ, ಸೋಂಕಿನ ತೀವ್ರತೆ, ಲಸಿಕೆ ನೀಡಿಕೆ ಪ್ರಗತಿಯ ಆಧಾರದಲ್ಲಿ ವಿತರಣೆ ಮಾಡಲಾಗುತ್ತದೆ. 18 ವರ್ಷ ಮೇಲ್ಪಟ್ಟ ಎಲ್ಲರೂ ಉಚಿತ ಲಸಿಕೆಗೆ ಅರ್ಹರಾಗಿದ್ದಾರೆ.

ಲಸಿಕೆ ವ್ಯರ್ಥವಾದರೆ ಅದು ಹಂಚಿಕೆಯ ಮೇಲೆ ನಕಾರಾತ್ಮಕ ಪರಿಣಾಮ ಬೀರಲಿದೆ ಎಂದೂ ಕೇಂದ್ರ ಹೇಳಿದೆ. ಈ ಹಿಂದೆ ಏಪ್ರಿಲ್ 1ರಂದು ಒಂದೇ ದಿನ 48 ಲಕ್ಷ ಡೋಸ್ ನೀಡಿದ್ದು ಇದು ವರೆಗಿನ ದಾಖಲೆಯಾಗಿತ್ತು. ಜೂನ್ ತಿಂಗಳಲ್ಲಿ ಇದುವರೆಗೂ ಸರಾಸರಿ ನಿತ್ಯ 31 ಲಕ್ಷ ಜನರಿಗೆ ಲಸಿಕೆ ನೀಡಲಾಗುತ್ತಿದೆ

ಹೊಸ ಮಾರ್ಗಸೂಚಿಯಲ್ಲಿ ಉಲ್ಲೇಖಿಸಿರುವ ಪ್ರಕಾರ, ದೇಶದ ಲಸಿಕೆ ತಯಾರಿಕಾ ಕಂಪನಿಗಳಿಂದ ಶೇ 75ರಷ್ಟು ಡೋಸ್ ಲಸಿಕೆಗಳನ್ನು ಕೇಂದ್ರ ಸರ್ಕಾರವು ಖರೀದಿಸಲಿದೆ. ರಾಜ್ಯ ಸರ್ಕಾರಗಳಿಗೆ ನಿಗದಿ ಮಾಡಲಾಗಿದ್ದ ಶೇ 25ರಷ್ಟು ಡೋಸ್ ಲಸಿಕೆಗಳೂ ಇದರಲ್ಲಿ ಸೇರಿವೆ. ಉಳಿದ ಶೇ 25ರಷ್ಟು ಡೋಸ್ ಲಸಿಕೆಗಳು ಖಾಸಗಿ ಆಸ್ಪತ್ರೆಗಳಿಗೆ ಲಭ್ಯವಾಗಲಿವೆ.

ಮುಖ್ಯಾಂಶಗಳು

- ಒಟ್ಟು 82,70,212 ಡೋಸ್ ಲಸಿಕೆ
- ಮಧ್ಯಪ್ರದೇಶದಲ್ಲಿ ಗರಿಷ್ಠ, ನಂತರ ಕರ್ನಾಟಕ
- 18 ವರ್ಷ ಮೀರಿದ ಎಲ್ಲರಿಗೂ ಉಚಿತ ಲಸಿಕೆ

ವಿಶ್ವಾಸಮತ ಕಳೆದುಕೊಂಡ ಸ್ವೀಡನ್ ಪ್ರಧಾನಿ ಸ್ಟೀಫನ್

ಸ್ಟಾಕ್‌ಹೋಮ್ (ರಾಯಿಟರ್ಸ್, ಎಪಿ): ಸ್ವೀಡನ್ ಸೋಷಿಯಲ್ ಡೆಮಾಕ್ರಟಿಕ್ ಪಕ್ಷದ ನಾಯಕ ಹಾಗೂ ಪ್ರಧಾನಿ ಸ್ಟೀಫನ್ ಲೋಫ್ವೆನ್ ಅವರು ಸೋಮವಾರ ಸಂಸತ್‌ನಲ್ಲಿ ನಡೆದ ವಿಶ್ವಾಸಮತ ಯಾಚನೆಯಲ್ಲಿ ಸೋಲು ಕಂಡಿದ್ದಾರೆ. ಈ ಮೂಲಕ ದೇಶದ ಇತಿಹಾಸದಲ್ಲಿ ಅವಿಶ್ವಾಸ ಗೊತ್ತುವಳಿ ಮೂಲಕ ಪದಚ್ಯುತಗೊಂಡ ಮೊದಲ ಪ್ರಧಾನಿ ಎನಿಸಿಕೊಂಡಿದ್ದಾರೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

ಸುಭಾಷಿತ

ವಿಶ್ವದ ಅತ್ಯಂತ ತಮಾಷೆಯ ಮತ್ತು ಸುಲಭವಾಗಿ ಸಾಧ್ಯವಾಗುವ ವಿಷಯವೆಂದರೆ ಸಲಹೆ ನೀಡುವುದು!
-ಚೇತನ್ ಭಗತ್

ಘಟ್ಟಪ್ರದೇಶಗಳಲ್ಲಿ ಭೂಕುಸಿತದ ಸಾಧ್ಯತೆ ಸಿಗಬೇಕಿದೆ ಮುನ್ನೆಚ್ಚರಿಕೆಗೆ ಆದ್ಯತೆ

ಕಳೆದ ವರ್ಷ ಆಗಸ್ಟ್ ಮೊದಲ ವಾರದಲ್ಲಿ ಅತಿವೃಷ್ಟಿಯಿಂದಾಗಿ ಕೊಡಗಿನ ತಲಕಾವೇರಿಯಲ್ಲಿ ಸಂಭವಿಸಿದ ಭೂಕುಸಿತವನ್ನು ಯಾರೂ ಮರೆಯುವಂತಿಲ್ಲ. ತಲಕಾವೇರಿಯ ಅರ್ಚಕರ ಆಸ್ತಿ, ಮನೆ ಹಾಗೂ ಕುಟುಂಬವೇ ಮಣ್ಣಿನಲ್ಲಿ ಲೀನವಾಗಿತ್ತು. ಅದಕ್ಕೂ ಹಿಂದೆ 2019ರ ಆಗಸ್ಟ್ ತಿಂಗಳಲ್ಲಿ ಸಕಲೇಶಪುರ-ಸುಬ್ರಹ್ಮಣ್ಯ ಘಟ್ಟ ಪ್ರದೇಶಗಳ ರೈಲ್ವೆ ಹಳಿಗುಂಟ ಸುಮಾರು 40 ಸ್ಥಳಗಳಲ್ಲಿ ಸರಣಿ ಭೂಕುಸಿತ ಸಂಭವಿಸಿದ್ದು ದಾಖಲಾಗಿದೆ. ಅದಕ್ಕೂ ಹಿಂದೆ 2018ರ ಆಗಸ್ಟ್ ತಿಂಗಳಲ್ಲಿ ಕೇರಳದ ಹಲವೆಡೆ ಹಾಗೂ ಕೊಡಗು, ಚಿಕ್ಕಮಗಳೂರಿನ ವಿಶಾಲ ವ್ಯಾಪ್ತಿಯ ಭೂಪ್ರದೇಶದಲ್ಲಿ ಗುಡ್ಡಗಳು ಕುಸಿದು 350ಕ್ಕೂ ಹೆಚ್ಚು ಸಾವು ಸಂಭವಿಸಿ, ಅನೇಕ ಹಳ್ಳಿಗಳು ಅಕ್ಷರಶಃ ನಾಪತ್ತೆಯಾಗಿ ದುರಂತಗಳ ಶೃಂಖಲೆಯೇ ಹೆಣೆದಂತಿತ್ತು. ಈ ವರ್ಷ ಜೂನ್ ತಿಂಗಳ ಮೊದಲ ಮೂರು ವಾರಗಳಲ್ಲೇ ಭಾರಿ ಅಬ್ಬರದ ಮಳೆ ಬಿದ್ದಿದೆ. ಕರಾವಳಿ ಮತ್ತು ದಕ್ಷಿಣ ಒಳನಾಡಿನ ಏಳು ಜಿಲ್ಲೆಗಳಲ್ಲಿ ಮತ್ತೆ ಧಾರಾಕಾರ ಮಳೆ ಸುರಿಯಲಿದೆ ಎಂದು ಹವಾಮಾನ ಇಲಾಖೆ ಆಪತ್ತಿನ ಹಳದಿ ಬಾವುಟವನ್ನು ಬೀಸುತ್ತಿದೆ. ಅತಿವೃಷ್ಟಿ ಎಲ್ಲೇ ಸಂಭವಿಸಿದರೂ ಅದು ಅಪಾಯಗಳ ಸರಮಾಲೆಯನ್ನೇ ತರುತ್ತದೆ. ಅದರಲ್ಲೂ ವಿಶೇಷವಾಗಿ ಪಶ್ಚಿಮ ಘಟ್ಟಗಳ ಪರಿಸರ ಸೂಕ್ಷ್ಮ ಪ್ರದೇಶಗಳಲ್ಲಿ ಅದರಿಂದ ಸಂಭವಿಸಬಹುದಾದ ದುರಂತಗಳು ಒಂದೆರಡಲ್ಲ. ಗುಡ್ಡ ಕಣಿವೆಗಳ ಮಡಿಲಲ್ಲಿರುವ ಗ್ರಾಮಗಳಿಗೆ ಸಂಪರ್ಕ ಸಾಧನಗಳೂ ಸಂಚಾರ ಸೌಲಭ್ಯಗಳೂ ಅಷ್ಟಕಷ್ಟೇ ಇರುವುದರಿಂದ ಆಪತ್ತಿನ ಘಟನೆ ಹೊರಜಗತ್ತಿಗೆ ಗೊತ್ತಾಗುವುದೂ ತಡವಾಗುತ್ತದೆ; ಸಂರಕ್ಷಣೆಗೆಂದು ಧಾವಿಸುವುದೂ ದುಸ್ತರವಾಗುತ್ತದೆ. ಈ ವರ್ಷ ಈಗಾಗಲೇ ಸಾಕಷ್ಟು ಮಳೆ ಸುರಿದು ಮಣ್ಣಿನ ಆಳಕ್ಕೂ ನೀರಿನ ಪಸೆ ಇಳಿದಿರುವುದರಿಂದ ಇನ್ನಷ್ಟು ಮಳೆ ಸುರಿದರೆ ಈ ವರ್ಷವೂ ಭೂಕುಸಿತದ ಸಾಧ್ಯತೆ ಇದೆಯೆಂದು ತಜ್ಞರು ಎಚ್ಚರಿಸಿದ್ದಾರೆ.

ಭೂಕುಸಿತ ಸಂಭವಿಸದಂತೆ ಕೈಗೊಳ್ಳಬಹುದಾದ ಕ್ರಮಗಳು ಹಾಗೂ ಸಂಭವಿಸಿದರೆ ಜಾರಿಗೆ ತರಬೇಕಾದ ತುರ್ತು ನೆರವಿನ ಕ್ರಮಗಳನ್ನು ಸಜ್ಜಾಗಿಡುವ ವ್ಯವಸ್ಥೆ ಸಮರೋಪಾದಿಯಲ್ಲಿ ಆಗಬೇಕಾಗಿದೆ

ಆಧುನಿಕ ತಂತ್ರಜ್ಞಾನದಿಂದ ಈಗೀಗ ಹವಾಮುನ್ಸೂಚನೆ ಸಾಕಷ್ಟು ನಿಖರವಾಗಿ, ಕ್ಷುಪ್ತ ಸಮಯದಲ್ಲೇ ಸಿಗುತ್ತಿದೆ ನಿಜ. ಬಿರುಗಾಳಿ, ಜಡಿಮಳೆಯ ಮುನ್ಸೂಚನೆಯ ಎಚ್ಚರಿಕೆಯನ್ನು ಮೊದಲೇ ಪಡೆದು ಕರಾವಳಿಯಲ್ಲಿ ಮೀನುಗಾರರ ದೋಣಿಗಳನ್ನು, ಬಸ್-ರೈಲು ಸಂಚಾರಗಳನ್ನು ಸ್ಥಗಿತಗೊಳಿಸಬಹುದು. ಸಂಕಷ್ಟಕ್ಕೆ ಸಿಲುಕಬಹುದಾದ ಸಮುದಾಯವನ್ನು ದೂರದ ಸುರಕ್ಷಿತ ಸ್ಥಳಗಳಿಗೆ ಸಾಗಿಸಬಹುದು. ಆದರೆ ಪಶ್ಚಿಮ ಘಟ್ಟಗಳ ದುರ್ಗಮ ಪರಿಸರದ ನೈಸರ್ಗಿಕ ವಿಕೋಪಗಳು ಬೇರೆ ಬಗೆಯವಾಗಿವೆ. ನೂರಾರು ಕೋಟಿ ವರ್ಷಗಳ ಶಿಥಿಲ ಶಿಲೆಗಳ ಮೇಲೆ ಹಸಿರು ನಿಸರ್ಗ ಬೆಳೆದು ನಿಂತಿದೆ. ಒಂದೊಂದು ಬೆಟ್ಟ, ಒಂದೊಂದು ಕಣಿವೆಯ ಭೂಲಕ್ಷಣಗಳೂ ವಿಭಿನ್ನವಾಗಿದ್ದು ಜಡಿಮಳೆಯ ಪರಿಣಾಮ ಹೇಗಿರುತ್ತದೆಂದು ಹಿಂದಿನ ಅನುಭವಗಳ ಅಂದಾಜಿನಲ್ಲಿ ಸ್ಥೂಲವಾಗಿ ಹೇಳಬಹುದೇ ವಿನಾ ಇಂಥದ್ದೇ ಸ್ಥಳದಲ್ಲಿ ಭೂಕುಸಿತ ಸಂಭವಿಸಲಿದೆ ಎಂದು ನಿಖರವಾಗಿ ಹೇಳಲು ಸಾಧ್ಯವಿಲ್ಲ. ಮುಂದೆ ಸಂಭವಿಸಬಹುದಾದ ಭೂಕಂಪನ, ಭೂಕುಸಿತದ ಸೂಚನೆಯನ್ನು ನೀಡುವಷ್ಟು ವಿಜ್ಞಾನ, ತಂತ್ರಜ್ಞಾನ ಮುಂದುವರೆದಿಲ್ಲ. ಆದರೆ ಪಶ್ಚಿಮ ಘಟ್ಟಗಳ ಅಸ್ಥಿರ ಗುಡ್ಡಬೆಟ್ಟಗಳನ್ನು ಇನ್ನಷ್ಟು ಸಡಿಲಗೊಳಿಸಲು ಬೇಕಾದ ಎಲ್ಲ ಬಗೆಯ ತಂತ್ರಜ್ಞಾನಗಳು (ಜೆಸಿಬಿ ಯಂತ್ರ, ಡೈನಮೈಟ್, ಪವರ್ ಗರಗಸ, ಡ್ರಿಲ್ಲಿಂಗ್ ಸಲಕರಣೆ ಇತ್ಯಾದಿ) ಅಲ್ಲಿ ಧಾರಾಳವಾಗಿ ದಾಂಗುಡಿ ಇಟ್ಟಿವೆ.

ನಾಳೆ ಹೀಗಾದೀತೆಂದು ಹೇಳಲು ಸಾಧ್ಯವಿಲ್ಲವಾದರೂ ದುರಂತ ಸಂಭವಿಸದಂತೆ ಕೈಗೊಳ್ಳಬಹುದಾದ ಕ್ರಮಗಳು ಹಾಗೂ ಸಂಭವಿಸಿದರೆ ಜಾರಿಗೆ ತರಬೇಕಾದ ತುರ್ತು ನೆರವಿನ ಕ್ರಮಗಳನ್ನು ಸಜ್ಜಾಗಿಡಲಂತೂ ಸಾಧ್ಯವಿದೆ. ಅದಕ್ಕೆಂದೇ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆಗಳನ್ನು ರಾಷ್ಟ್ರಮಟ್ಟದಲ್ಲಿ, ರಾಜ್ಯ ಹಾಗೂ ಜಿಲ್ಲಾ ಮಟ್ಟದಲ್ಲೂ ನಿಯೋಜಿಸಲಾಗಿದೆ. ಯಾವ ಯಾವ ನೈಸರ್ಗಿಕ ಪ್ರಕೋಪಗಳು ಎದುರಾದಾಗ ಏನೇನು ಕ್ರಮಗಳನ್ನು ಕೈಗೊಳ್ಳಬೇಕು ಎಂಬ ಬಗ್ಗೆ ಎರಡು ವರ್ಷಗಳ ಹಿಂದೆ 'ವಿಪತ್ತು ನಿರ್ವಹಣಾ ಯೋಜನೆ'ಯ ನೀಲನಕ್ಷೆಯನ್ನು ಕರ್ನಾಟಕ ಸರ್ಕಾರ ಸಿದ್ಧಪಡಿಸಿದೆ ನಿಜ. ಆದರೆ ಭೂಕುಸಿತಕ್ಕೆ ಸಂಬಂಧಿಸಿದ ತಾಲೀಮುಗಳನ್ನು ಪಶ್ಚಿಮ ಘಟ್ಟ ಪ್ರದೇಶಗಳಲ್ಲಿ ನಡೆಸಿದ ಉದಾಹರಣೆಗಳೇ ಇಲ್ಲ. ಅಂಥ ಸ್ಥಳಗಳನ್ನು ಗುರುತಿಸಿ, ಅಲ್ಲಿ ಏನೆಲ್ಲ ಬಗೆಯ ಜನಜಾಗೃತಿ ಉಂಟು ಮಾಡಬೇಕು; ಸ್ಥಳೀಯ ಸ್ವಯಂಸೇವಕರನ್ನು ಹಾಗೂ ಸ್ವಯಂಸೇವಾ ಸಂಘಟನೆಗಳನ್ನು ತುರ್ತಾಗಿ ಹೇಗೆ ಸಜ್ಜುಗೊಳಿಸಬೇಕು ಎಂದೆಲ್ಲ ವಿವರಣೆಗಳಿವೆಯಾದರೂ ಜನಜಾಗೃತಿಯ ಅಂಥ ಉಪ ಕ್ರಮಗಳನ್ನು ಜಿಲ್ಲಾಡಳಿತ ಕೈಗೊಂಡಿಲ್ಲ ಎಂಬ ದೂರುಗಳಿವೆ. ಆಪತ್ತಿನ ಸಂದರ್ಭದಲ್ಲಿ ಯಾರನ್ನು ಸಂಪರ್ಕಿಸಬೇಕು ಎಂಬ ಮಾಹಿತಿ ಪ್ರತೀ ಪಂಚಾಯಿತಿ ಕಚೇರಿಯಲ್ಲಿ ಇರಬೇಕಿತ್ತು; ಇಲ್ಲ. ತುರ್ತು ವೈದ್ಯಕೀಯ ವ್ಯವಸ್ಥೆಯಂತೂ ಎಂಥ ಶೋಚನೀಯ ಸ್ಥಿತಿಯಲ್ಲಿದೆ ಎಂಬುದು ಕೊರೊನಾ ಮಹಾಮಾರಿಯ ಸಂದರ್ಭದಲ್ಲಿ ಗೊತ್ತಾಗಿದೆ. ಇನ್ನು, ಮಲೆನಾಡಿನ ಗುಡ್ಡಬೆಟ್ಟಗಳ ಸ್ಥಿರತೆಯನ್ನು ಕಾಪಾಡಲು ಅನುಸರಿಸಬೇಕಾದ ಯಾವ ಕ್ರಮಗಳೂ ಜಾರಿಗೆ ಬಂದಿಲ್ಲ. ರೈಲುಮಾರ್ಗ, ತೈಲ ಮತ್ತು ನೀರಿನ ಕೊಳವೆ ಮಾರ್ಗಕ್ಕೆಂದು ಸುರಂಗ ನಿರ್ಮಾಣ, ವಿದ್ಯುತ್ ಸಾಗಣೆಗೆಂದು, ಹೆದ್ದಾರಿ ವಿಸ್ತರಣೆಗೆಂದು ಅರಣ್ಯನಾಶ, ಭೂಕೊರೆತ ಇವೆಲ್ಲ ನಡೆದೇ ಇವೆ. ಇಂಥ ಸರ್ಕಾರಿ ಕಾಮಗಾರಿಗಳ ಜೊತೆಗೆ ಖಾಸಗಿಯಾಗಿ ಮರಳು ಸಾಗಣೆ, ರೆಸಾರ್ಟ್ ನಿರ್ಮಾಣ, ಅಕ್ರಮ ಸಾಗುವಳಿಗಾಗಿ ಗುಡ್ಡಗಳ ನೆಲಸಮ ಮಾಡುವ ಕೆಲಸ ನಡೆದೇ ಇದೆ. ಪಶ್ಚಿಮಘಟ್ಟಗಳಲ್ಲಿ ಎಂಥದ್ದೇ ಕಾಮಗಾರಿಗೂ ಮುಂಚೆ ಗಮನಿಸಲೇಬೇಕಾದ 'ಸಂಭವನೀಯ ಭೂಕುಸಿತದ ನಕ್ಷೆ'ಯನ್ನು ಭಾರತೀಯ ಭೂವಿಜ್ಞಾನ ಸರ್ವೇಕ್ಷಣ ಇಲಾಖೆ ಸಿದ್ಧಪಡಿಸಿದೆ. ಕೇರಳದಲ್ಲಿ ಇಂಥ ನಕ್ಷೆಯನ್ನು ಯಾರು ಬೇಕಾದರೂ ಜಾಲತಾಣದಲ್ಲಿ ನೋಡಬಹುದಾಗಿದೆ. ನಮ್ಮಲ್ಲೂ ಯಾವುದೇ ಸರ್ಕಾರಿ ಕಾಮಗಾರಿಗೆ ಟೆಂಡರ್ ಹಾಕುವ ಮುನ್ನ ಅದನ್ನು ಪರಿಶೀಲಿಸಬೇಕು ಎಂಬುದನ್ನು ಕಡ್ಡಾಯ ಮಾಡಬೇಕಾಗಿದೆ. ಇವೆಲ್ಲ ಮುಂಬರುವ ಆಪತ್ತುಗಳ ಪ್ರತಿಬಂಧಕೋಪಾಯಗಳಾದವು. ವರ್ತಮಾನದ ತುರ್ತಿಗಾಗಿ ಪಂಚಾಯಿತಿ ಮಟ್ಟದಲ್ಲಿ ದುರಂತ ಸಂಭವನೀಯ ಸ್ಥಳಗಳ ಜನರಿಗೆ ಮುನ್ನೆಚ್ಚರಿಕೆಯ ಪ್ರಾಥಮಿಕ ಮಾಹಿತಿಗಳಾದರೂ ಕನ್ನಡದಲ್ಲಿ ಲಭಿಸುವ ವ್ಯವಸ್ಥೆಯಾಗಬೇಕು. ಅದಾಗದಿದ್ದರೆ, ಸರ್ಕಾರದ 'ವಿಪತ್ತು ನಿರ್ವಹಣಾ ಯೋಜನೆ'ಯ ದಫೂತಿ ವರದಿ ಕೇವಲ ಪುಸ್ತಕದ ಬದನೇಕಾಯಿ ಆಗಿರುತ್ತದೆ.

ದಿನದ ಟ್ವೀಟ್

ಬೂಟಾಟಿಕೆಯ ಕೂಗು

ಎಲ್ಲಿಯವರೆಗೂ ಸಮಾಜದಲ್ಲಿ ಶ್ರೇಣೀಕೃತ ಜಾತಿ ವ್ಯವಸ್ಥೆ ಇರುತ್ತದೋ, ಅದರಲ್ಲಿ ತಾರತಮ್ಯ ಇರುತ್ತದೋ, ಅಲ್ಲಿಯವರೆಗೂ ಜಾತಿ ಆಧಾರಿತ 'ಮೀಸಲಾತಿ' ಇರುತ್ತದೆ. ಇರಬೇಕು. ಶ್ರೇಣೀಕೃತ ಜಾತಿ ಆಧಾರಿತ ತಾರತಮ್ಯ ಹೋಗುವವರೆಗೂ 'ಮೀಸಲಾತಿ' ತೆಗೆಯುವ ಕೂಗು ಬರೀ ಬೂಟಾಟಿಕೆ ಅಷ್ಟೆ.

ಗೌರಂಗ್ ಸಿ., ನಾಗರಿಕ

50 ವರ್ಷಗಳ ಹಿಂದೆ

ಮಂಗಳವಾರ, 22-6-1971

- **ಸಚಿವರು, ಕಾಂಗ್ರೆಸ್ಸಿಗರ ದುಂದು, ಭೋಗ ಜೀವನ ಕುರಿತು ಉಗ್ರ ಟೀಕೆ**

ನವದೆಹಲಿ, ಜೂನ್ 21- ಸಚಿವರು ಹಾಗೂ ಇನ್ನಿತರ ಕಾಂಗ್ರೆಸ್ ಕಾರ್ಯಕರ್ತರು ದುಂದುವೆಚ್ಚ ಮತ್ತು ಭೋಗಜೀವನ ತ್ಯಜಿಸಿ ಮಿತವ್ಯಯ ಹಾಗೂ ಸರಳ ಜೀವನ ವನ್ನು ಆಚರಣೆಯಲ್ಲಿ ತರುವ ಅಗತ್ಯವನ್ನು ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾ ಗಾಂಧಿ ಅವರು ಇಂದು ಇಲ್ಲಿ ಒಪ್ಪಿಕೊಂಡರು.

ಆಡಳಿತ ಕಾಂಗ್ರೆಸ್ ಸಂಸತ್ ಪಕ್ಷದ ಕಾರ್ಯನಿರ್ವಾಹಕ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ಬಾಂಗ್ಲಾ ದೇಶದ ನಿರಾಶ್ರಿತರ ಪ್ರವಾಹದ ಕಾರಣ ರಾಷ್ಟ್ರವು ಇಂದು ಎದುರಿಸುತ್ತಿರುವ ಸಂಕಷ್ಟದ ಸ್ಥಿತಿಯಲ್ಲಿ ಮಿತವ್ಯಯ ಅತ್ಯಗತ್ಯವೆಂದು ನುಡಿದರೆಂದು ವರದಿಯಾಗಿದೆ.

ಸಭೆಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿದ ಅರ್ಜುನ ಅರೋರ ಅವರು, ಸಚಿವರುಗಳ ಜೀವನವಿಧಾನ, ಅವರು ವಾಸಿಸುವ ಭವ್ಯ ಭವನಗಳು, ದುಬಾರಿಯ ಪೀಠೋಪಕರಣಗಳ ಬಳಕೆ ಮೊದಲಾದವುಗಳ ಬಗ್ಗೆ ಕಟುವಾಗಿ ಟೀಕಿಸಿದರು.

- **ಪಕ್ಷಾಂತರ ತಡೆಗೆ ಶೀಘ್ರವೇ ಮಸೂದೆ ಮೊಹ್ಸಿನ್ ಭರವಸೆ**

ನವದೆಹಲಿ, ಜೂನ್ 21- ಗುಜರಾತಿನಲ್ಲಿ ಮೇ 31ರಂದು ರಾಷ್ಟ್ರಪತಿ ಆಡಳಿತ ಜಾರಿಗೆ ತಂದುದನ್ನು ಲೋಕಸಭೆ ಇಂದು ಅನುಮೋದಿಸಿತು.

ನಿರ್ಣಯ ಕುರಿತು ಚರ್ಚೆಗೆ ಗೃಹ ಶಾಖೆಯ ಉಪಸಚಿವ ಮೊಹ್ಸಿನ್‌ರವರು ಉತ್ತರವಿತ್ತು, ಪಕ್ಷಾಂತರಿಗಳಿಗೆ ಸಂಬಂಧಿಸಿದಂತೆ ಮಸೂದೆಯೊಂದನ್ನು ಶೀಘ್ರವೇ ಸರ್ಕಾರ ಸಭೆಯ ಮುಂದೆ ತರಲಿದೆ ಎಂದು ತಿಳಿಸಿದರು. ಆದರೆ, ಪಕ್ಷಗಳು ಮತ್ತು ರಾಜ್ಯ ಸರ್ಕಾರಗಳು ಸಹಕರಿಸಿ ಕೆಲಸ ಮಾಡಬೇಕೆಂದು ತಿಳಿಸಿದರು.

- **ರಾಷ್ಟ್ರೀಯ ಸ್ಮಾರಕಗಳ ರಕ್ಷಣೆಗೆ ವಿಶೇಷ ದಳ: ಸಚಿವ ರಾಯ್ ಭರವಸೆ**

ನವದೆಹಲಿ, ಜೂನ್ 21- ಹಿಮಾಚಲ ಪ್ರದೇಶದಲ್ಲಿನ ಚಂಬಾದಿಂದ ಕಳವಾದ ವಿಷ್ಣು ವಿಗ್ರಹವನ್ನು ಭಾರತದಿಂದ ಹೊರಕ್ಕೆ ತೆಗೆದುಕೊಂಡು ಹೋಗಲಾಗಿದೆ ಎಂದು ಸೂಚಿಸಲು ಇದುವರೆಗೆ ಕೈಗೊಂಡ ತನಿಖೆಯಿಂದ ಯಾವುದೇ ರುಜುವಾತೂ ದೊರೆತಿಲ್ಲ ಎಂದು ಕೇಂದ್ರ ಶಿಕ್ಷಣ ಸಚಿವ ಸಿದ್ಧಾರ್ಥ ಶಂಕರರಾಯ್ ಅವರು ಇಂದು ಲೋಕಸಭೆಯಲ್ಲಿ ತಿಳಿಸಿದರು.

ಕಳ್ಳರು ಮತ್ತು ಅಕ್ರಮ ಸಾಗಾಣಿಕೆದಾರರು ಸೂರೆ ಮಾಡದಂತೆ ರಾಷ್ಟ್ರೀಯ ಸ್ಮಾರಕಗಳ ರಕ್ಷಣೆಗಾಗಿ ದಳವೊಂದನ್ನು ಕೇಂದ್ರವು ರಚಿಸುವ ಸಾಧ್ಯತೆಯನ್ನು ಸೂಚ್ಯವಾಗಿ ತಿಳಿಸಿದರು.

ರಾಜಕೀಯ ಭಿನ್ನಾಭಿಪ್ರಾಯಗಳನ್ನು ಬದಿಗೆ ಇರಿಸಬೇಕಾದ ಸಮಯ ಇದು

'ನಾವು', 'ಅವರು' ಹಾಗೂ 'ನಾವೆಲ್ಲರೂ'...

ಜನರಾಜಕಾರಣ

ಪ್ರೊ. ಸಂದೀಪ್ ಶಾಸ್ತಿ

21ನೆಯ ಶತಮಾನವು ಮಹತ್ವದ ವಿದ್ಯಮಾನಗಳಿಗೆ ಸಾಕ್ಷಿಯಾಗಿದೆ. ಕೋವಿಡ್ ಸಾಂಕ್ರಾಮಿಕವು ಒಂದೂವರೆ ವರ್ಷದಲ್ಲಿ ನಮ್ಮ ಜೀವನವನ್ನು ಯೋಚಿಸಲೂ ಆಗದಿದ್ದಂತಹ ರೀತಿಯಲ್ಲಿ ಬದಲಾಯಿಸಿದೆ. ಹೆಚ್ಚಿನ 'ಭಾವನಾತ್ಮಕ ಬೆಸುಗೆ'ಯನ್ನು ಬಯಸುತ್ತಲೇ ನಾವು 'ದೈಹಿಕ ಅಂತರವನ್ನು' ಕೇಳುತ್ತಿದ್ದೇವೆ. ಜನ ಇನ್ನೊಬ್ಬರಿಗೆ ಸಹಾಯ ಮಾಡುತ್ತಿರುವ ಸುದ್ದಿಗಳನ್ನು ಹಂಚಿಕೊಳ್ಳುತ್ತಿದ್ದೇವೆ. ಬಿಕ್ಕಟ್ಟಿನ ಈ ಸಂದರ್ಭದಲ್ಲಿಯೂ ದುರಾಸೆ ಹಾಗೂ ಸ್ವಾರ್ಥವನ್ನು ಬಹಿರಂಗವಾಗಿ ತೋರಿಸಿಕೊಳ್ಳುತ್ತಿರುವವರ ಕಥೆಗಳನ್ನು ಓದುತ್ತಿದ್ದೇವೆ, ಕೇಳುತ್ತಿದ್ದೇವೆ. ಸಮಾಜದಲ್ಲಿ ಧ್ರುವೀಕರಣವು ಇನ್ನಷ್ಟು ತೀಕ್ಷ್ಣವಾಗುತ್ತಿರುವುದನ್ನೂ ನೋಡುತ್ತಿದ್ದೇವೆ. ನಮ್ಮ ನೆರೆಹೊರೆಯಲ್ಲಿ, ಸಮಾಜದಲ್ಲಿ 'ನಾವು' ಮತ್ತು 'ಅವರು' ಎಂಬ ಭೇದ ಮೂಡಿದೆ. ಎಲ್ಲ ಸಂದರ್ಭಗಳಲ್ಲಿಯೂ ನಮ್ಮ ಚರ್ಚೆಯು 'ಅವರ' ಬಗ್ಗೆಯೇ ಇರುತ್ತದೆ.

ಸಾರ್ವಜನಿಕ ವೇದಿಕೆಗಳಲ್ಲಿ ಯಾವುದಾದರೂ ವಿಷಯದ ಬಗ್ಗೆ ಚರ್ಚೆಗಳು ಆರಂಭವಾದಾಗ, ಬಹುತೇಕರು ಒಂದು ತೀರ್ಮಾನಕ್ಕೆ ಬಂದ ನಂತರವೇ ತಮ್ಮ ವಿಶ್ಲೇಷಣೆ ಆರಂಭಿಸುತ್ತಾರೆ. ತೀರ್ಮಾನಕ್ಕೆ ಬಂದು, ನಂತರ ಅದಕ್ಕೆ ಆಧಾರಗಳನ್ನು ಹುಡುಕಲು ಯತ್ನಿಸುತ್ತಾರೆ. ನಿಜವಾದ ಒಳಿತು, ಕೆಡುಕುಗಳ ಆಧಾರದಲ್ಲಿ ಚರ್ಚೆಗಳು ನಡೆಯುವುದಿಲ್ಲ. ತಾವು ಬಯಸಿದ ನಿಲುವು ಸಮರ್ಥಿಸುವುದಕ್ಕಾಗಿ ಒಳಿತು, ಕೆಡುಕುಗಳನ್ನು ಅನ್ವೇಷಿಸಲಾಗುತ್ತದೆ. ನಾವು ನಂಬಿರುವುದನ್ನು ಬೆಂಬಲಿಸುವವರು ಹಾಗೂ ನಮ್ಮ ನಂಬಿಕೆಗಳ ವಿರುದ್ಧ ಇರುವವರ ನಡುವಿನ ಅಂತರವು ಎದ್ದು ಕಾಣುವಂತೆ ಆಗುತ್ತಿದೆ. ಒಮ್ಮತ ಸಾಧಿಸುವ ಅವಕಾಶಗಳು ತೀರಾ ಅಪರೂಪ ಆಗುತ್ತಿವೆ. 'ನಾವು' ಮತ್ತು 'ಅವರು' ಎಂಬ ಭೇದವು ಎಂದಾದರೂ 'ನಾವೆಲ್ಲರೂ' ಎಂದು ಆಗಬಹುದೇ?

'ನಮ್ಮ ದೃಷ್ಟಿಕೋನವನ್ನು ವೈಭವೀಕರಿಸುವ' ಹಾಗೂ 'ಎದುರು ಪಕ್ಷದವರ ದೃಷ್ಟಿಕೋನವನ್ನು ಕೆಟ್ಟದ್ದೆಂದು ಬಿಂಬಿಸುವ' ಪ್ರವೃತ್ತಿಯು ಕಳೆದ ಕೆಲವು ವರ್ಷಗಳಲ್ಲಿ ಕಂಡುಬಂದಿದೆ. ಅಪರಿಚಿತರಾಗಿಯೇ ಉಳಿದುಕೊಳ್ಳುವ ಅವಕಾಶ ನೀಡಿರುವ ಸಾಮಾಜಿಕ ಜಾಲತಾಣಗಳು ಇಂತಹ ಪ್ರವೃತ್ತಿಗೆ ತುಪ್ಪ ಸುರಿಯುತ್ತಿವೆ. ವಿಷಯಗಳನ್ನು ಎರಡು ವಿರುದ್ಧ ನೆಲೆಗಳಲ್ಲಿ ಹೇಗೆ ಜೋಡಿಸಲಾಗುತ್ತದೆ ಎಂದರೆ, 'ಅವರು' ಹೇಳುವ ಎಲ್ಲವನ್ನೂ ಉಗ್ರವಾಗಿ ವಿರೋಧಿಸಬೇಕು, 'ನಾವು' ಪ್ರತಿಪಾದಿಸುವ ಎಲ್ಲವನ್ನೂ ಭಾವುಕವಾಗಿ ಸಮರ್ಥಿಸಿಕೊಳ್ಳಬೇಕು ಎಂಬ ಧೋರಣೆ ಬೆಳೆದಿದೆ. ವಿರೋಧಿಗಳ ದೃಷ್ಟಿಕೋನವನ್ನು ಟೀಕಿಸಲು, ತಮ್ಮ ತೀರ್ಮಾನವನ್ನು ಒತ್ತಿಹೇಳಲು ಕೆಲವು ಆಧಾರಗಳನ್ನು ಮಾತ್ರ (ಹಲವು ಬಾರಿ ಅವುಗಳನ್ನು ತಿರುಚಿ) ಬಳಸಿಕೊಳ್ಳಲಾಗುತ್ತದೆ.

ಈ ಬಗೆಯಲ್ಲಿ, ನಿಜವಾದ ಸುದ್ದಿ, ಅರ್ಧ ಸತ್ಯವನ್ನು ಹೊಂದಿರುವ ಸುದ್ದಿ, ಸುಳ್ಳು ಸುದ್ದಿಗಳ ರೂಪದಲ್ಲಿ ಇರುವ ಮಾಹಿತಿ ಸ್ಫೋಟವು ಸಾಮಾಜಿಕ ಜಾಲತಾಣಗಳಲ್ಲಿ ಜಲಪಾತದಂತೆ ಧುಮ್ಮಿಕ್ಕುತ್ತದೆ. 'ಸತ್ಯ'ವೆಂದು ಹೇಳಲಾಗುವ ಎಲ್ಲ ವಿಷಯಗಳ ಬಗ್ಗೆಯೂ 'ಪ್ರತಿಸತ್ಯ' ಸಿದ್ಧವಾಗಿರುತ್ತದೆ. 'ಅಧಿಕೃತ' ಎಂದು ಹೇಳಲಾಗುವ ಎಲ್ಲ ಮಾಹಿತಿಗೂ ವಿರುದ್ಧವಾಗಿ ಇನ್ನೊಂದು 'ಮಾಹಿತಿ' ಇರುತ್ತದೆ. 'ಸುಳ್ಳು' ಎಂಬುದು ಸಾಮಾನ್ಯವಾಗಿ 'ಅಧಿಕೃತ' ಎಂಬ ಮುಖವಾಡ ಹೊತ್ತಿರುತ್ತದೆ. 'ಅಧಿಕೃತ'ವು 'ತಿರುಚಲ್ಪಟ್ಟಿದ್ದು' ಎಂಬ ಮಟ್ಟಕ್ಕೆ ಇಳಿದಿರುತ್ತದೆ. ಈ ಅಂಶವನ್ನು ವಿವರಿಸಲು ಎರಡು ಉದಾಹರಣೆಗಳನ್ನು ನೀಡಬಹುದು.

ಕೋವಿಡ್ ಸಾಂಕ್ರಾಮಿಕವು ಒಂದೂವರೆ ವರ್ಷದಲ್ಲಿ ನೋವು ತಂದಿತ್ತಿದೆ. ಇಂತಹ ಬಿಕ್ಕಟ್ಟನ್ನು ನಿಭಾಯಿಸಲು ಅಧಿಕಾರದಲ್ಲಿ ಇರುವವರ, ಸಾಮಾಜಿಕ ಸಂಘಟನೆಗಳ, ಸಮುದಾಯಗಳ ಹಾಗೂ ಪ್ರಜೆಗಳ ನಡುವೆ ಸಹಕಾರ ಬೇಕು. ಸಾಂಕ್ರಾಮಿಕ ಹರಡಿರುವಾಗ ದೋಷಾರೋಪ ಹೊರಿಸುತ್ತ ಕೂರಲು ಆಗುವುದಿಲ್ಲ. ರಾಜಕೀಯ ಭಿನ್ನಾಭಿಪ್ರಾಯಗಳನ್ನು ಬದಿಗೆ ಇರಿಸಬೇಕಾದ ಸಮಯವಿದು. ಇದು ಕೇಂದ್ರ ಸರ್ಕಾರವೋ ರಾಜ್ಯ ಸರ್ಕಾರವೋ ಎಂಬ ವಿಚಾರ ಅಲ್ಲ. ಬದಲಿಗೆ, ಇದು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಎಂಬ ವಿಚಾರ. ಆದರೆ, ಸಾಂಕ್ರಾಮಿಕವನ್ನು ಸರ್ಕಾರಗಳು ನಿಭಾಯಿಸಿದ ಬಗೆಯನ್ನು ವಿವರಿಸುವ ಬರಹಗಳು, ಅಭಿಪ್ರಾಯಗಳು ಲೋಪವನ್ನು ಯಾವುದಾದರೂ ಒಂದು ಹಂತದ ಸರ್ಕಾರದ ತಲೆ

ತಪ್ಪಿತೇ ಕೋವಿಡ್ ಸಾವಿನ ಲೆಕ್ಕ?

ಭಾರತದಲ್ಲಿ ಕೋವಿಡ್ ಸಾವುಗಳ ಲೆಕ್ಕವನ್ನು ಕಡಿಮೆ ತೋರಿಸಲಾಗುತ್ತಿದೆ ಎಂದು ಹಲವು ಅಧ್ಯಯನ ಸಂಸ್ಥೆಗಳು ವರದಿ ಪ್ರಕಟಿಸುತ್ತಲೇ ಇವೆ. ಕೋವಿಡ್ ಎರಡನೇ ಅಲೆಯಲ್ಲಿ ದೇಶದಲ್ಲಿ 10 ಲಕ್ಷಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ. ಆದರೆ, ಇವುಗಳನ್ನು ಕೋವಿಡ್ ಸಾವು ನೋಂದಣಿ ಮಾರ್ಗಸೂಚಿಯ ಅನ್ವಯ ನೋಂದಣಿ ಮಾಡದೇ ಇರುವ ಕಾರಣ ಎಲ್ಲಾ ಕೋವಿಡ್ ಸಾವುಗಳು ಲೆಕ್ಕಕ್ಕೇ ಸಿಕ್ಕಿಲ್ಲ ಎಂದು 'ದಿ ಎಕನಾಮಿಸ್ಟ್' ಜೂನ್ ಮೊದಲ ವಾರದಲ್ಲಿ ವರದಿ ಪ್ರಕಟಿಸಿತ್ತು.

ಈ ವರದಿಯನ್ನು ಕೇಂದ್ರ ಸರ್ಕಾರವು ತಿರಸ್ಕರಿಸಿತ್ತು. 'ಈ ವರದಿ ಸತ್ಯಾಂಶವನ್ನು ಆಧರಿಸಿ ಬರೆದಿಲ್ಲ' ಎಂದು ಕೇಂದ್ರ ಆರೋಗ್ಯ ಸಚಿವಾಲಯವು ಹೇಳಿತ್ತು. ಆದರೆ, ಭಾರತದ ಕೆಲವು ಪ್ರಾದೇಶಿಕ ಮಾಧ್ಯಮಗಳು ತಮ್ಮ ರಾಜ್ಯಗಳಲ್ಲಿ ಕೋವಿಡ್ ಸಾವನ್ನು ಕಡಿಮೆ ತೋರಿಸಲಾಗುತ್ತಿದೆ ಎಂದು ವರದಿ ಪ್ರಕಟಿಸುತ್ತಲೇ ಇವೆ.

ಪ್ರತಿದಿನ ಕೋವಿಡ್‌ನಿಂದ ಸಾಯುವವರ ಮಾಹಿತಿಯನ್ನು ಜಿಲ್ಲಾಡಳಿತ, ರಾಜ್ಯಗಳು ಮತ್ತು ಅಂತಿಮವಾಗಿ ಕೇಂದ್ರ ಆರೋಗ್ಯ ಸಚಿವಾಲಯ ಪ್ರಕಟಿಸುತ್ತವೆ. 'ಜಿಲ್ಲಾಡಳಿತಗಳು ನೀಡುತ್ತಿರುವ ಸಾವಿನ ಲೆಕ್ಕಕ್ಕೂ, ಚಿತಾಗಾರ ಮತ್ತು ಸ್ಮಶಾನಗಳಲ್ಲಿ ನಡೆದ ಅಂತ್ಯಕ್ರಿಯೆಗಳ ಸಂಖ್ಯೆಗೂ ಭಾರಿ ಅಂತರವಿದೆ' ಎಂದು ಇಂತಹ ವರದಿ ಪ್ರಕಟಿಸಿರುವ ಹಲವು ಮಾಧ್ಯಮಗಳು ಉಲ್ಲೇಖಿಸಿವೆ. ತಮಿಳುನಾಡು, ಗುಜರಾತ್, ಮಧ್ಯಪ್ರದೇಶ, ದೆಹಲಿ, ಬಿಹಾರ ಮತ್ತು ಮಹಾರಾಷ್ಟ್ರದಲ್ಲೂ ಈ ರೀತಿ ಲೆಕ್ಕ ತಪ್ಪಿಸಲಾಗಿದೆ ಎಂದು ವರದಿಗಳಲ್ಲಿ ಆರೋಪಿಸಲಾಗಿದೆ. ದಿ ಎಕನಾಮಿಸ್ಟ್ ಪ್ರಕಟಿಸಿದ್ದ ವರದಿಯಲ್ಲೂ ಇದೇ ಮಾಹಿತಿ ಇದೆ.

ಚಿತಾಗಾರ ಮತ್ತು ಸ್ಮಶಾನಗಳಲ್ಲಿ ಕೋವಿಡೇತರ ಸಾವಿನ ಶವಗಳ ಅಂತ್ಯ ಸಂಸ್ಕಾರಗಳೂ ನಡೆಯುತ್ತವೆ. ಹೀಗಾಗಿ ಕೋವಿಡ್ ಸಾವಿಗೂ ಅಂತ್ಯಕ್ರಿಯೆಯಾದ ಶವಗಳ ಸಂಖ್ಯೆಗೂ ಭಾರಿ ವ್ಯತ್ಯಾಸವಿರುತ್ತದೆ ಎಂದು ಜಿಲ್ಲಾಡಳಿತ ಮತ್ತು ರಾಜ್ಯ ಸರ್ಕಾರಗಳು ಸ್ಪಷ್ಟನೆ ನೀಡಿವೆ. ಆದರೆ ಕೋವಿಡ್ ಎರಡನೇ ಅವಧಿಯಲ್ಲಿ ಸಂಭವಿಸಿದ ಅಂತ್ಯಕ್ರಿಯೆಗಳು, 2020ರಲ್ಲಿ ಅದೇ ಅವಧಿಯಲ್ಲಿ ಸಂಭವಿಸಿದ್ದ ಅಂತ್ಯಕ್ರಿಯೆಗಳಿಗಿಂತ ದುಪ್ಪಟ್ಟು ಎಂದು ಮಾಧ್ಯಮಗಳು ವರದಿ ಮಾಡಿವೆ.

ಗುಜರಾತ್ನ ಸೂರತ್ ನಗರದಲ್ಲಿ ನಡೆದ ಅಂತ್ಯಕ್ರಿಯೆಗಳು ಮತ್ತು ಸಂಭವಿಸಿದ ಕೋವಿಡ್ ಸಾವುಗಳ ಬಗ್ಗೆ ರಾಯಿಟರ್ಸ್ ಸುದೀರ್ಘ ವರದಿ ಪ್ರಕಟಿಸಿದೆ. ಸೂರತ್‌ನ ಎಲ್ಲಾ ಚಿತಾಗಾರಗಳು, ಸ್ಮಶಾನ ಮತ್ತು ಖಬರಸ್ತಾನಗಳಿಗೆ ಭೇಟಿ ನೀಡಿ, ಅಲ್ಲಿ ನಡೆದ ಅಂತ್ಯಕ್ರಿಯೆಗಳ ಮಾಹಿತಿಯನ್ನು ರಾಯಿಟರ್ಸ್ ಪ್ರಕಟಿಸಿದೆ. '2020ರ ಏಪ್ರಿಲ್‌ನಲ್ಲಿ ಸೂರತ್‌ನ ಎಲ್ಲಾ ಚಿತಾಗಾರ, ಸ್ಮಶಾನ ಮತ್ತು ಖಬರಸ್ತಾನಗಳಲ್ಲಿ 1,980 ಅಂತ್ಯಕ್ರಿಯೆಗಳನ್ನು ನಡೆಸಲಾಗಿತ್ತು. ಆದರೆ, 2021ರ ಏಪ್ರಿಲ್‌ನಲ್ಲಿ 6,520 ಅಂತ್ಯಕ್ರಿಯೆಗಳು ನಡೆದಿವೆ. 2021ರ ಏಪ್ರಿಲ್‌ನಲ್ಲಿ ಸೂರತ್ ನಗರ ಮತ್ತು ಜಿಲ್ಲೆಯಲ್ಲಿ ಕೋವಿಡ್‌ನಿಂದ ಸಂಭವಿಸಿದ ಸಾವುಗಳು 585 ಎಂದು ಸರ್ಕಾರದ ದಾಖಲೆಗಳು ಹೇಳುತ್ತವೆ. ಈ ಎಲ್ಲಾ ಚಿತಾಗಾರಗಳಲ್ಲಿ ಸಂಭವಿಸಿದ ಹೆಚ್ಚುವರಿ ಅಂತ್ಯಕ್ರಿಯೆಗಳೆಲ್ಲವೂ ಕೋವಿಡ್ ಸಾವಿಗೆ ಸಂಭವಿಸಿದ್ದೇ ಆಗಿರಬೇಕಿಲ್ಲ. ಆದರೆ, ಈ ಹೆಚ್ಚುವರಿ ಸಾವುಗಳಲ್ಲಿ ಕೋವಿಡ್ ಸಾವುಗಳೂ ಸೇರಿವೆ ಎಂಬುದರಲ್ಲಿ ಅನುಮಾನವಿಲ್ಲ' ಎಂದು ರಾಯಿಟರ್ಸ್ ವರದಿ ಮಾಡಿದೆ.

ಮಧ್ಯಪ್ರದೇಶ, ಬಿಹಾರ ಮತ್ತು ತಮಿಳುನಾಡಿನ ಕೋವಿಡ್ ಸಾವುಗಳಿಗೆ ಸಂಬಂಧಿಸಿದಂತೆ ಇಂಥದ್ದೇ ವರದಿಗಳು ಪ್ರಕಟವಾಗಿವೆ. ಕೋವಿಡ್ ಸಾವುಗಳಿಗೆ ಸಂಬಂಧಿಸಿದಂತೆ ಅಧಿಕೃತ ಮಾಹಿತಿಯನ್ನು ಕೇಂದ್ರ ಸರ್ಕಾರ ಬಹಿರಂಗಪಡಿಸಬೇಕು ಎಂದು ಕೋರಿ ಗುಜರಾತ್ ಹೈಕೋರ್ಟ್, ಬಾಂಬೆ ಹೈಕೋರ್ಟ್, ಮದ್ರಾಸ್ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ನಲ್ಲಿ ಹಲವು ಅರ್ಜಿಗಳು ಸಲ್ಲಿಕೆಯಾಗಿವೆ. ಈ ಅರ್ಜಿಗಳ ವಿಚಾರಣೆ ಆರಂಭವಾದ ಬೆನ್ನಲ್ಲೇ ಹಲವು ರಾಜ್ಯಗಳು ತಮ್ಮಲ್ಲಿನ ಕೋವಿಡ್ ಸಾವುಗಳ ಪರಿಷ್ಕೃತ ಸಂಖ್ಯೆಯನ್ನು ಬಿಡುಗಡೆ ಮಾಡುತ್ತಿವೆ. ಕೋವಿಡ್ ಸಾವಿನ ನಿಖರ ಮಾಹಿತಿ ನೀಡಿ ಎಂದು ಹಲವು ರಾಜ್ಯ ಸರ್ಕಾರಗಳು ಜಿಲ್ಲಾಡಳಿತಗಳಿಗೆ ಸೂಚನೆ ನೀಡಿವೆ.

ಗುಜರಾತ್

1,23,873 2021ರ ಮಾರ್ಚ್ 10ರಿಂದ ಮೇ 10ರ ನಡುವೆ ವಿತರಿಸಲಾದ ಮರಣ ನೋಂದಣಿ ಪ್ರಮಾಣಪತ್ರಗಳು

4,100 ಇದೇ ಅವಧಿಯಲ್ಲಿ ಸರ್ಕಾರ ಘೋಷಿಸಿರುವ ಕೋವಿಡ್ ಸಾವುಗಳು

58,068 2020ರ ಮಾರ್ಚ್ 10ರಿಂದ ಮೇ 10ರ ನಡುವೆ ವಿತರಿಸಲಾದ ಮರಣ ನೋಂದಣಿ ಪ್ರಮಾಣಪತ್ರಗಳು

513 ಇದೇ ಅವಧಿಯಲ್ಲಿ ಸರ್ಕಾರ ಘೋಷಿಸಿರುವ ಕೋವಿಡ್ ಸಾವುಗಳು

ಬಿಹಾರ

1.3 ಲಕ್ಷ 2020ರ ಜನವರಿ 1ರಿಂದ ಮೇ ಅಂತ್ಯದವರೆಗೆ ರಾಜ್ಯದಲ್ಲಿ ಸಂಭವಿಸಿದ ಸಾವುಗಳು

2.2 ಲಕ್ಷ 2021ರ ಜನವರಿ 1ರಿಂದ ಮೇ ಅಂತ್ಯದವರೆಗೆ ರಾಜ್ಯದಲ್ಲಿ ಸಂಭವಿಸಿದ ಸಾವುಗಳು

82,500 ಸಾವಿನ ಸಂಖ್ಯೆಯಲ್ಲಿ ಆಗಿರುವ ಏರಿಕೆ

74,808 ಸಾವುಗಳಿಗೆ ನಿಖರ ಕಾರಣಗಳನ್ನು ಬಿಹಾರ ಸರ್ಕಾರ ನಮೂದು ಮಾಡಿಲ್ಲ

7,717 ಸರ್ಕಾರ ಘೋಷಿಸಿರುವ ಕೋವಿಡ್ ಸಾವುಗಳು

ಮಧ್ಯಪ್ರದೇಶ

104 2021ರ ಏಪ್ರಿಲ್‌ನಲ್ಲಿ ಭೋಪಾಲ್‌ನಲ್ಲಿ ಸಂಭವಿಸಿದ ಕೋವಿಡ್ ಸಾವುಗಳ ಸಂಖ್ಯೆಯ ಸರ್ಕಾರಿ ಲೆಕ್ಕ

3,811 ಏಪ್ರಿಲ್‌ನಲ್ಲಿ ಎಲ್ಲಾ ಚಿತಾಗಾರ ಮತ್ತು ಸ್ಮಶಾನಗಳಲ್ಲಿ ನಡೆದ ಅಂತ್ಯಕ್ರಿಯೆಗಳು

2,557 ಏಪ್ರಿಲ್‌ನಲ್ಲಿ ಎಲ್ಲಾ ಚಿತಾಗಾರ ಮತ್ತು ಸ್ಮಶಾನಗಳಲ್ಲಿ ನಡೆದ ಕೋವಿಡ್ ಸಾವಿನ ಶವಗಳ ಅಂತ್ಯಕ್ರಿಯೆಗಳು

● ಮಧ್ಯಪ್ರದೇಶದ ರಾಜಧಾನಿ ಭೋಪಾಲ್‌ನಲ್ಲಿ 2021ರ ಏಪ್ರಿಲ್‌ನಲ್ಲಿ ಕೋವಿಡ್ ಸಾವುಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ನೀಡಿದ ಲೆಕ್ಕಕ್ಕೂ, ಚಿತಾಗಾರಗಳಲ್ಲಿ ನೀಡಲಾದ ಲೆಕ್ಕಕ್ಕೂ ತಾಳೆಯಾಗುತ್ತಿಲ್ಲ. ಚಿತಾಗಾರಗಳಲ್ಲಿ ನಡೆದ ಹೆಚ್ಚುವರಿ ಕೋವಿಡ್ ಸಾವಿನ ಶವಗಳ ಅಂತ್ಯಕ್ರಿಯೆಗಳ ಬಗ್ಗೆ ತನಿಖೆ ನಡೆಸಬೇಕು ಎಂದು ವಿರೋಧ ಪಕ್ಷ ಕಾಂಗ್ರೆಸ್ ಒತ್ತಾಯಿಸಿತ್ತು. ಆದರೆ, ರಾಜ್ಯ ಸರ್ಕಾರ ಯಾವುದೇ ಕ್ರಮ ತೆಗೆದುಕೊಂಡಿಲ್ಲ

ಬಿಡುಗಡೆಯಾಗದ ವರದಿಗಳು...

ದೇಶದಲ್ಲಿ ಜನನ ಮತ್ತು ಮರಣ ನೋಂದಣಿಯನ್ನು ನಾಗರಿಕ ನೋಂದಣಿ ವ್ಯವಸ್ಥೆ (ಸಿಆರ್‌ಎಸ್) ಅಡಿ ಮಾಡಲಾಗುತ್ತದೆ. ಪ್ರಧಾನ ನೋಂದಣಿ ಅಧಿಕಾರಿ ಮತ್ತು ಜನಗಣತಿ ಆಯುಕ್ತರ ಕಚೇರಿ ಈ ವ್ಯವಸ್ಥೆಯನ್ನು ನಿರ್ವಹಿಸುತ್ತವೆ. ಜಿಲ್ಲಾಡಳಿತಗಳು ಮರಣ ನೋಂದಣಿಯನ್ನು ದಾಖಲಿಸುತ್ತವೆ. ಅದನ್ನು ಪ್ರತಿ ತಿಂಗಳು ಸಿಆರ್‌ಎಸ್ ಕಲೆಹಾಕುತ್ತದೆ. ಒಂದು ವರ್ಷಕ್ಕೆ ಸಂಬಂಧಿಸಿದ ಈ ಸಮಗ್ರ ಮಾಹಿತಿಯನ್ನು, ಆ ವರ್ಷ ಮುಗಿದ ಕೆಲವು ತಿಂಗಳ ನಂತರ ಬಿಡುಗಡೆ ಮಾಡಲಾಗುತ್ತದೆ.

ಕೋವಿಡ್ ಸಾವುಗಳಿಗೆ ಸಂಬಂಧಿಸಿದ ಮಾಹಿತಿಯೂ ಸಿಆರ್‌ಎಸ್ ಬಳಿ ಇರುತ್ತದೆ. ಆದರೆ ಈಗ 2019ರ ಸಾವುಗಳು ಮಾತ್ರವೇ ಬಹಿರಂಗವಾಗಿವೆ. ದೇಶದಲ್ಲಿ ಪ್ರತಿವರ್ಷ 95 ಲಕ್ಷ ಸಾವು ಸಂಭವಿಸುತ್ತವೆ. ಅವುಗಳಲ್ಲಿ 80-85 ಲಕ್ಷದಷ್ಟು ಸಾವುಗಳು ಮಾತ್ರ ನೋಂದಣಿಯಾಗುತ್ತವೆ. ಸಾವಿನ ಸಂಖ್ಯೆಯೂ ಪ್ರತಿವರ್ಷ ಶೇ 1- 1.3ರಷ್ಟು ಏರಿಕೆಯಾಗುತ್ತವೆ ಎಂದು ಸಿಆರ್‌ಎಸ್ ವಾರ್ಷಿಕ ವರದಿಯಲ್ಲಿ ಹೇಳಲಾಗಿದೆ.

2020ರ ವಾರ್ಷಿಕ ಸಿಆರ್‌ಎಸ್ ವರದಿ ಬಿಡಿಗಡೆಯಾದರೆ, 2019ರ ಹೋಲಿಕೆಯಲ್ಲಿ 2020ರಲ್ಲಿ ಸಾವಿನ ಸಂಖ್ಯೆ ಎಷ್ಟು ಏರಿಕೆಯಾಗಿದೆ ಎಂಬುದನ್ನು ಅಂದಾಜಿಸಬಹುದು. ಆ ಹೆಚ್ಚುವರಿ ಸಾವುಗಳಲ್ಲಿ ಕೋವಿಡ್ ಸಾವಿನ ಸಂಖ್ಯೆಯೂ ಸಿಗುವ ಸಾಧ್ಯತೆ ಇರುತ್ತದೆ. ಪ್ರತಿ ತಿಂಗಳು ಕಲೆ ಹಾಕುವ ಮಾಹಿತಿಯನ್ನು ಬಿಡುಗಡೆ ಮಾಡಿದರೂ, ಕೋವಿಡ್ ಸಾವುಗಳ ಅಂದಾಜು ಸಂಖ್ಯೆ ಸಿಗುವ ಸಾಧ್ಯತೆ ಇದೆ. ಆದರೆ ಸಿಆರ್‌ಎಸ್ 2020ರ ವಾರ್ಷಿಕ ವರದಿಯನ್ನು ಇನ್ನೂ ಬಿಡುಗಡೆ ಮಾಡಿಲ್ಲ.

ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ತು ದೇಶದ ಎಲ್ಲಾ ಆಸ್ಪತ್ರೆಗಳಲ್ಲಿ ಸಂಭವಿಸುವ ಕೋವಿಡ್ ಸಾವುಗಳ ವಿವರವನ್ನು ಕಲೆಹಾಕುತ್ತದೆ. ರಾಜ್ಯ ಸರ್ಕಾರಗಳು ನೀಡುವ ಮಾಹಿತಿಯನ್ನು ಪ್ರತ್ಯೇಕವಾಗಿ ಇರಿಸುತ್ತದೆ. ಈ ಎರಡೂ ಮಾಹಿತಿಯನ್ನು ಬಹಿರಂಗಪಡಿಸಿದರೆ, ಕೋವಿಡ್ ಸಾವುಗಳ ಸಂಖ್ಯೆಗೆ ಸಂಬಂಧಿಸಿದ ಗೊಂದಲಗಳು ಪರಿಹಾರವಾಗುತ್ತವೆ.

ರಾಜಸ್ಥಾನ: ಲೆಕ್ಕಪರಿಶೋಧನೆಗೆ ಆದೇಶ

ರಾಜಸ್ಥಾನದಲ್ಲಿ 2021ರ ಏಪ್ರಿಲ್ 1ರಿಂದ ಮೇ 20ರ ಮಧ್ಯೆ ಒಟ್ಟು 3,900 ಕೋವಿಡ್ ಸಾವುಗಳು ಸಂಭವಿಸಿವೆ ಎಂದು ರಾಜ್ಯ ಸರ್ಕಾರದ ದಾಖಲೆಗಳು ಹೇಳುತ್ತವೆ. ಆದರೆ ಇದೇ ಅವಧಿಯಲ್ಲಿ ರಾಜ್ಯದಾದ್ಯಂತ 14,400 ಕೋವಿಡ್ ಸಾವುಗಳು ಸಂಭವಿಸಿವೆ.

ಚಿತಾಗಾರಗಳು ಮತ್ತು ಸ್ಮಶಾನಗಳಲ್ಲಿ ನಮೂದಿಸಲಾಗಿರುವ ಅಂತ್ಯಕ್ರಿಯೆಯ ಮಾಹಿತಿಯನ್ನು ಲೆಕ್ಕಹಾಕಿ ಮಾಧ್ಯಮಗಳು ಇಷ್ಟು ಸಾವು ಸಂಭವಿಸಿವೆ ಎಂದು ವರದಿ ಮಾಡಿದ್ದವು. 'ಈ ಬಗ್ಗೆ ಲೆಕ್ಕಪರಿಶೋಧನೆ ನಡೆಸಿ, ವರದಿ ನೀಡಿ. ಸಾವಿನ ಸಂಖ್ಯೆಯ ಮಾಹಿತಿ ತಪ್ಪಾಗಿದ್ದರೆ, ಅದನ್ನು ಸರಿಪಡಿಸಿ' ಎಂದು ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್ ಅವರು ಆದೇಶಿಸಿದ್ದಾರೆ.

ಮಾರ್ಗಸೂಚಿಗಳು ಹೇಳುವುದೇನು?

ಸಾವಿಗೆ ಕಾರಣವನ್ನು ಪತ್ತೆಹಚ್ಚುವ ಹಾಗೂ ಕೊರೊನಾ ವೈರಸ್‌ನಿಂದ ಸಾವು ಸಂಭವಿಸಿದೆ ಎಂದು ಘೋಷಿಸುವ ಕುರಿತಂತೆ ಗೊಂದಲಗಳು ಇರುವುದರಿಂದಲೇ ಕೊರೊನಾ ಸಾವಿನ ಲೆಕ್ಕಾಚಾರ ಏರುಪೇರಾಗಿದೆ. ಕೊರೊನಾ ಸಮಯದಲ್ಲಿ ಸಂಭವಿಸುವ ಸಾವುಗಳನ್ನು ಹೇಗೆ ವರ್ಗೀಕರಿಸಬಹುದು ಎಂಬುದಕ್ಕೆ ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯೂಎಚ್ಒ) ಹಾಗೂ ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ (ಐಸಿಎಂಆರ್) ಮಾರ್ಗಸೂಚಿ ಹೊರತಂದಿವೆ. ಎರಡೂ ಸಂಸ್ಥೆಗಳ ಮಾರ್ಗಸೂಚಿಗಳು ಬಹುತೇಕ ಹೋಲಿಕೆಯಾಗುತ್ತವೆ.

- ಕೋವಿಡ್ ಲಕ್ಷಣವಿದ್ದು ಪರೀಕ್ಷಾ ವರದಿಯಲ್ಲಿ ವೈರಾಣು ಇರುವುದು ದೃಢಪಟ್ಟಿದ್ದರೆ ಅದು ಕೋವಿಡ್‌ನಿಂದಾದ ಸಾವು ಎಂದು ಘೋಷಿಸಬಹುದು.
- ಲಕ್ಷಣ ಇರದಿದ್ದರೂ, ಪರೀಕ್ಷೆಯಲ್ಲಿ ಸೋಂಕು ದೃಢಪಟ್ಟಿದ್ದರೆ ಅದೂ ಕೋವಿಡ್‌ನಿಂದಾದ ಸಾವು ಎಂದು ಪರಿಗಣಿತವಾಗುತ್ತದೆ.
- ಸತ್ತ ವ್ಯಕ್ತಿಯಲ್ಲಿ ಸೋಂಕಿನ ಲಕ್ಷಣಗಳು ಕಂಡುಬಂದಿದ್ದು, ನಿಖರ ಪರೀಕ್ಷಾ ಫಲಿತಾಂಶಗಳು ಲಭ್ಯವಿಲ್ಲದಿದ್ದರೆ, ಅಂತಹ ಸಾವನ್ನು ಸಂಭವನೀಯ ಕೋವಿಡ್ ಸಾವು ಎಂದು ವರ್ಗೀಕರಿಸಬಹುದು ಎಂದು ಐಸಿಎಂಆರ್ ಹೊರಡಿಸಿರುವ ಮಾರ್ಗಸೂಚಿ ಹೇಳುತ್ತದೆ.
- ಕೋವಿಡ್ ಇದ್ದು, ನ್ಯುಮೋನಿಯಾ, ಹೃದಯದ ಸಮಸ್ಯೆ, ರಕ್ತ ಹೆಪ್ಪುಗಟ್ಟುವಿಕೆ ಮೊದಲಾದ ಸಮಸ್ಯೆಗಳು ಕಂಡುಬಂದರೆ, ಈ ಸಾವುಗಳಿಗೆ ಕೋವಿಡ್ ಮೂಲ ಕಾರಣ ಎಂದು ದಾಖಲಿಸಲಾಗುತ್ತದೆ ಎಂದು ಐಸಿಎಂಆರ್ ಹೇಳಿದೆ.
- ರೋಗಲಕ್ಷಣಗಳು ಇದ್ದು, ಪರೀಕ್ಷಾ ಫಲಿತಾಂಶಕ್ಕಾಗಿ ಕಾಯುತ್ತಿರುವ ಸಾವುಗಳನ್ನು ಶಂಕಿತ ಸಾವು ಎಂದು ದಾಖಲಿಸಲಾಗುತ್ತದೆ.
- ಪರೀಕ್ಷಾ ಫಲಿತಾಂಶದಲ್ಲಿ ನೆಗೆಟಿವ್ ಎಂದು ಕಂಡುಬಂದರೂ, ರೋಗಲಕ್ಷಣಗಳನ್ನು ಹೊಂದಿರುವವರನ್ನು 'ಸಾಂಕ್ರಾಮಿಕ ರೋಗಶಾಸ್ತ್ರೀಯವಾಗಿ' ಕೋವಿಡ್ ಸಾವು ಎಂದು ಉಲ್ಲೇಖಿಸಲಾಗುತ್ತದೆ ಎಂದು ಮಾರ್ಗಸೂಚಿ ತಿಳಿಸಿದೆ.
- ಆಸ್ತಮಾ, ದೀರ್ಘಕಾಲದ ಬ್ರಾಂಕೈಟಿಸ್, ಇಸ್ಕೆಮಿಕ್ ಹೃದ್ರೋಗ, ಕ್ಯಾನ್ಸರ್ ಮತ್ತು ಡಯಾಬಿಟಿಸ್ ಮೆಲ್ಲಿಟಸ್‌ನಂತಹ ಕಾಯಿಲೆಗಳು ರೋಗಿಗಳಿಗೆ ಈ ಮೊದಲೇ ಇರಬಹುದು. ಇವು ಕೋವಿಡ್ ರೋಗಿಯಲ್ಲಿ ಉಸಿರಾಟ ಸಮಸ್ಯೆಯನ್ನು ತಂದೊಡ್ಡಿ, ತೀವ್ರ ಕಾಯಿಲೆ ತರಬಲ್ಲವು. ಆದರೆ ಕೋವಿಡ್ ಇಲ್ಲಿ ನೇರ ಕಾರಣ ಆಗಿರುವುದಿಲ್ಲ. ರೋಗಿಯು ಅನೇಕ ಕಾಯಿಲೆಗಳನ್ನು ಹೊಂದಿದ್ದಾಗ, ಸಾವಿಗೆ ಕಾರಣವಾದವುಗಳನ್ನು ಮಾತ್ರ ದಾಖಲಿಸಬೇಕು ಎಂದು ಮಾರ್ಗಸೂಚಿ ತಿಳಿಸಿದೆ.

ಕೇಂದ್ರದ ಪ್ರಮಾಣಪತ್ರ: ಗಂಭೀರ ಅನಾರೋಗ್ಯ ಇರುವ ವ್ಯಕ್ತಿ ಕೋವಿಡ್ ದೃಢಪಟ್ಟ ಬಳಿಕ ಮೃತಪಟ್ಟರೆ ಇದನ್ನು ಕೋವಿಡ್‌ನಿಂದ ಆಗಿರುವ ಸಾವು ಎಂದೇ ಪರಿಗಣಿಸಬೇಕಾಗುತ್ತದೆ ಎಂದು ಸುಪ್ರೀಂ ಕೋರ್ಟ್‌ಗೆ ಕೇಂದ್ರ ಸರ್ಕಾರ ಅಫಿಡವಿಟ್ ಸಲ್ಲಿಸಿದೆ.

ಸಾವಿಗೆ ಅತ್ಯಂತ ಸ್ಪಷ್ಟವಾದ ಬೇರೆ ಕಾರಣ ಇದ್ದಾಗ ಮತ್ತು ಸಾವಿನ ಕಾರಣ ಕೋವಿಡ್ ಅಲ್ಲ ಎಂಬುದು ದೃಢಪಟ್ಟಾಗ ಮಾತ್ರ ಅಂಥ ಪ್ರಕರಣವನ್ನು ಕೋವಿಡ್‌ನಿಂದಾದ ಸಾವು ಎಂದು ಪರಿಗಣಿಸಬೇಕಿಲ್ಲ. ಉದಾಹರಣೆಗೆ ಅಪಘಾತ, ವಿಷ ಸೇವನೆ, ಹೃದಯಾಘಾತದಿಂದ ಮೃತಪಟ್ಟರೆ ಅದನ್ನು ಕೋವಿಡ್ ಸಾವು ಎಂದು ಪರಿಗಣಿಸಬೇಕಿಲ್ಲ ಎಂದು ತಿಳಿಸಲಾಗಿದೆ.

ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ 2020ರ ಮೇ 10ರಂದು ಸಿದ್ಧಪಡಿಸಿದ ಮಾರ್ಗಸೂಚಿಯನ್ನು ಅನುಸರಿಸಬೇಕು. ಅದರ ಉಲ್ಲಂಘನೆಯನ್ನು ಭಾರತೀಯ ದಂಡ ಸಂಹಿತೆ ಸೆಕ್ಷನ್ 188ರ ಅಡಿಯಲ್ಲಿ ಅಪರಾಧ ಕೃತ್ಯ ಎಂದು ಪರಿಗಣಿಸಲಾಗುವುದು ಎಂದು ಸರ್ಕಾರ ತಿಳಿಸಿದೆ. ಕೋವಿಡ್‌ನಿಂದಾದ ಮರಣಕ್ಕೆ ಅದೇ ಕಾರಣದ ಪ್ರಮಾಣಪತ್ರ ನೀಡದೇ ಇದ್ದರೆ ಸಂಬಂಧಪಟ್ಟ ವೈದ್ಯರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಕೇಂದ್ರವು ತಿಳಿಸಿದೆ. ಕೋವಿಡ್ ಸಾವಿನ ವರದಿ ಕುರಿತು ಹೊರಡಿಸಿರುವ ಮಾರ್ಗಸೂಚಿಯನ್ನು ಸರಿಯಾಗಿ ಪಾಲನೆ ಮಾಡಿ ಎಂದು ಕೇಂದ್ರ ಸರ್ಕಾರ ಸೂಚನೆ ನೀಡಿದೆ.

ಆಧಾರ: ರಾಯಿಟರ್ಸ್, ಪಿಟಿಐ, ಬಿಬಿಸಿ

ಪ್ರಧಾನಿ ಜತೆ ಗುರುವಾರ ಕಾಶ್ಮೀರ ಮುಖಂಡರ ಭೇಟಿ

ಶ್ರೀನಗರ (ರಾಯಿಟರ್ಸ್): ಜಮ್ಮು ಕಾಶ್ಮೀರದ ವಿಶೇಷ ಸ್ಥಾನಮಾನವನ್ನು ರದ್ದುಗೊಳಿಸಿದ ಎರಡು ವರ್ಷಗಳ ಬಳಿಕ, ನಾಲ್ವರು ಮಾಜಿ ಮುಖ್ಯಮಂತ್ರಿಗಳೂ ಸೇರಿದಂತೆ 14 ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಪ್ರಧಾನಿ ಮೋದಿ ಅವರನ್ನು ಗುರುವಾರ ಮೊದಲ ಬಾರಿಗೆ ಭೇಟಿಮಾಡುವ ನಿರೀಕ್ಷೆ ಇದೆ.

ರಾಜ್ಯದಲ್ಲಿ ವಿಧಾನಸಭಾ ಚುನಾವಣೆ ನಡೆಸುವುದೂ ಸೇರಿದಂತೆ ರಾಜಕೀಯ ಚಟುವಟಿಕೆಗಳನ್ನು ಆರಂಭಿಸುವ ವಿಚಾರವಾಗಿ ಚರ್ಚಿಸಲು ನೀಡಿರುವ ಆಹ್ವಾನದ ಮೇರೆಗೆ ಈ ಮುಖಂಡರು ದೆಹಲಿಗೆ ಬಂದು ಪ್ರಧಾನಿ ಜತೆ ಮಾತುಕತೆ ನಡೆಸಲಿದ್ದಾರೆ. ರಾಜ್ಯದ ಸ್ವಾಯತ್ತತೆಯನ್ನು ಮರುಸ್ಥಾಪಿಸುವಂತೆ ಅವರು ಪ್ರಧಾನಿಯನ್ನು ಒತ್ತಾಯಿಸಲಿದ್ದಾರೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

'ಜಮ್ಮು ಕಾಶ್ಮೀರದಲ್ಲಿ 2019ರ ಆಗಸ್ಟ್ 5ಕ್ಕೂ ಹಿಂದಿನ ಸ್ಥಿತಿಯನ್ನು ಮರುಸ್ಥಾಪಿಸಬೇಕು ಎಂಬುದು ನಮ್ಮ ಕಾರ್ಯಸೂಚಿಯಾಗಿದೆ' ಎಂದು ಪೀಪಲ್ಸ್ ಡೆಮಾಕ್ರೆಟಿಕ್ ಪಾರ್ಟಿ (ಪಿಡಿಪಿ) ಮುಖ್ಯಸ್ಥೆ ಮೆಹಬೂಬಾ ಮುಫ್ತಿ ಅವರು ಭಾನುವಾರ ಆನ್‌ಲೈನ್‌ನಲ್ಲಿ ನಡೆದಿದ್ದ ಪಕ್ಷದ ನಾಯಕರ ಸಭೆಯಲ್ಲಿ ಹೇಳಿದ್ದಾರೆ ಎಂದು ಸಭೆಯಲ್ಲಿ ಹಾಜರಿದ್ದ ನಾಯಕರು ತಿಳಿಸಿದ್ದಾರೆ.

ನ್ಯಾಷನಲ್ ಕಾನ್ಫರೆನ್ಸ್ (ಎನ್‌ಸಿ) ಮುಖಂಡರೂ ಈಚೆಗೆ ಸಭೆ ನಡೆಸಿ ಇದೇ ತೀರ್ಮಾನ ಕೈಗೊಂಡಿದ್ದಾರೆ. 'ಎರಡು

ಲೋಕಸಭಾಧ್ಯಕ್ಷ ಓಂ ಬಿರ್ಲಾ ಸಭೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಸದೀಯ ಕಾರ್ಯವಿಧಾನದ ಕುರಿತು ಲೋಕಸಭಾಧ್ಯಕ್ಷ ಓಂ ಬಿರ್ಲಾ ಅವರು ಮಂಗಳವಾರ ಎಲ್ಲ ರಾಜ್ಯಗಳ ವಿಧಾನಮಂಡಲಗಳ ಸಭಾಪತಿ ಮತ್ತು ಸಭಾಧ್ಯಕ್ಷರೊಂದಿಗೆ ವರ್ಚುವಲ್ ಸಭೆ ನಡೆಸಲಿದ್ದಾರೆ.

ಈ ಸಭೆಯಲ್ಲಿ ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಭಾಗವಹಿಸಲಿದ್ದಾರೆ. ಓಂ ಬಿರ್ಲಾ ಅವರು ಲೋಕಸಭಾಧ್ಯಕ್ಷರಾಗಿ ಎರಡು ವರ್ಷ ತುಂಬಿದ ಕಾರಣ ತಮ್ಮ ಅನುಭವ ಹಂಚಿಕೊಳ್ಳಲು ಈ ಸಭೆ ಕರೆದಿದ್ದಾರೆ.

ಈ ಸಭೆಯಲ್ಲಿ ಹೊರಟ್ಟಿಯವರು ಸಭಾಪತಿಯಾಗಿ ಸದನ ನಿರ್ವಹಿಸಿದ ಅನುಭವ ಹಾಗೂ ಸಂಸದೀಯ ಕಾರ್ಯ ವಿಧಾನಗಳ ಕುರಿತು ವಿಚಾರ ಮಂಡಿಸಲಿದ್ದಾರೆ. ಅಲ್ಲದೇ, ಕೋವಿಡ್ ಸಂದರ್ಭದಲ್ಲಿ ಸರ್ಕಾರದ ಎಲ್ಲ ನಿಯಮಗಳನ್ನು ಪಾಲಿಸಿ ಸದನ ನಡೆಸಿದ ಕುರಿತು ಅಭಿಪ್ರಾಯ ಹಂಚಿಕೊಳ್ಳಲಿದ್ದಾರೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

4th YEAR REMEMBRANCE

Dr. Mrs. M.P. SHREE
Date of Birth: 16.02.1954 Date of Demise: 22.06.2017
Retd. Prof. (Plant Pathology)
Dept. of Sericulture & Life Sciences,
Bangalore University, Bangalore-54
For lighting the path of success for us to embrace and follow with knowledge, wisdom, values and affection. It's our guiding spirit that has been and will always be the source of inspiration for us.
H.A. Hareesha & H.Pramodini 97403 34325

LOOKING FOR JOB OPPORTUNITY

Refer Classifieds on Wednesday

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು
ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟಿಕ್ಸ್ಟ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಭವಿಷ್ಯ
Astrology

★॥ಕೊಳ್ಳೇಗಾಲದ ಪ್ರಖ್ಯಾತ ಮೋಡಿಮಾಂತ್ರಿಕರು॥★
ನಿಮ್ಮ ಸಮಸ್ಯೆ ಯಾವುದೇಯಿದ್ದರೂ ಶ್ರೀ ಭದ್ರಕಾಳಿದೇವಿಯ ಬಲಿಷ್ಠ ಪೂಜೆಯಿಂದ ಗ್ಯಾರಂಟಿ ಪರಿಹಾರ.
ವಿಶೇಷ ಸೂಚನೆ:
ನಮ್ಮ ಮೋಡಿ ಸಿದ್ಧಾಂತ ತಪ್ಪದು. ಸ್ತ್ರೀ ಮೋಡಿ, ಪುರುಷ ಮೋಡಿಗಾರರು.
ಮೋಡಿ ಕೃಷ್ಣಪ್ಪ.
9880877747

★ಮಂತ್ರದುರ್ಗಿ ಮಾಂತ್ರಿಕರು★ ಕೇರಳ, ಕೊಳ್ಳೇಗಾಲದ ಮಂತ್ರಸಿದ್ಧ ವಾಕ್ಸಿದ್ಧಿಯಿಂದ ಸ್ತ್ರೀಪುರುಷ ವಶೀಕರಣ ಕೆಲವೇ ಗಂಟೆಗಳಲ್ಲಿ.ಫೋನಿನ ಮೂಖಾಂತರ ಶಾಶ್ವತ ಪರಿಹಾರ. (ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್)
ಪಂ.ರಾಮಚಂದ್ರಭಟ್.
9008711329

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೇಷಲಿಸ್ಟ್ 100% ಗ್ಯಾರಂಟಿ ಪರಿಹಾರ
ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಉಚಿತ ಪರಿಹಾರ
ಶ್ರೀಕ್ಷೇತ್ರ ಧರ್ಮಸ್ಥಳ.
7022443071

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ಉದ್ಯೋಗಾವಕಾಶ
General

WORK FROM HOME
ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ.
8884875553/
8884875554

TATA ಮೋಟರ್ಸ್, TOYOTA, ಬ್ರಿಟಾನಿಯಾ ಆನ್‌ಲೈನ್ ಕಂಪೆನಿಗಳಿಗೆ SSLC, PUC,Degree, ITI ನವರು ನೇರನೇಮಕಾತಿ 16,800-56,000/- ವಸತಿಯೂಟವಿದೆ. 7204853296, 7204396011

ಕರ್ನಾಟಕದಾದ್ಯಂತ ಪುನರಾರಂಭವಾಗಿರುವ ಪ್ರಸಿದ್ಧಕಂಪನಿ ಹಾಗೂ ಆಫೀಸ್ ಕೆಲಸಗಳಿಗೆಯುವಕ ಯುವತಿಯರು ಬೇಕಾಗಿದ್ದಾರೆ ವಸತಿಯೂಟದೊಂದಿಗೆ Salary+OT 16,800-45000/-.8792155097, 8792156697

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ.ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ವೈವಾಹಿಕ
Brides Wanted

Bride Required Others

MIDDLE AGE looking divorcee retired Govt. Professor, Bengaluru, 5.4, 61kg, Caste no bar, Resume to 9448377863.

ವಾಹನ
Four Wheelers Selling

Others

ಟಾಟಾ Intra V30
ದೊಡ್ಡ ಗಾಡಿಯ ಲೋಡ್ ಅಧಿಕ ಆದಾಯ
TATA INTRA ವಾಹನದ ಮೇಲೆ ಆಕರ್ಷಕ ಕೊಡುಗೆಗಳೊಂದಿಗೆ

ಇಂದೇ ಕೊಳ್ಳಿರಿ ನಿಮ್ಮ ಮಾಸಿಕ ಕಂತನ್ನು 2 ತಿಂಗಳ* ನಂತರ ಪ್ರಾರಂಭಿಸಿ
₹25,000/-* ದವರೆಗೆ ಗ್ರಾಹಕರ ಕೊಡುಗೆಗಳು ಎಕ್ಸ್‌ಚೇಂಜ್ ₹20,000/-* ದವರೆಗೆ
ಹೆಚ್ಚಿನ ವಿವರಗಳಿಗಾಗಿ ಕರೆಮಾಡಿ
Bangalore/Mysore 95389 35533
Bangalore 7259784441
Tumkur/Davanagere/Chitradurga 98950 23373
Mangalore/Shivamogga/Udupi/Hassan/Chikkamagalur/Karwar 96208 63338
Hubli/Haveri/Gadag/Bellary/Raichur - 96209 55858
Bagalkot/Bijapur/Gulbarga/Bidar - 73899 44057
Hubli/Belgaum- 91088 64572
* ಷರತ್ತುಗಳು ಅನ್ವಯಿಸುತ್ತವೆ.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಲೈಫ್ ಸಪೋರ್ಟ್ ಸಾಧನಗಳೊಂದಿಗೆ
TATA WINGER
AIS 125 Part 1 Compliant

ಟಾಟಾ ಮೋಟಾರ್ಸ್‌ರವರಿಂದ ಸಾಂಕ್ರಾಮಿಕ ಖಾಯಿಲೆಯ ಈ ಅವಧಿಯಲ್ಲಿ ದೇಶಕ್ಕೆ ಉತ್ತಮ ಸೇವೆ ಒದಗಿಸಲು ಆಂಬ್ಯುಲೆನ್ಸ್‌ಗಳನ್ನು ಸಿದ್ಧಪಡಿಸಲಾಗಿದೆ
ಪ್ರಾರಂಭಿಕ ಬೆಲೆ Rs14.21* ಲಕ್ಷದಿಂದ
ಆಂಬ್ಯುಲೆನ್ಸ್ GST ದರದಲ್ಲಿ ಇಳಿಕೆ 28% ರಿಂದ 12% ಗೆ
ಒಳಾಂಗಣದ ವಿಶೇಷಗಳು

ಆಕ್ಸಿಜನ್ ಡೆಲಿವರಿ ಸಿಸ್ಟಮ್

95%* ದವರೆಗೆ ಸಾಲ ಸೌಲಭ್ಯ
3 ವರ್ಷ/3 ಲಕ್ಷ ಕಿ.ಮೀ ವಾರಂಟಿ
ಹೆಚ್ಚಿನ ವಿವರಗಳಿಗಾಗಿ ಕರೆಮಾಡಿ
Bangalore/Hassan / Dakshina Kannada/Udupi/Chikamagalur/Madiker/Karwar/Mysore/Mandya/Chamrajnagar : 95387 84422
Tumkur/Chitradurga/Davanagere/Bellary/Hospet/Gangavathi/Raichur : 89398 22317
Belgaum/Hubli/Dharwad/Sirsi/Haveri/Gadag/Bagalkot/Bijapur/Gulbarga/Bidar : 95130 66621
* ಷರತ್ತುಗಳು ಅನ್ವಯಿಸುತ್ತವೆ.

DH Classifieds
BOOK YOUR AD FOR SUNDAY & GET 50% OFF ON WEEKDAYS
For Lineage & Single/ Multi Column Classifieds Display ads
For more information contact:
9880856233 /9845114560
9886213331

ಈಶ್ವರಹಳ್ಳಿಯ ಬಾಲಕ ನಿರಂಜನ್‌ನ ನೋವಿನ ನುಡಿ

'ಅಪ್ಪನೂ ಬಿಟ್ಟು ಹೋಗ್ಬುಟ್ರು'

• ಬಿ.ಜೆ.ಧನ್ಯಪ್ರಸಾದ್

ಮಕ್ಕಳ ಆಸರೆ ಕಸಿದ ಕೊರೊನಾ

ಚೆನ್ನಾಗಿ ವಿದ್ಯಾಭ್ಯಾಸ ಮಾಡಿ, ಅಪ್ಪನ ಕನಸನ್ನು ನನಸಾಗಿಸುತ್ತೇನೆ. ಏರೋನಾಟಿಕಲ್ ಎಂಜಿನಿಯರ್ ಆಗಬೇಕು ಎಂಬ ಗುರಿ ಇದೆ.
ನಿರಂಜನ್, ಈಶ್ವರಹಳ್ಳಿ ಬಾಲಕ

ಚಿಕ್ಕಮಗಳೂರು: 'ಎರಡು ವರ್ಷದವನಿದ್ದಾಗಲೇ ಅಮ್ಮ ತೀರಿಕೊಂಡ್ರು. ಕೋವಿಡ್‌ನಿಂದ ಕಳೆದ ತಿಂಗಳು ಅಪ್ಪನೂ ಹೋಗ್ಬುಟ್ರು. ಬದುಕಿನ ಹಾದಿಯೇ ಕುಸಿದಂತಾಗಿದೆ..'

ಇದು ಪೋಷಕರನ್ನು ಕಳೆದುಕೊಂಡ ಚಿಕ್ಕಮಗಳೂರು ತಾಲ್ಲೂಕಿನ ಈಶ್ವರಹಳ್ಳಿ ಬಾಲಕ ನಿರಂಜನ್‌ನ ನೋವಿನ ನುಡಿಗಳು. 13 ವರ್ಷದ ಈ ಬಾಲಕ ಬಾಳೆಹೊನ್ನೂರಿನ ಸೀಗೋಡಿನ ನವೋದಯ ವಿದ್ಯಾಲಯದ 9ನೇ ತರಗತಿ ವಿದ್ಯಾರ್ಥಿ.

ನಿರಂಜನ್ ತಂದೆ ರಂಗಸ್ವಾಮಿ (58) ಅವರು ಮೇ 23ರಂದು ಜಿಲ್ಲಾಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾರೆ. ಮೇಟಿಯನ್ನು ಕಳೆದುಕೊಂಡು ಕುಟುಂಬ ಸಂಕಷ್ಟದ ಸುಳಿಗೆ ಸಿಲುಕಿದೆ.

'ಅಪ್ಪ ಕೂಲಿ ಮಾಡಿಕೊಂಡಿದ್ದರು. ಮನೆಗೆ ಅವರೇ ಆಧಾರ ಸ್ತಂಭವಾಗಿದ್ದರು. ನನ್ನನ್ನು ಚೆನ್ನಾಗಿ ಓದಿಸಬೇಕು ಎಂಬ ಕನಸು ಕಂಡಿದ್ದರು. ಆದರೆ, ಬದುಕಿನ ಅರ್ಧ ದಾರಿಯಲ್ಲೇ ತಬ್ಬಲಿ ಮಾಡಿ ಹೋಗ್ಬಿಟ್ರು. ಅಪ್ಪನಿಗೆ ಶೀತ, ಕೆಮ್ಮು ಕಾಣಿಸಿಕೊಂಡಿತ್ತು. ಆಸ್ಪತ್ರೆಗೆ ಕರೆದೊಯ್ದಿದ್ದೆವು. ವಾಪಸ್ ಮನೆಗೆ ಬರಲೇ ಇಲ್ಲ' ಎಂದು ನಿರಂಜನ್ ದುಃಖ ತೋಡಿಕೊಂಡರು.

ರಂಗಸ್ವಾಮಿ ಅವರಿಗೆ ಇಬ್ಬರು ಪತ್ನಿಯರು. ಮೊದಲ ಪತ್ನಿ ಶಾಂತಮ್ಮ. ಮೇಘನಾ ಮತ್ತು ನಿರಂಜನ್ ಈ ದಂಪತಿ ಮಕ್ಕಳು. ಶಾಂತಮ್ಮ ಅವರು 2010ನೇ ಇಸವಿಯಲ್ಲಿ ಮೃತಪಟ್ಟಿದ್ದಾರೆ. ಮೇಘನಾ ಮತ್ತು ಬೇಲೂರಿನ ಬಸವರಾಜು ಮದುವೆಯಾಗಿ, ಒಡಿಶಾ ರಾಜ್ಯದ ಗುಣಪುರದಲ್ಲಿ ಬೇಕರಿ ಇಟ್ಟುಕೊಂಡಿದ್ದಾರೆ. ರಂಗಸ್ವಾಮಿ ಅವರ ಮತ್ತೊಬ್ಬ ಪತ್ನಿ ಇಂದಿರಮ್ಮ. ಅವರಿಗೂ ಒಬ್ಬ ಪುತ್ರ ಇದ್ದಾನೆ.

'ಕೋವಿಡ್ ತಗುಲಿ ಅಪ್ಪ ಸಾವಿಗೀಡಾದರು. ಸಹೋದರ ನಿರಂಜನ್‌ನನ್ನು ಸದ್ಯಕ್ಕೆ ಗುಣಪುರದಲ್ಲಿ ನಮ್ಮ ಜೊತೆ ಇಟ್ಟುಕೊಂಡಿದ್ದೇನೆ. ಶಾಲೆ ಆರಂಭವಾದರೆ ಅವನನ್ನು ಸೀಗೋಡಿಗೆ ಕಳಿಸುತ್ತೇನೆ. ನನಗೆ ಇಬ್ಬರು ಮಕ್ಕಳು ಇದ್ದಾರೆ. ತಮ್ಮನ ಜವಾಬ್ದಾರಿಯೂ ಹೆಗಲಿಗಿದೆ. ನಮ್ಮದು ಬಡ ಕುಟುಂಬ. ಸಹೋದರನಿಗೆ ಒಳ್ಳೆಯ ಭವಿಷ್ಯ ರೂಪಿಸಲು ದಾನಿಗಳು ಆಸರೆಯಾದರೆ ಅನುಕೂಲವಾಗುತ್ತದೆ' ಎಂದು ಮೇಘನಾ ವಿನಂತಿಸಿಕೊಂಡರು.

'ಸಚಿವರಿಗೆ ₹5 ಲಕ್ಷ ಮಾಮೂಲು': ಅಧಿಕಾರಿ ಹೇಳಿಕೆ ಆಡಿಯೊ ವೈರಲ್

ಪ್ರಜಾವಾಣಿ ವಾರ್ತೆ

ಕೊಪ್ಪಳ: 'ಅಬಕಾರಿ ಸಚಿವರಿಗೆ ಪ್ರತಿ ಜಿಲ್ಲೆಯಿಂದ ₹5 ಲಕ್ಷ ನೀಡಬೇಕು' ಎಂದು ಮಹಿಳಾ ಅಧಿಕಾರಿಯೊಬ್ಬರು ಕಿರಿಯ ಅಧಿಕಾರಿಯೊಂದಿಗೆ ಮಾತನಾಡಿದ್ದಾರೆ ಎನ್ನಲಾದ ಆಡಿಯೊ ವೈರಲ್ ಆಗಿದೆ.

'ಜಿಲ್ಲಾ ಅಬಕಾರಿ ಉಪ ಆಯುಕ್ತೆ ಸಿ.ಸೆಲೀನಾ ಅವರು ಇನ್‌ಸ್ಪೆಕ್ಟರ್ ಅಜಯ್ ಎಂಬುವರ ಜೊತೆ ಒಂದು ತಿಂಗಳ ಹಿಂದೆ ಮಾತನಾಡಿದ್ದರು ಎನ್ನಲಾದ ಆಡಿಯೊ ಇದಾಗಿದೆ. ಇದು ಮೇಲಾಧಿಕಾರಿಗಳ ಗಮನಕ್ಕೆ ಬಂದು ಕರ್ತವ್ಯ ಲೋಪದ ಆರೋಪದ ಮೇಲೆ ನಾಲ್ವರನ್ನು ಅಮಾನತು ಮಾಡಲಾಗಿದೆ' ಎಂಬುದು ಮೂಲಗಳ ಮಾಹಿತಿ.

'ಅಮಾನತುಗೊಂಡ ಇನ್‌ಸ್ಪೆಕ್ಟರ್ ಆಡಿಯೊವನ್ನು ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿದ್ದು, ಅದು ವೈರಲ್ ಆಗಿದ್ದರಿಂದ ಪ್ರಕರಣ ಬೆಳಕಿಗೆ ಬಂದಿದೆ' ಎನ್ನುವುದು ಮೂಲಗಳ ಹೇಳಿಕೆ.

'ಕಂದಾಯ ಇಲಾಖೆ ಅಧಿಕಾರಿಗಳ ವರದಿ ಆಧರಿಸಿ ಅಬಕಾರಿ ಜಂಟಿ ಆಯುಕ್ತರು ನಾಲ್ವರ ಅಧಿಕಾರಿಗಳನ್ನು ಅಮಾನತುಗೊಳಿಸಿದ್ದಾರೆ. ಆಡಿಯೊ ಬಗ್ಗೆ ನನಗೇನೂ ಗೊತ್ತಿಲ್ಲ' ಎಂದು ಅಬಕಾರಿ ಇಲಾಖೆ ಜಿಲ್ಲಾ ಉಪ ಆಯುಕ್ತೆ ಸಿ.ಸೆಲೀನಾ ಪ್ರತಿಕ್ರಿಯಿಸಿದರು.

ಮಕ್ಕಳಿಗೆ ಪ್ರತ್ಯೇಕ ಕೋವಿಡ್ ಆರೈಕೆ ಕೇಂದ್ರ: ಜೊಲ್ಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್ ಮೂರನೇ ಅಲೆ ಎದುರಿಸಲು ರಾಜ್ಯದ ಪ್ರತಿ ತಾಲ್ಲೂಕಿನಲ್ಲಿ ಮಕ್ಕಳಿಗಾಗಿ ಪ್ರತ್ಯೇಕ ಕೋವಿಡ್ ಆರೈಕೆ ಕೇಂದ್ರ ಮಾಡಲಾಗಿದೆ' ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಶಶಿಕಲಾ ಜೊಲ್ಲೆ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, 'ರಾಜ್ಯದಲ್ಲಿ ಕಳೆದೊಂದು ವರ್ಷದಲ್ಲಿ (2020 ಮಾರ್ಚ್‌ನಿಂದ 2021 ಮೇ) ಕೋವಿಡ್‌ನಿಂದ 117 ಮಕ್ಕಳು ಮೃತಪಟ್ಟಿದ್ದಾರೆ. 50 ಮಕ್ಕಳು ಪೋಷಕರನ್ನು ಕಳೆದುಕೊಂಡು ಅನಾಥರಾಗಿದ್ದು, ಈ ಪೈಕಿ, ಇಬ್ಬರು ತಂದೆ ಮತ್ತು



ತಾಯಿಯನ್ನು ಕಳೆದುಕೊಂಡಿದ್ದಾರೆ' ಎಂದರು.

'ಕೋವಿಡ್‌ನಿಂದ ಅನಾಥರಾದ ಮಕ್ಕಳಿಗೆ ಮುಖ್ಯಮಂತ್ರಿ ಬಾಲಸೇವಾ ಯೋಜನೆ ಮೂಲಕ ಸಹಾಯಧನ ನೀಡಲಾಗುವುದು. ಮಕ್ಕಳನ್ನು ನೋಡಿಕೊಳ್ಳಲು ಸಂಬಂಧಿಗಳು ಶಕ್ತರಿಲ್ಲದಿದ್ದರೆ ಇಲಾಖೆ ಮೂಲಕ ದತ್ತು ಸ್ವೀಕರಿಸಲಾಗುವುದು. ಅಂಥ ಮಕ್ಕಳ ಭವಿಷ್ಯ ರೂಪಿಸಲು ದಾನಿಗಳು ಮುಂದೆ ಬಂದರೆ, ಇಲಾಖೆ ಕೊಂಡಿಯಾಗಿ ಕೆಲಸ ಮಾಡಲಿದೆ' ಎಂದರು.

ಶಶಿಕಲಾ ಜೊಲ್ಲೆ

'ಕೋವಿಡ್ ಮೂರನೇ ಅಲೆ ನಿಯಂತ್ರಿಸಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಆರೋಗ್ಯ, ಶಿಕ್ಷಣ, ಗ್ರಾಮೀಣಾಭಿವೃದ್ಧಿ ಮತ್ತು ಪೊಲೀಸ್ ಇಲಾಖೆ ಮಕ್ಕಳನ್ನು ಗುರುತಿಸುವ ಕೆಲಸ ಮಾಡುತ್ತಿದೆ. ಸೋಂಕು ದೃಢಪಟ್ಟ ಮಕ್ಕಳ ಜೊತೆ ತಾಯಿಯೂ ಕೋವಿಡ್ ಆರೈಕೆ ಕೇಂದ್ರದಲ್ಲಿ ಇರಲು ಅವಕಾಶ ನೀಡಲಾಗಿದೆ. ಯುವತಿಯರಿಗೆ ಮತ್ತು ಅಂಗವಿಕಲರಿಗೆ ಪ್ರತ್ಯೇಕ ವ್ಯವಸ್ಥೆ ಮಾಡಲಾಗುವುದು' ಎಂದರು.

ಮಕ್ಕಳ ಕೋವಿಡ್ ಆಸ್ಪತ್ರೆಗೆ ಚಿಂತನೆ: 'ಬೆಂಗಳೂರು ನಗರ ಜಿಲ್ಲೆಯಲ್ಲಿ ಮಕ್ಕಳಿಗಾಗಿಯೇ ಪ್ರತ್ಯೇಕ ಕೋವಿಡ್ ಆಸ್ಪತ್ರೆ ತೆರೆಯುವಂತೆ ಸಲಹೆ ಬಂದಿದೆ. ಈ ಕುರಿತು ಮುಖ್ಯಮಂತ್ರಿ ಜೊತೆ ಚರ್ಚಿಸಿ ತೀರ್ಮಾನಿಸಲಾಗುವುದು' ಎಂದರು.

'ಅಂಗನವಾಡಿ ಕಾರ್ಯಕರ್ತೆಯರು ಮುಂಚೂಣಿ ಕಾರ್ಯಕರ್ತೆಯರಾಗಿ ಕೆಲಸ ಮಾಡುತ್ತಿದ್ದು, ಕೋವಿಡ್‌ನಿಂದ ನಿಧನ ಹೊಂದಿದರೆ ₹ 30 ಲಕ್ಷ ಪರಿಹಾರ ನೀಡಲಾಗುತ್ತದೆ. ಕಳೆದೊಂದು ವರ್ಷದಲ್ಲಿ 20 ಅಂಗನವಾಡಿ ಕಾರ್ಯಕರ್ತೆಯರು ಮೃತಪಟ್ಟಿದ್ದು, 15 ಮಂದಿಗೆ ಪರಿಹಾರ ವಿತರಿಸಲಾಗಿದೆ' ಎಂದರು.

'ರಾಜ್ಯದಲ್ಲಿ 4,47 ಲಕ್ಷ ಅಪೌಷ್ಟಿಕ ಮಕ್ಕಳಿದ್ದಾರೆ. 7,751 ಮಕ್ಕಳು ತೀವ್ರ ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ. 855 ಪೋಕ್ಸೊ ಪ್ರಕರಣಗಳಿಗೆ ಎಫ್‌ಐಆರ್ ದಾಖಲಾಗಿದೆ. ಕಳೆದೊಂದು ವರ್ಷದಲ್ಲಿ 3,589 ಬಾಲ್ಯವಿವಾಹದ ದೂರುಗಳು ಬಂದಿದ್ದು, ಆ ಪೈಕಿ 3,277 ತಡೆಯಲಾಗಿದೆ. 208 ಪ್ರಕರಣಗಳಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ' ಎಂದು ವಿವರಿಸಿದರು.

ಪ್ರಶ್ನೆಯೊಂದಕ್ಕೆ ಉತ್ತರಿಸಿದ ಸಚಿವರು, 'ರಾಜ್ಯದಲ್ಲಿ 30 ಮಕ್ಕಳ ಮೇಲೆ ಲಸಿಕೆ ಪ್ರಯೋಗ ಮಾಡಲಾಗಿದೆ' ಎಂದರು.

ಶಾಲಾ ಶುಲ್ಕ: ಸಮಿತಿ ರಚಿಸುವ ಪ್ರಸ್ತಾವ

ಬೆಂಗಳೂರು: ಶಾಲಾ ಶುಲ್ಕದ ಗೊಂದಲ ಪರಿಹರಿಸಲು ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ಸಮಿತಿ ರಚಿಸುವ ಪ್ರಸ್ತಾವವನ್ನು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ಸಲ್ಲಿಸಿದೆ.

ಖಾಸಗಿ ಶಾಲೆಗಳು ಪಡೆಯುತ್ತಿರುವ ಶುಲ್ಕದಲ್ಲಿ ಶೇ 30ರಷ್ಟು ಕಡಿತ ಮಾಡಿದ್ದ ಸರ್ಕಾರದ ಆದೇಶ ಪ್ರಶ್ನಿಸಿ ಸಲ್ಲಿಕೆಯಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ ಪ್ರತಿಕ್ರಿಯೆಯಾಗಿ ಮಧ್ಯಂತರ ಅರ್ಜಿಯನ್ನು(ಐ.ಎ) ಸರ್ಕಾರ ಸಲ್ಲಿಸಿದೆ.

ಮಧ್ಯಂತರ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸಚಿನ್ ಶಂಕರ್ ಮಗದಮ್ ಅವರಿದ್ದ ಪೀಠ, ಆಕ್ಷೇಪಣೆ ಸಲ್ಲಿಸಲು ಖಾಸಗಿ ಶಾಲಾ ಆಡಳಿತ ಮಂಡಳಿಗಳನ್ನು ಪ್ರತಿನಿಧಿಸುವ ಸಂಘಗಳಿಗೆ ಸಮಯಾವಕಾಶ ನೀಡಿದೆ. ವಿಚಾರಣೆಯನ್ನು ಜೂ.29ಕ್ಕೆ ಮುಂದೂಡಿದೆ.

'ಪೋಷಕರು, ಆಡಳಿತ ಮಂಡಳಿಯವರು ಸೇರಿ ಎಲ್ಲಾ ಸಹಭಾಗಿದಾರರ ಅಭಿಪ್ರಾಯ ಪಡೆದು ಶುಲ್ಕ ನಿಗದಿ ಬಗ್ಗೆ ಶಿಫಾರಸು ಮಾಡಲು ರಾಜ್ಯ ಸರ್ಕಾರ ಮಧ್ಯಂತರ ಅರ್ಜಿಯಲ್ಲಿ ಕೋರಿತ್ತು. ಕೋವಿಡ್ ಎರಡನೇ ಅಲೆ ಗಮನದಲ್ಲಿಟ್ಟುಕೊಂಡು ಶುಲ್ಕ ಕಡಿತ ನಿರ್ಧಾರವನ್ನು 2021-22ನೇ ಸ

ಯೋಗದಲ್ಲಿ ಓಂ ಪಠಣ: ಕಾಂಗ್ರೆಸ್ ಟ್ವೀಟ್‌ಗೆ ಬಿಜೆಪಿ ಟೀಕೆ

‘ಟೀಕೆಯಿಂದ ಯೋಗದ ಹಿರಿಮೆ ಕಡಿಮೆಯಾಗದು’

ಇಂದೋರ್ (ಪಿಟಿಐ): ಯೋಗ ಕುರಿತು ಸೋಮವಾರ ಟ್ವೀಟ್ ಮಾಡಿರುವ ಕಾಂಗ್ರೆಸ್‌ನ ಹಿರಿಯ ನಾಯಕ ಅಭಿಷೇಕ್ ಮನು ಸಿಂಘ್ವಿ ಅವರು, ‘ಓಂ ಎಂದು ಪಠಣ ಮಾಡುವುದರಿಂದಾಗಿ ಯೋಗದ ಶಕ್ತಿ ಹೆಚ್ಚಾಗದು, ಅಂತೆಯೇ, ಅಲ್ಲಾಹ್ ಎನ್ನುವ ಮೂಲಕ ಯೋಗದ ಶಕ್ತಿ ಕಡಿಮೆಯಾಗುವುದೂ ಇಲ್ಲ’ ಎಂದಿದ್ದಾರೆ.

ಅಭಿಷೇಕ್ ಮನು ಸಿಂಘ್ವಿ

ಇದಕ್ಕೆ ಪ್ರತಿಕ್ರಿಯಿಸಿರುವ ಬಿಜೆಪಿಯ ಹಿರಿಯ ನಾಯಕ ಕೈಲಾಶ್ ವಿಜಯವರ್ಗೀಯ ಅವರು, ‘ಕೆಲವು ಸಣ್ಣ ನಾಯಕರು ಟೀಕೆ ಮಾಡಿದಾಕ್ಷಣ ಯೋಗದ ಹಿರಿಮೆ ಕಡಿಮೆಯಾಗುವುದಿಲ್ಲ’ ಎಂದು ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಸೋಮವಾರ ಮಾತನಾಡಿದ ಅವರು, ‘ಕೆಲವು ವಿಷಯಗಳ ಬಗ್ಗೆ ರಾಜಕೀಯ ಮಾಡುವ ಮೂಲಕ ಸಂಕುಚಿತ ಮನಃಸ್ಥಿತಿ ಪ್ರದರ್ಶಿಸುವುದು ಸೂಕ್ತವಲ್ಲ’ ಎಂದೂ ಅವರು ಹೇಳಿದ್ದಾರೆ.

‘ವಿಶ್ವಸಂಸ್ಥೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ನೀಡಿದ ಒಂದು ಕರೆಯಿಂದಾಗಿ ಇಡೀ ವಿಶ್ವವೇ ಯೋಗ ದಿನವನ್ನು ಆಚರಿಸುತ್ತಿದೆ. ಅಂಥದ್ದರ ನಡುವೆ ಇಂಥ ಸಣ್ಣ ನಾಯಕರ ಟ್ವೀಟ್‌ನಿಂದಾಗಿ ಯೋಗದ ಹಿರಿಮೆ ಕಡಿಮೆಯಾಗುವುದಿಲ್ಲ’ ಎಂದಿದ್ದಾರೆ. ಇದಕ್ಕೂ ಮುನ್ನ ಇಂದೋರ್‌ನಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ವಿಜಯವರ್ಗೀಸ್ ಅವರು ಯೋಗಾಭ್ಯಾಸ ಮಾಡಿದರು. ಗಡಿ ಭದ್ರತಾ ಪಡೆ (ಬಿಎಸ್‌ಎಫ್) ಮತ್ತು ಸೆಂಟ್ರಲ್ ಸ್ಕೂಲ್ ಆಫ್ ವೆಪನ್ಸ್ ಅಂಡ್ ಟ್ಯಾಕ್ಟಿಕ್ಸ್ (ಸಿಎಸ್‌ಡಬ್ಲ್ಯುಟಿ) ಆಯೋಜಿಸಿದ್ದ ಯೋಗ ದಿನದ ಕಾರ್ಯಕ್ರಮದಲ್ಲಿ ಮಧ್ಯಪ್ರದೇಶದ ಜಲಸಂಪನ್ಮೂಲ ಸಚಿವ ತುಳಸೀರಾಂ ಸಿಲಾವತ್ ಅವರು ಯೋಗಾಭ್ಯಾಸ ಮಾಡಿದರು.

‘ಧರ್ಮದ ಬೌಕಟ್ಟಿಗೆ ಸೀಮಿತ ಆಗಬಾರದು’

ತಿರುವನಂತಪುರ (ಪಿಟಿಐ): ಯೋಗವನ್ನು ಆರೋಗ್ಯ ರಕ್ಷಣೆಯ ರೂಪವೆಂದು ಕರೆದಿರುವ ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್, ಯೋಗ ಯಾವುದೇ ಧರ್ಮದ ಬೌಕಟ್ಟಿಗೆ ಸೀಮಿತವಾಗಿ ಇರಬಾರದು. ಇದರಿಂದಾಗಿ ಹಲವರು ಯೋಗದ ಪ್ರಯೋಜನಗಳಿಂದ ವಂಚಿತರಾಗಬಹುದು ಎಂದು ಹೇಳಿದ್ದಾರೆ.

‘ಆಧುನಿಕ ಯೋಗವನ್ನು ನಾವು ಯಾವುದೇ ಧರ್ಮ ಮತ್ತು ಆಧ್ಯಾತ್ಮಿಕತೆಗೆ ಸಂಬಂಧಿಸಿದ ವಿಷಯದಂತೆ ನೋಡಬಾರದು. ಯೋಗವು ದೈಹಿಕ ಮತ್ತು ಮಾನಸಿಕ ಸ್ವಾಸ್ಥ್ಯಕ್ಕೆ ಉತ್ತಮ. ಯೋಗವನ್ನು ಜನರು ತಮ್ಮ ದೈನಂದಿನ ಜೀವನದಲ್ಲಿ ಅಳವಡಿಸಿಕೊಳ್ಳಬೇಕು’ ಎಂದು ಅವರು ವಿಡಿಯೊ ಸಂದೇಶವೊಂದರಲ್ಲಿ ಹೇಳಿದ್ದಾರೆ.

ಯೋಗ ವಿಜ್ಞಾನವನ್ನು ‘ಜಾತ್ಯತೀತ ಸ್ವರೂಪ’ದಲ್ಲಿ ಪ್ರಚಾರ ಮಾಡುತ್ತಿರುವ ಕೇರಳ ಯೋಗ ಸಂಘದ (ಕೆವೈಎ) ಪ್ರಯತ್ನಕ್ಕೆ ಪಿಣರಾಯಿ ವಿಜಯನ್ ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ಸಂಕ್ಷಿಪ್ತ ಸುದ್ದಿ

ಅಮರನಾಥ ಯಾತ್ರೆ ಈ ವರ್ಷವೂ ಸಾಂಕೇತಿಕ ಆಚರಣೆ

ಶ್ರೀನಗರ: ‘ಕೋವಿಡ್-19 ಸಾಂಕ್ರಾಮಿಕದ ಕಾರಣ ವಾರ್ಷಿಕ ಅಮರನಾಥ ಯಾತ್ರೆಯನ್ನು ಈ ವರ್ಷವೂ ಸಾಂಕೇತಿಕವಾಗಿ ಆಯೋಜಿಸಲಾಗುವುದು’ ಎಂದು ಜಮ್ಮು-ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ತಿಳಿಸಿದ್ದಾರೆ.

3,880 ಮೀಟರ್ ಎತ್ತರದಲ್ಲಿನ ನೈಸರ್ಗಿಕ ಮಂಜಿನ ಶಿವಲಿಂಗ ದರ್ಶನದ ಯಾತ್ರೆಯು 56 ದಿನ ಇರಲಿದೆ. ಜೂನ್ 28ರಂದು ಯಾತ್ರೆ ಆರಂಭವಾಗಲಿದ್ದು, ಆಗಸ್ಟ್ 22ರಂದು ಅಂತ್ಯವಾಗಲಿದೆ.

ಧಾರ್ಮಿಕ ಕೇಂದ್ರದಲ್ಲಿ ಬೆಳಿಗ್ಗೆ ಮತ್ತು ಸಂಜೆ ನಡೆಯುವ ಆರತಿಯನ್ನು ಭಕ್ತಾಧಿಗಳು ವರ್ಚುಯಲ್ ರೂಪದಲ್ಲಿ ವೀಕ್ಷಿಸಲು ಆಗುವಂತೆ ಅಧಿಕಾರಿಗಳು ಕ್ರಮವಹಿಸಬೇಕು ಎಂದು ತಿಳಿಸಿದರು.

ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ ಮಮತಾ ಬ್ಯಾನರ್ಜಿ

ನವದೆಹಲಿ (ಪಿಟಿಐ): ನಾರದಾ ಸ್ಟಿಂಗ್ ಪ್ರಕರಣದಲ್ಲಿ ಪ್ರಮಾಣಪತ್ರವನ್ನು ಸಲ್ಲಿಸಲು ತಮಗೆ ಅವಕಾಶವನ್ನು ನಿರಾಕರಿಸಿದ ಕಲ್ಕತ್ತ ಹೈಕೋರ್ಟ್‌ನ ತೀರ್ಮಾನವನ್ನು ಪ್ರಶ್ನಿಸಿ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಸುಪ್ರೀಂ ಕೋರ್ಟ್‌ನ ಮೆಟ್ಟಿಲೇರಿದ್ದಾರೆ.

ಪ್ರಕರಣ ಸಂಬಂಧ ತೃಣಮೂಲ ಕಾಂಗ್ರೆಸ್‌ನ ನಾಲ್ವರು ಮುಖಂಡರನ್ನು ಬಂಧಿಸಲು ಸಿಬಿಐ ಮುಂದಾಗಿದ್ದ ಮೇ 17ರಂದು ತಮ್ಮ ಪಾತ್ರ ಕುರಿತು ಪ್ರಮಾಣಪತ್ರ ಸಲ್ಲಿಸಲು ಮಮತಾ ಬ್ಯಾನರ್ಜಿ ಮತ್ತು ರಾಜ್ಯದ ಕಾನೂನು ಸಚಿವ ಮೊಲೊಯ್ ಘಾಟಕ್ ಅವರಿಗೆ ಹೈಕೋರ್ಟ್ ಅವಕಾಶ ನಿರಾಕರಿಸಿತ್ತು. ಮಂಗಳವಾರ ವಿಚಾರಣೆ ನಡೆಯಲಿದೆ.

ಮೂವರು ಎಲ್‌ಇಟಿ ಉಗ್ರರ ಹತ್ಯೆ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದ ಬಾರಾಮುಲ್ಲಾ ಜಿಲ್ಲೆಯಲ್ಲಿ ನಡೆಸಿದ ಎನ್‌ಕೌಂಟರ್‌ನಲ್ಲಿ ಉಗ್ರ ಮುದಾಸಿರ್ ಪಂಡಿತ್ ಸೇರಿದಂತೆ ಲಷ್ಕರ್-ಎ-ತಯಬಾ ಉಗ್ರ ಸಂಘಟನೆಯ ಮೂವರು ಉಗ್ರರನ್ನು ಹತ್ಯೆ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮಾರ್ಚ್ 29ರಂದು ಸೋಪೋರ್‌ನಲ್ಲಿ ನಡೆದ ದಾಳಿಯಲ್ಲಿ ಇವರ ಕೈವಾಡವಿತ್ತು. ಆ ದಾಳಿಯಲ್ಲಿ ಇಬ್ಬರು ಮುನ್ಸಿಪಲ್ ಕೌನ್ಸಿಲರ್‌ಗಳು ಮತ್ತು ಒಬ್ಬ ಪೊಲೀಸ್ ಹತರಾಗಿದ್ದರು. ಜೂನ್ 12ರಂದು ನಡೆದಿದ್ದ ಮತ್ತೊಂದು ದಾಳಿಯಲ್ಲಿಯೂ ಇವರ ಕೈವಾಡವಿತ್ತು. ದಾಳಿಯಲ್ಲಿ ಇಬ್ಬರು ಪೊಲೀಸರು ಮತ್ತು ಇಬ್ಬರು ನಾಗರಿಕರು ಸಾವಿಗೀಡಾಗಿದ್ದರು. ಶನಿವಾರ ತಡರಾತ್ರಿ ಕಾರ್ಯಾಚರಣೆ ನಡೆದಿತ್ತು.

ಪಶ್ಚಿಮ ಬಂಗಾಳದ ಹೌರಾ ಜಿಲ್ಲೆಯ ಉತ್ತರ ಬಟೋರಾ ದ್ವೀಪದಲ್ಲಿ ಮನೆ ಮನೆಗೆ ತೆರಳಿ ಕೋವಿಡ್ ಪರೀಕ್ಷೆ ಮತ್ತು ಲಸಿಕೆ ನೀಡುವ ಕಾರ್ಯಕ್ರಮ ನಡೆಯುತ್ತಿದೆ. ಗ್ರಾಮಸ್ಥರಿಗೆ ಕೋವಿಶೀಲ್ಡ್ ಲಸಿಕೆ ನೀಡಲು ಆರೋಗ್ಯ ಕಾರ್ಯಕರ್ತರು ಸೋಮವಾರ ಬೋಟ್ ಮೂಲಕ ಮುಂಡೇಶ್ವರಿ ನದಿಯನ್ನು ದಾಟಿದರು –ರಾಯಿಟರ್ಸ್ ಚಿತ್ರ

ಸಿಬಿಎಸ್‌ಇ 12ನೇ ತರಗತಿ ಪರೀಕ್ಷೆ ‘ಸುಪ್ರೀಂ’ಗೆ ಪ್ರಮಾಣಪತ್ರ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: 12ನೇ ತರಗತಿಗೆ ಅನ್ವಯಿಸಿ ಸಿಬಿಎಸ್‌ಇಯ ಫಲಿತಾಂಶ, ಮೌಲ್ಯಮಾಪನ ಮಾನದಂಡ ಕುರಿತಂತೆ ಸಮಾಧಾನವಿಲ್ಲದ ವಿದ್ಯಾರ್ಥಿಗಳಿಗಾಗಿ, ಪ್ರಮುಖ ವಿಷಯಗಳಿಗೆ ಪರೀಕ್ಷೆಯನ್ನು ಆಗಸ್ಟ್ 15 ಮತ್ತು ಸೆಪ್ಟೆಂಬರ್ 15, 2021ರ ನಡುವೆ ನಡೆಸಲಾಗುವುದು ಎಂದು ಸಿಬಿಎಸ್‌ಇ ಸೋಮವಾರ ತಿಳಿಸಿದೆ.

‘ಕೋವಿಡ್ ಪಿಡುಗು ಕುರಿತ ಪರಿಸ್ಥಿತಿಯನ್ನು ಆಧರಿಸಿ ಈ ಅವಧಿಯಲ್ಲಿ ಪರೀಕ್ಷೆಯನ್ನು ನಡೆಸಲಾಗುವುದು’ ಎಂದು ಸಿಬಿಎಸ್‌ಇ ಸೋಮವಾರ ಸುಪ್ರೀಂ ಕೋರ್ಟ್‌ಗೆ ಮಾಹಿತಿ ನೀಡಿದೆ. ಅಂತೆಯೇ, ಖಾಸಗಿ, ಪತ್ರಾಚಾರ್ ಮತ್ತು ಕಂಪಾರ್ಟ್‌ಮೆಂಟ್ ಪರೀಕ್ಷೆಗಳು ಇದೇ ಅವಧಿಯಲ್ಲಿ ನಡೆಯಲಿವೆ ಎಂದೂ ತಿಳಿಸಿದೆ.

ಫಲಿತಾಂಶ ಕುರಿತ ಗೊಂದಲ, ಸಂಶಯಗಳನ್ನು ಬಗೆಹರಿಸಬೇಕು ಎಂದ ಸುಪ್ರೀಂ ಕೋರ್ಟ್‌ನ ಸಲಹೆಗೆ ಸಿಬಿಎಸ್‌ಇ ಮಂಡಳಿಯು, ಫಲಿತಾಂಶ ಕ್ರೋಡೀಕರಣಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳನ್ನು ಮಂಡಳಿಯು ರಚಿಸಿರುವ ಸಮಿತಿಯ ಪರಾಮರ್ಶೆಗೆ ಒಪ್ಪಿಸಲಾಗುವುದು ಎಂದು ತಿಳಿಸಿತು.

‘ಜುಲೈ 31ರಂದು ಫಲಿತಾಂಶ ಪ್ರಕಟವಾಗಲಿದೆ. ಅಭ್ಯರ್ಥಿಗಳು ಫಲಿತಾಂಶ, ಅಂಕ ಕುರಿತು ತೃಪ್ತರಾಗದಿದ್ದಲ್ಲಿ ಸಿಬಿಎಸ್‌ಇಯು ಪರೀಕ್ಷೆಗಾಗಿ ಆನ್‌ಲೈನ್ ಮೂಲಕ ಹೆಸರು ನೋಂದಣಿಗೆ ಅವಕಾಶ ಕಲ್ಪಿಸಲಿದೆ. ಪರಿಸ್ಥಿತಿಯನ್ನು ಆಧರಿಸಿ ಕೇವಲ ಮುಖ್ಯ ವಿಷಯಗಳಿಗೆ ಮಾತ್ರ ಪರೀಕ್ಷೆಯನ್ನು ನಡೆಸಲಾಗುವುದು. ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನೇ ಅಂತಿಮವಾಗಿ ಪರಿಗಣಿಸಲಾಗುವುದು’ ಎಂದು ಸಿಬಿಎಸ್‌ಇ ತನ್ನ ಪ್ರಮಾಣಪತ್ರದಲ್ಲಿ ಸ್ಪಷ್ಟಪಡಿಸಿದೆ.

ಈ ಮಧ್ಯೆ, ನ್ಯಾಯಮೂರ್ತಿ ಎ.ಎಂ. ಖಾನ್‌ವಿಲ್ಕರ್ ನೇತೃತ್ವದ ಪೀಠವು, 12ನೇ ತರಗತಿ ವಿದ್ಯಾರ್ಥಿಗಳಿಗೆ ಫಲಿತಾಂಶ ಘೋಷಣೆಗೆ ಮೊದಲೇ ಸಾಂಪ್ರದಾಯಿಕ ಶೈಲಿಯಲ್ಲಿಯೇ ಪರೀಕ್ಷೆ ನಡಸಬೇಕು ಎಂದು ಕೋರಿರುವ ಅರ್ಜಿಯ ವಿಚಾರಣೆಯನ್ನು ಮಂಗಳವಾರ ತೆಗೆದುಕೊಳ್ಳಲು ನಿರ್ಧರಿಸಿತು.

12ನೇ ತರಗತಿ ಪರೀಕ್ಷೆಯನ್ನು ರದ್ದುಪಡಿಸಿದ ಬಳಿಕ ಸಿಬಿಎಸ್‌ಇಯು ಲಿಖಿತ ಮತ್ತು ಪ್ರಾಯೋಗಿಕ ವಿಭಾಗಗಳಲ್ಲಿ ನಿಗದಿತ ಮಾನದಂಡದ ಅನುಸಾರ ಮೌಲ್ಯಮಾಪನ ಮತ್ತು ಫಲಿತಾಂಶ ಅಂತಿಮಗೊಳಿಸುವ ಕಾರ್ಯಕ್ಕೆ ಚಾಲನೆ ನೀಡಿದೆ.

ವಂಚನೆಯ ಉದ್ದೇಶದ ಫ್ಲ್ಯಾಶ್‌ಸೇಲ್‌ಗೆ ನಿಷೇಧ: ಕೇಂದ್ರದ ಪ್ರಸ್ತಾವ

ನವದೆಹಲಿ (ಪಿಟಿಐ): ಇ-ಕಾಮರ್ಸ್ ತಾಣಗಳಲ್ಲಿ ಗ್ರಾಹಕರಿಗೆ ಉದ್ದೇಶಪೂರ್ವಕವಾಗಿ ತಪ್ಪು ಮಾಹಿತಿ ನೀಡಿ ಉತ್ಪನ್ನ ಮಾರಾಟ ಮಾಡುವುದು, ಫ್ಲ್ಯಾಶ್‌ಸೇಲ್ ಹೆಸರಿನಲ್ಲಿ ವಂಚನೆ ಮಾಡುವುದನ್ನು ತಡೆಯುವ ಉದ್ದೇಶದಿಂದ ‘ಗ್ರಾಹಕರ ಸಂರಕ್ಷಣೆ ನಿಯಮ – 2020’ಕ್ಕೆ ಕೆಲವು ಬದಲಾವಣೆಗಳನ್ನು ತರುವ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರ ಸಿದ್ಧಪಡಿಸಿದೆ. ಈ ಬಗ್ಗೆ ಅದು ಸಾರ್ವಜನಿಕರಿಂದ ಅಭಿಪ್ರಾಯ ಆಹ್ವಾನಿಸಿದೆ.

ಪ್ರಸ್ತಾವಿತ ಬದಲಾವಣೆಗಳ ಬಗ್ಗೆ ಸಾರ್ವಜನಿಕರು ತಮ್ಮ ಅನಿಸಿಕೆಗಳನ್ನು ಹದಿನೈದು ದಿನಗಳ ಒಳಗೆ js-ca@nic.in ವಿಳಾಸಕ್ಕೆ ಇ-ಮೇಲ್ ಮೂಲಕ ತಿಳಿಸಬಹುದು ಎಂದು ಗ್ರಾಹಕರ ವ್ಯವಹಾರಗಳ ಸಚಿವಾಲಯದ ಜಂಟಿ ಕಾರ್ಯದರ್ಶಿ ಅನುಪಮ್ ಮಿಶ್ರಾ ತಿಳಿಸಿದ್ದಾರೆ.

ಅತಿಯಾದ ಪ್ರಮಾಣದಲ್ಲಿ ರಿಯಾಯಿತಿಗಳನ್ನು ಘೋಷಿಸಿ, ಇನ್ನೊಂದು ಉತ್ಪನ್ನದ ಮಾರುಕಟ್ಟೆಯನ್ನು ಹಾಳುವ ಮಾಡುವ ಉದ್ದೇಶದ, ಕೆಲವು ಉದ್ದಿಮೆಗಳಿಗೆ ಮಾತ್ರ ನೆರವಾಗುವ ರೀತಿಯ ಇ-ವಾಣಿಜ್ಯ ವಹಿವಾಟುಗಳನ್ನು ನಿಷೇಧಿಸುವ ಪ್ರಸ್ತಾವ ಇದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಇ-ವಾಣಿಜ್ಯ ತಾಣಗಳು ಉತ್ಪನ್ನವೊಂದರ ಬೆಲೆಯನ್ನು ಗಣನೀಯವಾಗಿ ತಗ್ಗಿಸಿ, ನಿರ್ದಿಷ್ಟ ಅವಧಿಯಲ್ಲಿ ಮಾತ್ರ ಉತ್ಪನ್ನವನ್ನು ಮಾರಾಟ ಮಾಡುವುದನ್ನು ಪ್ರಸ್ತಾವಿತ ಬದಲಾವಣೆಯಲ್ಲಿ ‘ಫ್ಲ್ಯಾಶ್ ಸೇಲ್’ ಎಂದು ವ್ಯಾಖ್ಯಾನಿಸಲಾಗಿದೆ. ಇಂತಹ ಮಾರಾಟಗಳನ್ನು ನಿರ್ಬಂಧಿಸುವ ಉದ್ದೇಶವು ಪ್ರಸ್ತಾವಿತ ನಿಯಮಗಳಿಗೆ ಇದೆ.

ಉತ್ಪನ್ನಗಳ ಮಾಹಿತಿಯನ್ನು ಉದ್ದೇಶಪೂರ್ವಕವಾಗಿ ತಪ್ಪಾಗಿ ನೀಡಿ, ಆ ಮೂಲಕ ಆ ಉತ್ಪನ್ನವನ್ನು ಗ್ರಾಹಕರಿಗೆ ಮಾರಾಟ ಮಾಡುವುದನ್ನು ಕೂಡ ನಿರ್ಬಂಧಿಸುವ ಪ್ರಸ್ತಾವ ಇದರಲ್ಲಿ ಇದೆ. ಮಾರುಕಟ್ಟೆಯಲ್ಲಿ ಪ್ರಭಾವಿ ಸ್ಥಾನ ಹೊಂದಿರುವ ಇ-ಕಾಮರ್ಸ್ ಕಂಪನಿಗಳಿಗೆ ತಮ್ಮ ಸ್ಥಾನವನ್ನು ದುರ್ಬಳಕೆ ಮಾಡಿಕೊಳ್ಳಲು ಅವಕಾಶ ನೀಡುವುದಿಲ್ಲ ಎಂದು ಕೇಂದ್ರ ಸರ್ಕಾರ ಹೇಳಿದೆ.

3,000ಕ್ಕೂ ಹೆಚ್ಚು ಮಂದಿ ಭಾಗಿ: ಪರಸ್ಪರ ಅಂತರ ಪಾಲನೆ

ಟೈಮ್ಸ್ ಸ್ಕ್ವೇರ್‌ನಲ್ಲಿ ಯೋಗ ದಿನಾಚರಣೆ

ನ್ಯೂಯಾರ್ಕ್ (ಪಿಟಿಐ): ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ಅಂಗವಾಗಿ ಇಲ್ಲಿನ ಟೈಮ್ಸ್ ಸ್ಕ್ವೇರ್‌ನಲ್ಲಿ 3,000ಕ್ಕೂ ಹೆಚ್ಚು ಜನರು ಯೋಗಾಸನಗಳನ್ನು ಮಾಡಿದರು. ಕೋವಿಡ್ ಸಾಂಕ್ರಮಿಕದ ಹಿನ್ನೆಲೆಯಲ್ಲಿ ಅಂತರವನ್ನು ಪಾಲಿಸಲಾಯಿತು.

ಅಮೆರಿಕದಲ್ಲಿನ ಭಾರತದ ರಾಜತಾಂತ್ರಿಕರು ಟೈಮ್ಸ್ ಸ್ಕ್ವೇರ್ ಅಲಾಯನ್ಸ್ ಸಹಭಾಗಿತ್ವದಲ್ಲಿ ಭಾನುವಾರ 7ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಆಯೋಜಿಸಿದ್ದರು.

ಪ್ರತಿ ವರ್ಷ ಅಂತರರಾಷ್ಟ್ರೀಯ ಯೋಗ ದಿನವನ್ನು ಟೈಮ್ಸ್ ಸ್ಕ್ವೇರ್‌ನಲ್ಲಿ ಉತ್ಸಾಹದಿಂದ ಆಚರಿಸಲಾಗುತ್ತದೆ. ಈ ಬಾರಿಯ ಯೋಗ ದಿನಾಚರಣೆಗೆ ಭಾರಿ ಸಂಖ್ಯೆಯಲ್ಲಿ ಜನ ಸೇರಿದ್ದರು. ಈ ವೇಳೆ ಯೋಗಪಟುಗಳು ಯೋಗ, ಧ್ಯಾನಗಳನ್ನು ಮಾಡಿದರು. ಇದರಲ್ಲಿ ವಿವಿಧ ದೇಶದ ಪ್ರಜೆಗಳು ಕೂಡ ಪಾಲ್ಗೊಂಡಿದ್ದರು. ಟೈಮ್ಸ್ ಸ್ಕ್ವೇರ್‌ನಲ್ಲಿ ದೊಡ್ಡ ಎಲ್‌ಇಡಿ ಸ್ಕ್ರೀನ್‌ಗಳನ್ನು ಕೂಡ ಹಾಕಲಾಗಿತ್ತು.

ನ್ಯೂಯಾರ್ಕ್‌ನ ಟೈಮ್ಸ್ ಸ್ಕ್ವೇರ್‌ನಲ್ಲಿ ಆಯೋಜಿಸಿದ್ದ 7ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಭಾಗವಹಿಸಿದ ಯೋಗ ಉತ್ಸಾಹಿಗಳು –ಎಎಫ್‌ಪಿ ಚಿತ್ರ

ಡೆಪ್ಯುಟಿ ಕನ್ಸೂಲ್ ಜನರಲ್ ಶತ್ರುಘ್ನ ಸಿನ್ಹಾ, ಹಿರಿಯ ಅಧಿಕಾರಿಗಳು ಮತ್ತು ಭಾರತೀಯ ಸಂಜಾತ ಅಮೆರಿಕನ್ನರು ಈ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು. ಯೋಗ ಗುರು ರುಚಿಕಾ ಲಾಲ್ ಅವರು ಈ ಕಾರ್ಯಕ್ರಮವನ್ನು ಮುನ್ನಡೆಸಿದರು.

‘ನಾವು ವಿಶ್ವದ ವಿವಿಧ ಭಾಗಗಳಲ್ಲಿ ಯೋಗವನ್ನು ಆಚರಿಸುತ್ತಿದ್ದೇವೆ. ಅದರಲ್ಲು ಟೈಮ್ಸ್ ಸ್ಕ್ವೇರ್‌ನ ಯೋಗದಿನಾಚರಣೆ ಬಹಳ ವಿಶೇಷವಾಗಿದೆ. ಯೋಗವು ಸಾರ್ವತ್ರಿಕ ಕಲ್ಪನೆ ಮತ್ತು ಸಾರ್ವತ್ರಿಕ ಚಿಂತನೆ ಮತ್ತು ಸಾರ್ವತ್ರಿಕ ಕ್ರಿಯೆಯಾಗಿದೆ. ಸಾರ್ವತ್ರಿಕ ಚಿಂತನೆಯನ್ನು ಆಚರಿಸಲು ಟೈಮ್ಸ್ ಸ್ಕ್ವೇರ್‌ಗಿಂತ ಉತ್ತಮ ಸ್ಥಳ ಬೇರೆ ಯಾವುದು’ ಎಂದು ಭಾರತದ ಕನ್ಸೂಲ್ ಜನರಲ್ ರಣಧೀರ್ ಜೈಸ್ವಾಲ್ ಅಭಿಪ್ರಾಯಪಟ್ಟರು.

ಈ ವರ್ಷ ‘ಸ್ವಾಸ್ಥ್ಯಕ್ಕಾಗಿ ಯೋಗ’ ಎಂಬ ಧ್ಯೇಯವಾಕ್ಯದೊಂದಿಗೆ ಅಂತರರಾಷ್ಟ್ರೀಯ ಯೋಗ ದಿನ ಆಚರಿಸಲಾಯಿತು. ಈ ವೇಳೆ ಟ್ರೈಬ್ಸ್ ಇಂಡಿಯಾ (ಟ್ರಫೆಡ್) ಸೇರಿದಂತೆ ಇತರೆ ಭಾರತೀಯ ಕಂಪನಿಗಳು ಆಯುರ್ವೇದ, ನೈಸರ್ಗಿಕ ಉತ್ಪನ್ನಗಳನ್ನು ಪ್ರದರ್ಶಿಸಿದವು ಎಂದು ಹೇಳಿದರು.



ಷೇರುಪೇಟೆ ವಹಿವಾಟು	230
ಹಿಂದಿನ ಅಂತ್ಯ	52,344
ಇಂದಿನ ಅಂತ್ಯ	52,574

ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ	15,682
ಇಂದಿನ ಅಂತ್ಯ	15,745
▲	63
ದಿನದ ಗರಿಷ್ಠ	15,765

ವಿನಿಮಯ ದರ	
$ ಡಾಲರ್	74.10
£ ಪೌಂಡ್	102.77
€ ಯುರೊ	88.15
¥ ಯೆನ್ (100ಕ್ಕೆ)	67

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹520
12 ಮೊಟ್ಟೆಗೆ ₹70
ಮೈಸೂರು
100 ಮೊಟ್ಟೆಗೆ ₹520

2020ರಲ್ಲಿ ದೇಶದಲ್ಲಿ ₹ 4.74 ಲಕ್ಷ ಕೋಟಿ ಹೂಡಿಕೆ

ಎಫ್‌ಡಿಐ ಒಳಹರಿವು ಹೆಚ್ಚಳ

ವಿಶ್ವಸಂಸ್ಥೆ (ಪಿಟಿಐ): ವಿದೇಶಿ ನೇರ ಬಂಡವಾಳ ಹೂಡಿಕೆಯ (ಎಫ್‌ಡಿಐ) ರೂಪದಲ್ಲಿ ಭಾರತವು 2019ರಲ್ಲಿ ಸ್ವೀಕರಿಸಿರುವ ಮೊತ್ತಕ್ಕೆ ಹೋಲಿಸಿದರೆ 2020ರಲ್ಲಿ ಶೇಕಡ 27ರಷ್ಟು ಏರಿಕೆ ಆಗಿದೆ ಎಂದು ವಿಶ್ವಸಂಸ್ಥೆಯ ವರದಿ ತಿಳಿಸಿದೆ.

2019ರಲ್ಲಿ ಭಾರತಕ್ಕೆ ₹ 3.78 ಲಕ್ಷ ಕೋಟಿ ಎಫ್‌ಡಿಐ ಹರಿದುಬಂದಿತ್ತು. ಇದು 2020ರಲ್ಲಿ ₹ 4.74 ಲಕ್ಷ ಕೋಟಿಗೆ ಏರಿಕೆ ಆಗಿದ್ದು, ಅತಿ ಹೆಚ್ಚಿನ ಎಫ್‌ಡಿಐ ಒಳಹರಿವು ಕಂಡಿರುವ ದೇಶಗಳ ಸಾಲಿನಲ್ಲಿ ಭಾರತ ಐದನೇ ಸ್ಥಾನದಲ್ಲಿದೆ ಎಂದು ವರದಿ ಹೇಳಿದೆ.

ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ (ಐಸಿಟಿ) ಉದ್ಯಮದಲ್ಲಿ ಆಗಿರುವ ಸ್ವಾಧೀನ ವಹಿವಾಟುಗಳಿಂದಾಗಿ ಒಳಹರಿವು ಹೆಚ್ಚಾಗಿದೆ. ಸೋಮವಾರ ಬಿಡುಗಡೆ ಆಗಿರುವ ವಿಶ್ವಸಂಸ್ಥೆಯ ವ್ಯಾಪಾರ ಮತ್ತು ಅಭಿವೃದ್ಧಿ ಸಮ್ಮೇಳನದ (ಯುಎನ್‌ಸಿಟಿಎಡಿ) 2021ರ ‘ದಿ ವರ್ಲ್ಡ್ ಇನ್‌ವೆಸ್ಟ್‌ಮೆಂಟ್ ರಿಪೋರ್ಟ್’ನಲ್ಲಿ ಈ ಮಾಹಿತಿ ಇದೆ.

ಸಾಂಕ್ರಾಮಿಕ ಕೋವಿಡ್ ಮ

ಒಲಿಂಪಿಕ್ಸ್: ಪರಿಸ್ಥಿತಿ ಬಿಗಡಾಯಿಸಿದರೆ ನಿರ್ಧಾರ ಹಿಂತೆಗೆತ– ಪ್ರಧಾನಿ ಸೂಗ

10 ಸಾವಿರ ಪ್ರೇಕ್ಷಕರಿಗೆ ಅವಕಾಶ

ಟೋಕಿಯೊ (ಎಪಿ): ಮುಂದಿನ ತಿಂಗಳ ಕೊನೆಯಲ್ಲಿ ಆರಂಭವಾಗಲಿರುವ ಒಲಿಂಪಿಕ್ಸ್ ಕೂಟದ ವೇಳೆ ಪ್ರತಿ ಕ್ರೀಡಾಂಗಣದಲ್ಲಿ 10 ಸಾವಿರ ಸ್ಥಳೀಯ ಪ್ರೇಕ್ಷಕರು ಸ್ಪರ್ಧೆಗಳನ್ನು ವೀಕ್ಷಿಸಲು ಅವಕಾಶ ನೀಡಲಾಗುವುದು ಎಂದು ಆಯೋಜನಾ ಸಮಿತಿ ಸೋಮವಾರ ತಿಳಿಸಿದೆ. ಪರಿಸ್ಥಿತಿ ಬಿಗಡಾಯಿಸಿದರೆ ನಿರ್ಧಾರ ಹಿಂತೆಗೆದುಕೊಳ್ಳುವುದಾಗಿ ಜಪಾನ್ ಪ್ರಧಾನಿ ಯೊಶಿಡೆ ಸೂಗ ಎಚ್ಚರಿಕೆ ನೀಡಿದ್ದಾರೆ.


ಟೋಕಿಯೊ ಒಲಿಂಪಿಕ್ಸ್‌ಗೆ ಸಜ್ಜಾಗಿರುವ ರಾಷ್ಟ್ರೀಯ ಕ್ರೀಡಾಂಗಣ –ಎಎಫ್‌ಪಿ ಚಿತ್ರ

ಒಲಿಂಪಿಕ್ಸ್‌ಗೆ ವಿದೇಶಿ ಪ್ರೇಕ್ಷಕರ ಮೇಲೆ ಈಗಾಗಲೇ ನಿಷೇಧ ಹೇರಲಾಗಿದೆ. ಸ್ಥಳೀಯ ಪ್ರೇಕ್ಷಕರ ಬಗ್ಗೆ ಶೀಘ್ರದಲ್ಲೇ ನಿರ್ಧಾರ ಕೈಗೊಳ್ಳುವುದಾಗಿ ಸಮಿತಿಯವರು ಪದೇ ಪದೇ ಹೇಳುತ್ತಾ ಬಂದಿದ್ದರು. ಸೋಮವಾರ ಆನ್‌ಲೈನ್ ಮೂಲಕ ನಡೆದ ಸಭೆಯ ನಂತರ ಆಯೋಜನಾ ಸಮಿತಿ ಮತ್ತು ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ (ಐಒಸಿ) ಈ ಕುರಿತ ಅಂತಿಮ ತೀರ್ಮಾನ ಪ್ರಕಟಿಸಿತು.

ಸಭೆಯಲ್ಲಿ ಸ್ಥಳೀಯ ಆಯೋಜಕರು, ಐಒಸಿ, ಅಂತರರಾಷ್ಟ್ರೀಯ ಪ್ಯಾರಾಲಿಂಪಿಕ್ ಸಮಿತಿ, ಜಪಾನ್ ಸರ್ಕಾರದ ಪ್ರತಿನಿಧಿಗಳು ಮತ್ತು ಟೋಕಿಯೊ ಮೆಟ್ರೊಪಾಲಿಟನ್ ಸರ್ಕಾರದ ಪ್ರತಿನಿಧಿಗಳು ಪಾಲ್ಗೊಂಡಿದ್ದರು. ಪ್ರೇಕ್ಷಕರಿಲ್ಲದೆ ಕ್ರೀಡಾಕೂಟ ಆಯೋಜಿಸುವುದು ಅತ್ಯಂತ ಸೂಕ್ತ ಎಂದು ದೇಶದ ಪ್ರಮುಖ ವೈದ್ಯ ಶಿಗೇರು ಒಮಿ ಕಳೆದ ವಾರ ಶಿಫಾರಸು ಮಾಡಿದ್ದರು. ಅದನ್ನು ಕಡೆಗಣಿಸಿ ಈ ನಿರ್ಧಾರ ಕೈಗೊಳ್ಳಲಾಗಿದೆ.

ಟೋಕಿಯೊ ಒಲಿಂಪಿಕ್ಸ್ ಜುಲೈ 23ರಂದು ಆರಂಭಗೊಳ್ಳಲಿದೆ. ಸ್ಥಳೀಯರನ್ನು ಪರತ್ತುಗಳಿಗೆ ಒಳಪಡಿಸಿ ಒಳಗೆ ಬಿಡಲಾಗುವುದು ಎಂದು ತಿಳಿಸಲಾಗಿದೆ. ಸ್ಪರ್ಧೆಗಳು ನಡೆಯುವಾಗ ಸಂಭ್ರಮ ಆಚರಿಸಲು ಪ್ರೇಕ್ಷಕರಿಗೆ ಅವಕಾಶವಿಲ್ಲ. ಮಾಸ್ಕ್ ಧರಿಸದ ಯಾರನ್ನೂ ಒಳಗೆ ಬಿಡಲಾಗುವುದಿಲ್ಲ. ಸ್ಪರ್ಧೆ ಮುಗಿದ ನಂತರ ಎಲ್ಲೂ ನಿಲ್ಲದೆ ನೇರವಾಗಿ ಮನೆಗೆ ತೆರಳಬೇಕು ಎಂದು ಸೂಚಿಸಲಾಗಿದೆ.

ಜುಲೈ 11ರ ವರೆಗೆ ಟೋಕಿಯೊ ಮತ್ತು ಸುತ್ತಮುತ್ತ ಆರೋಗ್ಯ ತುರ್ತು ಪರಿಸ್ಥಿತಿ ಘೋಷಿಸಲಾಗಿತ್ತು. ಮತ್ತಷ್ಟು ಕಠಿಣ ನಿರ್ಬಂಧಗಳೊಂದಿಗೆ ಇದನ್ನು ಕಳೆದ ವಾರದ ವರೆಗೆ ವಿಸ್ತರಿಸಲಾಗಿತ್ತು.

ಕೇಶವ ಹ್ಯಾಟ್ರಿಕ್: ದಕ್ಷಿಣ ಆಫ್ರಿಕಾ ತಂಡಕ್ಕೆ ಜಯ

ಕೇಶವ ಮಹಾರಾಜ್

ಗ್ರಾಸ್ ಐಲೆಟ್ (ರಾಯಿಟರ್ಸ್): ಸ್ಪಿನ್ನರ್ ಕೇಶವ ಮಹಾರಾಜ್ ಗಳಿಸಿದ ಹ್ಯಾಟ್ರಿಕ್ ವಿಕೆಟ್ ನೆರವಿನಿಂದ ದಕ್ಷಿಣ ಆಫ್ರಿಕಾ ತಂಡವು ಎರಡನೇ ಟೆಸ್ಟ್‌ನಲ್ಲಿ ವೆಸ್ಟ್ ಇಂಡೀಸ್ ತಂಡವನ್ನು 158 ರನ್‌ಗಳಿಂದ ಮಣಿಸಿ ಸರಣಿಯನ್ನು 2-0 ಯಿಂದ ಗೆದ್ದುಕೊಂಡಿತು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ದಕ್ಷಿಣ ಆಫ್ರಿಕಾ: 112.4 ಓವರ್‌ಗಳಲ್ಲಿ 298: ವೆಸ್ಟ್ ಇಂಡೀಸ್: 54 ಓವರ್‌ಗಳಲ್ಲಿ 149: ಎರಡನೇ ಇನಿಂಗ್ಸ್:ದಕ್ಷಿಣ ಆಫ್ರಿಕಾ: 53 ಓವರ್‌ಗಳಲ್ಲಿ 174: ವೆಸ್ಟ್ ಇಂಡೀಸ್: 58.3 ಓವರ್‌ಗಳಲ್ಲಿ 165 (ಕೀರನ್ ಪೊವೆಲ್ 51; ಕೇಶವ ಮಹಾರಾಜ್ 36ಕ್ಕೆ 5, ಕಗಿಸೊ ರಬಾಡ 44ಕ್ಕೆ 3). **ಫಲಿತಾಂಶ:** ದಕ್ಷಿಣ ಆಫ್ರಿಕಾಕ್ಕೆ 158 ರನ್ ಜಯ.

ದಾಖಲೆ ಬರೆದ ತಜಿಂದರ್‌ಗೆ ಒಲಿಂಪಿಕ್ಸ್ ಟಿಕೆಟ್

ಪಟಿಯಾಲ (ಪಿಟಿಐ): ಶಾಟ್‌ಪಟ್‌ನಲ್ಲಿ ರಾಷ್ಟ್ರೀಯ ದಾಖಲೆ ಬರೆದ ತಜಿಂದರ್ ಸಿಂಗ್ ತೂರ್ ಅವರು ಟೋಕಿಯೊ ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಿದರು. ಇಲ್ಲಿ ಸೋಮವಾರ ಆರಂಭಗೊಂಡ ಇಂಡಿಯನ್ ಗ್ರ್ಯಾನ್ ಪ್ರಿ ನಾಲ್ಕರಲ್ಲಿ ತೂರ್ 21.49 ಮೀಟರ್‌ಗಳ ಸಾಧನೆ ಮಾಡಿದರು. ಈ ಮೂಲಕ ತಮ್ಮದೇ ಹೆಸರಿನಲ್ಲಿದ್ದ ದಾಖಲೆಯನ್ನು (20.92 ಮೀ; 2019) ಮುರಿದರು. ಒಲಿಂಪಿಕ್ಸ್ ಅರ್ಹತೆಗೆ 21.10 ಮೀಟರ್ಸ್ ನಿಗದಿ ಮಾಡಲಾಗಿತ್ತು.

ಮಹಿಳೆಯರ ರಿಲೆ ತಂಡ 43.37 ಸೆಕೆಂಡುಗಳ ಸಾಧನೆಯೊಂದಿಗೆ ದಾಖಲೆ ಬರೆಯಿತು. ತಜಿಂದರ್ ಸಿಂಗ್ ಆದರೆ ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಲು ವಿಫಲವಾಯಿತು. ಹಿಮಾ ದಾಸ್, ದ್ಯುತಿ ಚಾಂದ್, ಎಸ್. ಧನಲಕ್ಷ್ಮಿ ಮತ್ತು ಅರ್ಚನಾ ಸುಶೀಂದ್ರನ್ ಅವರನ್ನು ಒಳಗೊಂಡ ತಂಡ ಭಾರತ 'ಬಿ' ತಂಡವನ್ನು (48.2 ಸೆಕೆಂಡು) ಸೋಲಿಸಿ ಮೆರ್ಲಿನ್ ಜೋಸೆಫ್, ಎಚ್.ಎಂ.ಜ್ಯೋತಿ, ಶ್ರಬನಿ ನಂದಾ ಮತ್ತು ದ್ಯುತಿ 2016ರಲ್ಲಿ ಮಾಡಿದ ದಾಖಲೆಯನ್ನು (43.42 ಸೆ) ಹಿಂದಿಕ್ಕಿತು. ಸ್ಪ್ರಿಂಟರ್ ದ್ಯುತಿ ಚಾಂದ್ 100 ಮೀಟರ್ಸ್ ಓಟದಲ್ಲಿ ದಾಖಲೆ ಮಾಡಿದರು. 11.17 ಸೆಕೆಂಡುಗಳಲ್ಲಿ ಗುರಿ ಮುಟ್ಟಿದ ಅವರು ತಮ್ಮದೇ ಹೆಸರಿನಲ್ಲಿದ್ದ (11.21 ಸೆ) ದಾಖಲೆ ಮುರಿದರು. ಮಹಿಳೆಯರ ಡಿಸ್ಕಸ್ ಥ್ರೋದಲ್ಲಿ ಕಮಲ್‌ಪ್ರೀತ್ ಕೌರ್ 66.59 ಮೀಟರ್ಸ್ ದೂರ ಎಸೆದು ತಮ್ಮದೇ ಹೆಸರಿನಲ್ಲಿದ್ದ ದಾಖಲೆ ಮೀರಿದರು.

ಡಬ್ಲ್ಯುಟಿಸಿ ಫೈನಲ್: ನೀರಸ ಅಂತ್ಯದತ್ತ 'ಐತಿಹಾಸಿಕ' ಪಂದ್ಯ

ನಾಲ್ಕನೇ ದಿನವೂ ಮಳೆ ಆಟ

ಸೌತಾಂಪ್ಟನ್ (ಪಿಟಿಐ): ಐತಿಹಾಸಿಕ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ನೀರಸ ಅಂತ್ಯದತ್ತ ಸಾಗಿದೆ. ಮಳೆಯಿಂದಾಗಿ ಫೈನಲ್ ಪಂದ್ಯದ ನಾಲ್ಕನೇ ದಿನವಾದ ಸೋಮವಾರ ಆಟ ನಡೆಯಲೇ ಇಲ್ಲ. ಹೀಗಾಗಿ ಪಂದ್ಯ ಡ್ರಾ ಆಗುವುದು ಬಹುತೇಕ ಖಚಿತವಾಗಿದೆ.

ಹ್ಯಾಂಪ್‌ಶೈರ್ ಬೌಲ್‌ನಲ್ಲಿ ನಡೆಯುತ್ತಿರುವ ಪಂದ್ಯದ ಮೊದಲ ದಿನವಿಡೀ ಮಳೆಯಿಂದಾಗಿ ರದ್ದಾಗಿತ್ತು. ನಂತರದ ಎರಡು ದಿನಗಳಲ್ಲಿ ಪದೇ ಪದೇ ಮಳೆ ಕಾಡಿತ್ತು. ಎರಡನೇ ದಿನ 64.4 ಓವರ್‌ಗಳ ಆಟ ನಡೆದಿದ್ದರೆ ಮೂರನೇ ದಿನ 76.3 ಓವರ್‌ಗಳನ್ನಷ್ಟೇ ಹಾಕಲು ಸಾಧ್ಯವಾಗಿತ್ತು. ಸೋಮವಾರ ಬೆಳಿಗ್ಗೆಯಿಂದಲೇ ಮಳೆ ಕಾಡಿತ್ತು. ನಾಲ್ಕೂವರೆ ತಾಸು ಕಾದು ಕುಳಿತ ನಂತರ ಸ್ಥಳೀಯ ಕಾಲ ಮೂರು ಗಂಟೆಗೆ ದಿನದಾಟವನ್ನು ಅಂಪೈರ್‌ಗಳು ರದ್ದುಗೊಳಿಸಿದರು.

'ಗುಡುಗು ಸಹಿತ ಮಳೆಯಿಂದಾಗಿ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ನ ನಾಲ್ಕನೇ ದಿನದಾಟವನ್ನು ರದ್ದುಗೊಳಿಸಲಾಗಿದೆ. ಇಷ್ಟು ಹೊತ್ತು ಕಾದಿದ್ದ ಪ್ರೇಕ್ಷಕರಿಗೆ ಸಹಜವಾಗಿ ನಿರಾಸೆಯಾಗಿದೆ. ತಾಳ್ಮೆ ಕಳೆದುಕೊಳ್ಳದೆ ಇದ್ದ ಅವರಿಗೆ ಕೃತಜ್ಞತೆಗಳು' ಎಂದು ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ (ಐಸಿಸಿ) ಟ್ವೀಟ್ ಮಾಡಿದೆ.

ಭಾರತ ಮೊದಲ ಇನಿಂಗ್ಸ್‌ನಲ್ಲಿ 217 ರನ್ ಗಳಿಸಿದ್ದು ನ್ಯೂಜಿಲೆಂಡ್ 49 ಓವರ್‌ಗಳಲ್ಲಿ ಎರಡು ವಿಕೆಟ್‌ಗಳಿಗೆ 101 ರನ್ ಗಳಿಸಿದೆ.

ಆರನೇ ದಿನದ ಟಿಕೆಟ್ ದರ ಕಡಿತ

ಪಂದ್ಯಕ್ಕೆ ಕಾಯ್ದಿರಿಸಿದ ಆರನೇ ದಿನದ ಟಿಕೆಟ್ ದರವನ್ನು ಐಸಿಸಿ ಕಡಿತಗೊಳಿಸಿದೆ. ನಾಲ್ಕೂ ದಿನಗಳ ಆಟದಲ್ಲಿ 141.1 ಓವರ್‌ಗಳ ಆಟವಷ್ಟೇ ನಡೆದಿತ್ತು. ಹೀಗಾಗಿ ಕಾಯ್ದಿರಿಸಿದ ದಿನವನ್ನು ಬಳಸಿಕೊಳ್ಳುವುದು ಖಚಿತ. ಆದ್ದರಿಂದ ಆ ದಿನದ ಟಿಕೆಟ್‌ಗಳನ್ನು ಮಾರಾಟ ಮಾಡಲು ನಿರ್ಧರಿಸಲಾಗಿದೆ. ಫೈನಲ್ ಪಂದ್ಯದ ಟಿಕೆಟ್ ದರವನ್ನು ₹ 15,444, ₹ 10,296 ಮತ್ತು ₹ 7722 ಎಂದು ನಿಗದಿ ಮಾಡಲಾಗಿತ್ತು. ಕೊನೆಯ ದಿನ ಇದನ್ನು ಕ್ರಮವಾಗಿ ₹ 10,296, ₹ 7722 ಹಾಗೂ ₹ 5148ಕ್ಕೆ ಇಳಿಸಲಾಗಿದೆ.

ಆಸ್ಟ್ರಿಯಾಗೆ ಜಯ

ಬುಕಾರೆಸ್ಟ್,(ಎಎಫ್‌ಪಿ): ಕ್ರಿಸ್ಟೋಫ್ ಬಾಮ್‌ಗಾರ್ಟನರ್ ಗಳಿಸಿದ ಗೋಲಿನ ಬಲದಿಂದ ಆಸ್ಟ್ರಿಯಾ ತಂಡವು ಉಕ್ರೇನ್ ತಂಡವನ್ನು ಮಣಿಸಿ ಯೂರೊ ಕಪ್ ಫುಟ್‌ಬಾಲ್ ಟೂರ್ನಿಯ ಪ್ರೀಕ್ವಾರ್ಟರ್‌ಫೈನಲ್ ತಲುಪಿತು.

ಸೋಮವಾರ ಇಲ್ಲಿ ನಡೆದ ಚಾಂಪಿಯನ್‌ಷಿಪ್‌ನ 'ಸಿ' ಗುಂಪಿನ ಹಣಾಹಣಿಯಲ್ಲಿ ಕ್ರಿಸ್ಟೋಫ್ ಅವರು 21ನೇ ನಿಮಿಷದಲ್ಲಿ ಗೋಲು ದಾಖಲಿಸಿದರು.